ಯಾರಾದರೂ ಬುದ್ದಿ ಹೇಳಿರಬೇಕು ಅದಕ್ಕೆ ಹಿಂತೆಗೆದುಕೊಂಡರು ಎಂದು ಹೇಳಿದರು ಇದರ ಅರ್ಥ ಏನು? ಒಳ್ಳೆಯ ಮಾತನ್ನು ಹೇಳಿದರು.

ಉಪಾಧ್ಯಕ್ಷರು:- ಈ ವಿಷಯಕ್ಕೆ ಈಗಾಗಲೇ ಅವರು ಉತ್ತರ ಕೊಟ್ಟು ತೆರೆ ಎಳೆಯಲಾಗಿದೆ ಪುನ: ಅದರ ಪ್ರಸ್ತಾಪ ಮಾಡುವುದು ಬೇಡ, ಮಾನ್ಯ ವೈ.ಕೆ.ರಾಮಯ್ಯ ನವರೇ, ತಾವು ಮುಂದುವರೆಸಿ, ದಯವಿಟ್ಟು ಯಾರಿಗೂ ಯೀಲ್ಡ್ ಆಗಬೇಡಿ.

4) ವಿತ್ತೀಯ ಕಾರ್ಯಕಲಾಪಗಳು 2003-04 ನೇ ಸಾಲಿನ ಬೇಡಿಕೆಗಳ ಮೇಲಿನ ಮುಂದುವರಿದ ಚರ್ಚೆ.

+ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಉಪಾಧ್ಯಕ್ಷರೆ, ನಾನೀಗಾಗಲೇ ಹೇಳಿದಂತೆ ರಾಜ್ಯದಲ್ಲಿರುವ 12 ಮೆಗಾ ಪ್ರಾಜೆಕ್ಟ್‌ಗಳಿಗೂ, 4330 ಕೋಟಿ ರೂ ತೆರಿಗೆ ವಿನಾಯಿತಿ, ಯಾರ್‍ಯಾರಿಗೆ ಎನ್ನುವುದೂ ಕೂಡ ನನ್ನ ಹತ್ತಿರ ಪಟ್ಟಿ ಇದೆ, ಯಾರು ಬಡವರಿಗೆ ಕೊಟ್ಟಿದ್ದರೆ ಅಥವಾ ನಮ್ಮ ರೈತರಿಗೆ ಕೊಟ್ಟಿದ್ದರೆ ಬಹಳ ಸಂತೋಷವಾಗಿ ಹೋಗಲಿ ಬಿಡಪ್ಪ ಯಾರೋ ರೈತರಿಗೆ ಕೊಟ್ಟಿದ್ದಾರೆ ಜನ ಸಾಮಾನ್ಯರಿಗೆ ಕೊಟ್ಟಿದ್ದಾರೆಂದು ಸಮಾಧಾನ ಪಡಬಹುದಾಗಿತ್ತು. ನೂರು ಕೋಟಿ ರೂಪಾಯಿಗಳಿಂತ ಹೆಚ್ಚಿನ ಹಣವನ್ನು ಅವರು ಬಂಡವಾಳವಾಗಿ ಹೂಡಿರತಕ್ಕಂಥ ಮೆಗಾ ಪ್ರಾಜೆಕ್ಟ್‌ಗಳಿಗೆ ಸುಮಾರು 12ಕ್ಕೆ 4330 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದೇರೀತಿಯಾಗಿ ಇನ್ನು 38 ಮೆಗಾ ಪ್ರಾಜೆಕ್ಟ್‌ಗಳಿಗೆ 6889 ಕೋಟಿ ರೂಪಾಯಿಗಳನ್ನು ಡೆಫರ್ಡ್ ಪೇಮೆಂಟ್ಸ್ ಅಂದರೆ ತೆರಿಗೆಯ ಸ್ವೀಕೃತಿಯನ್ನು ಮುಂದಕ್ಕೆ ಹಾಕುವುದು, ವಿನಾಯಿತಿ ನಾಲ್ಕು ಸಾವಿರ ಕೋಟಿ ರೂ.ತೆರಿಗೆ ಕಲೆಕ್ಷನ್ ಅನ್ನು ಮುಂದಕ್ಕೆ ಹಾಕಿರುವಂಥದ್ದು 6800 ಕೋಟಿ, ರೂ. ಒಟ್ಟಾರೆ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದಂಥ ಹಣಕ್ಕೆ ಹಾಕಿದಂಥ ದೋಖಾ 11,219 ಕೋಟಿ ರೂ. ಇದನ್ನು ನಾವು ಯಾರಿಗೆ ಹೇಳೋಣ? Who have dried the sources? ಕರ್ನಾಟಕ ರಾಜ್ಯದ ಸಂಪನ್ಮೂಲಗಳ ನದಿಗಳ ಬತ್ತಿ ಹೋಗಲಿಕ್ಕೆ ಯಾರು ಕಾರಣ? ಅದು ಒಂದು ವರ್ಷಕ್ಕಲ್ಲ, ಎರಡು ವರ್ಷಕ್ಕಲ್ಲ, ಕನಿಷ್ಠ 5 ವರ್ಷಕ್ಕೆ ಗರಿಷ್ಠ 14 ವರ್ಷಕ್ಕೆ. ಇದರ ಅರ್ಥ ಏನೆಂದರೆ, ಇನ್ನು ನಾಲ್ಕಾರು ವರ್ಷಗಳ ಕಾಲ ಇಷ್ಟು ಸಾವಿರ ಕೋಟಿ ರೂ. ತೆರಿಗೆ ವಿನಾಯಿತಿಯಿಂದ ಈ ಸರ್ಕಾರ ಬಳಲಬೇಕಾಗಿದೆ. ಈ ಸರ್ಕಾರದ ಆರ್ಥಿಕ ಪರಿಸ್ಥಿತಿಯ ಆರೋಗ್ಯ ಕೆಡಬೇಕಾಗಿದೆ. ಇದಕ್ಕೆ ಯಾರು ಹೊಣೆ? ಕರ್ನಾಟಕ ರಾಜ್ಯ ಬೊಕ್ಕಸಕ್ಕೆ ಬರಬೇಕಾಗಿದ್ದು ಎರಡು ಇಲಾಖೆಗಳಿಂದ ಹೆಚ್ಚಿಗೆ ನಮಗೆ ಬರಬೇಕಾಗಿರುವ ಮೂಲಗಳು, (1) ಮಾರಾಟ ತೆರಿಗೆ ಇಲಾಖೆ (2) ಅಬಕಾರಿ ಇಲಾಖೆ. ಮಾರಾಟ ತೆರಿಗೆ ಇಲಾಖೆಯಲ್ಲಿ ತೆರಿಗೆ ಕೊಡುವವರ ಪದ್ಧತಿಯನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ, ಮಾರಾಟ ತೆರಿಗೆಯಲ್ಲಿ ನೂರಕ್ಕೆ ತೊಂಭತ್ತರಷ್ಟು ಭಾಗವನ್ನು ಈ ಇಪ್ಪತ್ತೆಂಟು ಪರ್ಸೆಂಟ್ ಜನ ಕೊಡಬೇಕು, 28 ಪರ್ಸೆಂಟ್‌ನಿಂದ, ನಮಗೆ 90 ಪರ್ಸೆಂಟ್ ಟ್ಯಾಕ್ಸ್ ಬರುತ್ತದೆ. ಇನ್ನು 20 ಪರ್ಸೆಂಟ್‌ನಿಂದ 10 ಪರ್ಸೆಂಟ್ ಬರುತ್ತದೆ, 80 ಪರ್ಸೆಂಟ್‌ನಿಂದ 10 ಪರ್ಸೆಂಟ್ ಬರುತ್ತದೆ. ಆದುದರಿಂದ, ಈ ಮೂಲ ಬತ್ತಿ ಹೋಗುವುದಕ್ಕೆ 11 ಸಾವಿರ ಕೋಟಿ ರೂಪಾಯಿಗಳು ಯಾವುದು ಎಕ್ಸೆಂಪ್ಷನ್ ಮತ್ತು ಡೆಫರ್ಡ್ ಪೇಮೆಂಟ್ ಸೇಲ್ಸ್ ಟ್ಯಾಕ್ಸ್, ಇದೆಯೋ this has affected the health of the Karnataka finances. ಇದರ ಜೊತೆಗೆ ಮತ್ತೊಂದು ಇಲಾಖೆ ಅಬಕಾರಿ ಇಲಾಖೆ. 1993 ನೇ ಇಸ್ವಿಯಲ್ಲಿ ಮಾನ್ಯ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಯಾಗಿದ್ದರು, ಅವರು ಒಂದು ಆಜ್ಞೆಯನ್ನು ತಂದರು, ಅದೇನೆಂದರೆ, ಕರ್ನಾಟಕದಲ್ಲಿ ಉತ್ಪತ್ತಿಯಾಗತಕ್ಕಂಥ ಇಡೀ ಮದ್ಯ ಎಂಎಸ್‌ಐಎಲ್

ಮುಖಾಂತರವೇ ಅದು ಹೊರಗೆ ಬರಬೇಕು, it should be channelised through MSIL. ಸರ್ಕಾರದ ಯಾವ ಸಂಸ್ಥೆ ಇದಿಯೋ ಅದರ ಮುಖಾಂತರವೇ ಇದು ಬರಬೇಕೆಂದು 1993ನೇ ಇಸ್ವಿಯಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದರು. ಈ ರಾಜ್ಯದ ಮದ್ಯದ ತಯಾರಕರು ಹೈಕೋರ್ಟಿಗೆ ಹಾಕಿದರು, ಅದೃಷ್ಟವಶಾತ್ ನ್ಯಾಯಾಲಯ ಸರ್ಕಾರದವರು ತೆಗೆದುಕೊಂಡಿರುವ ತೀರ್ಮಾನ ಸರಿಯಿದೆ ಎಂದು ತೀರ್ಮಾನಕ್ಕೆ ಬಂದರು, ಅದರ ಮೇಲೆ ಅವರು ಸುಪ್ರೀಂಕೋರ್ಟಿಗೆ ಹೋದರು, ಅಲ್ಲೂಕೂಡ ಕರ್ನಾಟಕ ಸರ್ಕಾರ ತೆಗೆದುಕೊಂಡಿರುವ ತೀರ್ಮಾನ ಕರ್ನಾಟಕ ರಾಜ್ಯದ ಆರ್ಥಿಕ ದೃಷ್ಟಿಯಿಂದ ಅತ್ಯಂತ ಉತ್ತಮವಾದ ತೀರ್ಮಾನ, ಆದುದರಿಂದ "we don't interfere with the decision of the High Court" ಎಂದು ಹೇಳಿ ರಿವಿಜಿನ್ ಪಿಟಿಷನ್ ಅನ್ನು ವಜಾ ಮಾಡಿತು. ನೀವು ಏನು ಮಾಡಿದಿರಿ? ಹೈಕೋರ್ಟಿನವರು ಸರ್ಕಾರ ಮಾಡಿರುವುದು ಸರಿ ಇದೆ ಎಂದು 1993 ರಲ್ಲಿ ಹೇಳಿದರು, 1995ರಲ್ಲಿ ಸುಪ್ರೀಂ ಕೋರ್ಟಿನವರು ಸರ್ಕಾರ ಮಾಡಿರುವುದು ಸರಿ ಇದೆ ಎಂದು ಹೇಳಿದರು. 1997ರಲ್ಲಿ the then Government has amended the Excise Act itself in order to invalidate the Supreme Court judgment and also to reverse the decision taken by the Veerendra Patil Government ಇದರಿಂದ ಏನಾಯಿತು? ಇವತ್ತು ಕುಳಿತು ಯಾರನ್ನು ದೂಷಿಸುತ್ತೀರಿ? ದೇಶಪಾಂಡೆಯವರು ಒಬ್ಬರೇನೇ ಇದ್ದದ್ದು? ನೀವು ಬೇಕಾದಾಗ ಮಾತ್ರ ಜಂಟಿ ಜವಾಬ್ದಾರಿ, Joint responsibility of the Cabinet ಎಂದು ಹೇಳುತ್ತಿರಿ. ಈ ತತ್ವ ಬರುವುದಿಲ್ಲವೆ? 1993ರಲ್ಲಿ ಮಾನ್ಯ ವೀರೇಂದ್ರ ಪಾಟೀಲ್‌ರವರು ಯಾವುದು ಈ ಕೋಣಗಳು, ವೆಸ್ಟೆಡ್ ಇಂಟ್ರೆಸ್ಟ್ ಎಂದೆನ್ನುವ ಕೋಣಗಳು ಇವೆಯಲ್ಲವೇ, ಗೂಳಿಗಳು ಬೆಳೆದು ಹೂಕರಿಗೆ ಹಾಕುತ್ತಿರುತ್ತವೆ. ಕೆಂಪು ವಸ್ತ್ರ ತೋರಿಸಿದರೆ ಸಾಕು ಗುಟರಿಕೆ ಹಾಕುತ್ತವೆ. ಗುಟರಿಕೆ ಹಾಕಿದರೂ ಇವರು ಬಗ್ಗದೇ ನಿಂತುಕೊಂಡು ಅವುಗಳ ಕೊಂಬನ್ನು ಹಿಡಿದು ಬಗ್ಗಿಸಿ ಮೂಗುದಾರ ಹಾಕುವಂಥ ಕೆಲಸವನ್ನು ಆಡಳಿತ ಮಾಡುವವರು ಮಾಡಬೇಕಾಗಿತ್ತು. ಏಕೆ ಅಮೆಂಡ್ ಮಾಡಿದಿರಿ? What was the reason? ಈ ರಾಜ್ಯದ ಜನತೆಗೆ ಉತ್ತರವನ್ನು ನೀವು ಹೇಳಬೇಕಾಗುತ್ತದೆ. 11 ಸಾವಿರ ಕೋಟಿ ರೂಪಾಯಿ ಮಾರಾಟ ತೆರಿಗೆಯಲ್ಲಿ ವಿನಾಯಿತಿ ನೀಡಿರುವ ಪಟ್ಟಿಯನ್ನು ನಾನೀಗ ಓದ ಬೇಕೇ? ಕೋಕೋಕೋಲಾದವರು, ಜಿಂದಾಲ್‌ನವರು, ಕಲ್ಯಾಣಿ ಗ್ರೂಪ್ ನವರು, ವಾಸುದತ್ತ ಸಿಮೆಂಟ್‌ನವರು, ಅದೇರೀತಿ ಈ ರಾಜ್ಯದ ಅಬಕಾರಿ ದೊರೆಗಳಿಗೆ ಸಹಾಯ ಮಾಡುವ ಒಂದೇ ಒಂದು ಕಾರಣಕ್ಕಾಗಿ ನೀವು ಅಬಕಾರಿ ಕಾನೂನಿಗೆ ತಿದ್ದುಪಡಿ ತರುವುದರ ಮುಖಾಂತರ ಈ ಸರ್ಕಾರದ ಬೊಕ್ಕಸಕ್ಕೆ ಬರುತ್ತಿದ್ದ ಹಣದ ಮೂಲವನ್ನು ಬತ್ತಿ ಹೋಗಲಿಕ್ಕೆ ನೆರವಾದಂಥ ಜವಾಬ್ದಾರಿಯನ್ನು ನೀವು ಹೊರಬೇಕಾಗುತ್ತದೆ. ಎಷ್ಟು ಬತ್ತಿ ಹೋಯಿತು? ಅಬಕಾರಿ ಇಲಾಖೆಯಲ್ಲಿ ಎಷ್ಟು ಬತ್ತಿ ಹೋಯಿತು? 1999ರಿಂದ ಹಿಂದಕ್ಕೆ ಈ ಖಜಾನೆಗೆ ಅಬಕಾರಿ ಇಲಾಖೆಯಿಂದ ಬರುತ್ತಿದ್ದಂಥ ಹಣ ಒಂದು ಸಾವಿರ ಕೋಟಿ ರೂ. ಅಥವಾ ಅದಕ್ಕಿಂತ ಕಡಿಮೆ. 1999 ರಲ್ಲಿ 1019 ಕೋಟಿ, ರೂ. ಇವತ್ತು ಏನಾಗಿದೆ? ನಿಮಗೆ ಕರುಣೆ ಬೇಡವೆ? ವಸ್ತುಸ್ಥಿತಿ ಏನಿದೆ ಅದನ್ನು ಅಪ್ರೀಷಿಯೇಟ್ ಮಾಡುವಂಥ ವೈಶಾಲತೆ ನಿಮಗೆ ಬೇಡವೆ? ಇವತ್ತು ಏನಾಗಿದೆ 2002–03ರಲ್ಲಿ 2118 ಕೋಟಿ ರೂ ಅಬಕಾರಿ ಇಲಾಖೆಯಲ್ಲಿ ಬೊಕ್ಕಸಕ್ಕೆ ಹಣ ಬರುತ್ತಿದೆ. ಅಂದರೆ 1999 ರಿಂದ ಇಲ್ಲಿಗೆ ಮೂರು ವರ್ಷಗಳಲ್ಲಿ 1100 ಕೋಟಿ ರೂಪಾಯಿಗಳು ಅಬಕಾರಿ ಇಲಾಖೆಯಿಂದ ಹೆಚ್ಚಿನ ಆದಾಯ ರಾಜ್ಯದ ಬೊಕ್ಕಸಕ್ಕೆ ಬರುತ್ತಿದೆ, ಇದು ಒಂದು ವರ್ಷಕ್ಕೆ. ಈ ತಿಂಗಳ ಒಂದನೇ ತಾರೀಖಿನಿಂದ ಮಾಡಿರುವಂಥ

ಒಂದು ದಿಟ್ಟ ನಿರ್ಧಾರದಿಂದ, ನಾನೀಗಾಗಲೇ ಹೇಳಿದಂತೆ, ಈ ಗೂಳಿಗಳ ಕೊಂಬುಗಳನ್ನು ಹಿಡಿದು ಬಗ್ಗಿಸಿ ಅದಕ್ಕೆ ಏನಾದರೂ ಬರಲಿ.., ನಮ್ಮ ಸ್ನೇಹಿತರು ಇಲ್ಲಿ ಇದ್ದಾರೋ ಏನೋ ಗೊತ್ತಿಲ್ಲ, ಯಾವುದೋ ಕೆರೆ ತೂಬು ಮುಚ್ಚಿಬಿಡಿ ನೀರು ಎಲ್ಲಾ ಹೋಗದ ಹಾಗೆ ಎಂದು ಹೇಳಿದೆ, ಭೈರೇಗೌಡರವರು ಎಲೆಕ್ಷನ್ ಇಯರ್ ಬೇಡ ಶ್ರೀನಿವಾಸಗೌಡರೇ ಎಂದು ಹೇಳಿದರು ಎಂದು ನಮಗೂ ಮುಂದಿನ ವರ್ಷ ಎಲೆಕ್ಷನ್ ಬರುತ್ತಿದೆ. ನಾವು ಚುನಾವಣೆಗೆ ಹೋಗುವವರೇ. ನಾವು ಮತ್ತೆ ಅಧಿಕಾರಕ್ಕೆ ಬರಬೇಕು ಎನ್ನುವ ಆಶೆ ಇಟ್ಟುಕೊಂಡಿರುವವರೇ, ಬಂದೂ ಬರುತ್ತೇವೆ, ಅದನ್ನು ನಾನು ಹೇಳುತ್ತಿಲ್ಲ ನಿಮ್ಮ ಸ್ನೇಹಿತರು ಹೇಳುತ್ತಾರೆ. ಇದು ಇದ್ದರೂ ಕೂಡ ದಿಟ್ಟತನದ ನಿರ್ಧಾರವನ್ನು ನಾವು ತೆಗೆದುಕೊಂಡಿದ್ದೇವೆ. ಆದ್ದರಿಂದ, ಇದರಲ್ಲಿ ಪಕ್ಷದ ಹಿತವೋ ಅಥವಾ ಪಾರ್ಟಿಯ ಹಿತಾವೋ ಅಥವಾ ಸರ್ಕಾರದ ಹಿತವೋ ಎನ್ನತಕ್ಕಂಥದ್ದನ್ನು ತಾವು ನೋಡಬೇಕಲ್ಲವೆ? ಒಂದು ವರ್ಷಕ್ಕೆ ಸುಮಾರು 1100 ಕೋಟಿ ರೂಪಾಯಿಗಿಂತ ಹೆಚ್ಚು ಆದಾಯ ಬರತಕ್ಕಂಥ ಮೂಲ ಬತ್ತಿ ಹೋಗುವುದಕ್ಕೆ ನೀವೇ ಕಾರಣರಾಗಿದ್ದೀರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ , ನಿಮ್ಮ ಆರ್ಥಿಕ ಪರಿಸ್ಥಿತಿ ಸರಿಯಿಲ್ಲ ಮತ್ತೆ ಆರೋಗ್ಯ ಸರಿಯಿಲ್ಲ. ಹಾಗೆಯೇ ನೀವು ಅಪಾಯದ ಅಂಚಿನಲ್ಲಿದ್ದೀರಿ ಮತ್ತೆ ನೀವು ದಿವಾಳಿ ಆಗಿದ್ದೀರಿ ಎಂದು ನಮ್ಮ ಸ್ನೇಹಿತರೊಬ್ಬರು ಹೊರಗಡೆ ದಿನಬೆಳಿಗ್ಗೆಯಾದರೆ ಸ್ಟೇಟ್‌ಮೆಂಟ್ ಕೊಡುತ್ತಿದ್ದಾರೆ. ಕರ್ನಾಟಕ ರಾಜ್ಯದ ಬೊಕ್ಕಸಕ್ಕೆ ಬರಬೇಕಾಗಿರತಕ್ಕಂಥ ಎರಡೂ ಮೂಲಗಳು ಬತ್ತಿ ಹೋಗತಕ್ಕಂಥ ಸಂದರ್ಭದಲ್ಲಿಯೂ ಕೂಡ ಈ ಸರ್ಕಾರ ಅತ್ಯಂತ ಶ್ಲಾಘನೀಯವಾದ ಕೆಲಸವನ್ನು ಮಾಡಿದೆ. I congratulate this Government. ನಿಮಗೆ ಮನುಷ್ಯತ್ವ ಎನ್ನತಕ್ಕಂಥದ್ದು ಇದ್ದರೆ ನೀವೂ ಕೂಡ ಇದನ್ನು ಮೆಚ್ಚಬೇಕಾಗುತ್ತದೆ. ಏಕೆಂದರೆ, ದಿನಾಂಕ 1-01-2002ನೇ ಸಾಲಿನಿಂದ ಇನ್ನು ಮುಂದೆ ಯಾವುದೇ ಹೊಸ ಪ್ರಾಜೆಕ್ಟ್‌ಗಳಿಗೆ ತೆರಿಗೆ ವಿನಾಯತಿ ಕೊಡುವುದಿಲ್ಲ ಮತ್ತು ತೆರಿಗೆಯ ಸ್ವೀಕೃತ ಮುಂದಕ್ಕೆ ಹಾಕುವುದಿಲ್ಲ ಎನ್ನತಕ್ಕಂಥ ದಿಟ್ಟ ನಿರ್ಧಾರವನ್ನು ನಮ್ಮ ಸರ್ಕಾರ ತೆಗೆದುಕೊಂಡಿದೆ. ಇದನ್ನು ಕೇಂದ್ರ ಸರ್ಕಾರ ಮಾಡಿರತಕ್ಕಂಥದ್ದಲ್ಲ. ದಿನಾಂಕ 1-01-2002 ರಿಂದ ಇನ್ನು ಮುಂದೆ ತೆರಿಗೆ ವಿನಾಯತಿ ಕೊಡುವುದಿಲ್ಲವೆಂದು ಮತ್ತು ಡೆಫರ್ ಪೇಮೆಂಟ್‌ಗೆ ಅಲ್ಲೋ ಮಾಡುವುದಿಲ್ಲ ಎನ್ನತಕ್ಕಂಥ ತೀರ್ಮಾನವನ್ನು ನಮ್ಮ ಸರ್ಕಾರ ತೆಗೆದುಕೊಂಡಿದೆ. ಈ ಒಂದು ತೀರ್ಮಾನದಿಂದ ಒಂದು ವರ್ಷಕ್ಕೆ ಸುಮಾರು ನೂರಾರು ಅಥವಾ ಸಾವಿರಾರು ಕೋಟಿ ರೂಪಾಯಿಗಳಷ್ಟು ಬೊಕ್ಕಸಕ್ಕೆ ಬರಬೇಕಾಗಿರತಕ್ಕಂಥ ವಿನಾಯತಿ ಹಣ ಇವತ್ತಿನದಿವಸ ಬೊಕ್ಕಸಕ್ಕೆ ಬರುವುದಕ್ಕೆ ಪ್ರಾರಂಭವಾಗಿದೆ. ಮತ್ತೆ ಸನ್ಮಾನ್ಯ ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ನೀಡಿದಂಥ ಆಶ್ವಾಸನೆಯ ಪ್ರಕಾರ ಈ ರಾಜ್ಯದಲ್ಲಿ ನಿಗಮವನ್ನು ಸ್ಥಾಪನೆ ಮಾಡುವುದರ ಮೂಲಕ ಕರ್ನಾಟಕರಾಜ್ಯದಲ್ಲಿ ಉತ್ಪತ್ತಿ ಆಗತಕ್ಕಂಥ ಡಿಟೆಂಚರ್ ಸ್ಪಿರಿಟ್ ಮತ್ತು ಎಲ್ಲಾ ರೀತಿಯ ಮದ್ಯವನ್ನು ಈ ನಿಗಮದ ಕೆಳಗಡೆ ತರತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿರತಕ್ಕಂಥ ಆಶ್ವಾಸನೆಯನ್ನು ಇವತ್ತಿನದಿವಸ ನೆರವೇರಿಸಿದ್ದಾರೆ. ನಾನು 1983ನೇ ಇಸವಿಯಲ್ಲಿ ಈ ಮನೆಗೆ ಬಂದಿದ್ದು, ಆಗಿನಿಂದಲೂ ಕೂಡ ಈ ಸೆಕೆಂಡ್ಸ್ ಬಗ್ಗೆ ಕೇಳಿ ಕೇಳಿ ಸಾಕಾಗಿತ್ತು. ಆದರೆ, ಇವತ್ತಿನದಿವಸ ಸೆಕೆಂಡ್ಸ್ ಎಲ್ಲಿದೆ? ಇಚ್ಛಾಶಕ್ತಿ ಬೇಕೆಂದು ತಾವು ಹೇಳುತ್ತಿದ್ದೀರಿ. ಇವತ್ತಿನದಿವಸ ಇಚ್ಛಾಶಕ್ತಿ ಒಂದಿದ್ದರೆ ಏನು ಮಾಡುವುದಕ್ಕೂ ಸಾಧ್ಯ ಎಂಬುದಕ್ಕೆ this is the concrete example. ನಾನು ಈಗಾಗಲೇ ಹೇಳಿದ ಹಾಗೆ ದೇಶದಲ್ಲಿ ಚುನಾವಣೆ ದೃಷ್ಟಿಯಿಂದ ಮತ್ತು ರಾಜಕೀಯ ದೃಷ್ಟಿಯಿಂದ ಹಾಗೂ ಪಕ್ಷದ ದೃಷ್ಟಿಯಿಂದ ನಾವು ತೀರ್ಮಾನಗಳನ್ನು

ತೆಗೆದುಕೊಳ್ಳುತ್ತಾ ಹೋದರೆ ಈ ದೇಶವನ್ನು ಎಲ್ಲೆಲ್ಲಿಗೆ ಬೇಕಾದರೂ ತೆಗೆದುಕೊಂಡು ಹೋಗಬಹುದಾಗಿತ್ತು. ಕರ್ನಾಟಕ ರಾಜ್ಯದ ಬೊಕ್ಕಸಕ್ಕೆ ಬರಬೇಕಾಗಿರತಕ್ಕಂಥ ಹಣವನ್ನು ಕ್ರೋಢೀಕರಿಸುವುದರಲ್ಲಿ ಸರ್ಕಾರ ತೆಗೆದುಕೊಂಡಿರತಕ್ಕಂಥ ಈ ಎರಡು ತೀರ್ಮಾನಗಳು ಒಳ್ಳೆಯದಾಗಿವೆ. ಇವತ್ತಿನದಿವಸ ಪಾನ ನಿಗಮವನ್ನು ಸ್ಥಾಪನೆ ಮಾಡಿದ್ದರಿಂದ ಕರ್ನಾಟಕ ರಾಜ್ಯದಲ್ಲಿ ಮದ್ಯ ಅಥವಾ ಅಬ್ಕಾರಿ ಇಲಾಖೆಯ ಬೆಳೆದು ನಿಂತಿದಂಥ ಗೂಳಿಗಳ ಕೊಂಬು ಹಿಡಿದು ಬಗ್ಗಿಸಿ ಮೂಗುದಾರ ಹಾಕತಕ್ಕಂಥ ಕೆಲಸವನ್ನು ಮಾಡಿದ್ದೇವೆ. ಹಾಗೆಯೇ, ಇವತ್ತಿನ ದಿವಸ ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ ಬೆಳೆದು ನಿಂತಿರುವಂಥ ಗೂಳಿಗಳ ಕೊಂಬನ್ನು ಹಿಡಿದು ಬಗ್ಗಿಸಿ ನಿಲ್ಲಿಸಿ ತೆರಿಗೆ ವಿನಾಯತಿ ಮತ್ತು ಡೆಫರ್ಡ್ ಪೇಮೆಂಟ್ ಕೊಡತಕ್ಕಂಥದ್ದನ್ನು ನಿಲ್ಲಿಸಲಾಗಿದೆ. ಈ ಒಂದು ಕಾರಣಕ್ಕಾಗಿ ನಾನು ಸರ್ಕರವನ್ನು ಅಭಿನಂದಿಸುತ್ತೇನೆ. ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಹೇಳುವುದಾದರೆ, ಈ ರಾಜ್ಯದ ಬೊಕ್ಕಸಕ್ಕೆ ಹರಿದು ಬರತಕ್ಕಂಥ ಹಣ ಕಡಿಮೆಯಾಗಿರತಕ್ಕಂಥದ್ದು ಇಷ್ಟರಿಂದಲೇ ಆಗಿರತಕ್ಕಂಥದ್ದಲ್ಲ. ಮಂಗಳೂರಿನಲ್ಲಿರತಕ್ಕಂಥ ತಣ್ಣೀರು ಬಾವಿ ವಿದ್ಯುತ್ ಜನರೇಟ್ ಪ್ರಾಜೆಕ್ಟ್‌ಗೆ ಸಂಬಂಧಪಟ್ಟಂತೆ ಇಲ್ಲಿ ಅನೇಕ ವಿಷಯಗಳು ಕೇಳಿ ಬರುತ್ತಿತ್ತು. ನಮ್ಮ ಊರಲ್ಲೆಲ್ಲಾ ತಣ್ಣೀರು ಬಾವಿಗಳೇ ಇವೆ, ಎಲ್ಲಿಯೂ ಕೂಡ ಬಿಸಿ ನೀರಿನ ಬಾವಿ ಇಲ್ಲ. ಆದರೆ, ಅಲ್ಲಿರತಕ್ಕಂಥ ತಣ್ಣೀರು ಬಾವಿಯ ವಿಶೇಷ ಏನು ಎಂದು ನಾನು ಮಾನ್ಯ ವಿಜಯಕುಮಾರ್ ಶೆಟ್ಟಿಯವರನ್ನು ಕೇಳಿದೆ. ತಾವು ಬಂದರೆ, ನಾನು ತಣ್ಣೀರು ಬಾವಿಯನ್ನು ತೋರಿಸುತ್ತೇನೆಂದು ಅವರು ಹೇಳಿದರು. ಮಾನ್ಯ ವಿಜಯಕುಮಾರ್ ಶೆಟ್ಟಿಯವರು ನಮಗೆಲ್ಲಾ ತಣ್ಣೀರು ಬಾವಿ ಪ್ರಾಜೆಕ್ಟ್‌ನ್ನು ತೋರಿಸಿ ಅದರ ಕತೆಯನ್ನು ಹೇಳಿದರು. ತಣ್ಣೀರು ಬಾವಿಯ ಕಥೆಯನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ತಣ್ಣೀರು ಬಾವಿ ಪ್ರದೇಶದಲ್ಲಿ ಒಬ್ಬರು ಒಂದು ಬೋರ್ ಮೇಲ್ಗಡೆ ವಿದ್ಯುತ್‌ನ್ನು ಉತ್ಪಾದನೆ ಮಾಡತಕ್ಕಂಥ ಯಂತ್ರವನ್ನು ಇಟ್ಟುಕೊಂಡಿದ್ದಾರೆ. ಇವರಿಂದ ವಿದ್ಯುತ್‌ನ್ನು ಕೊಂಡುಕೊಳ್ಳುವುದಕ್ಕಾಗಿ ಕರ್ನಾಟಕ ಸರ್ಕಾರ ಒಂದು ಒಪ್ಪಂದವನ್ನು ಮಾಡಿಕೊಂಡಿದೆ. ಆ ಒಪ್ಪಂದ ಏನೆಂದರೆ, ಅವರಿಂದ ಪ್ರತಿ ದಿವಸ ವಿದ್ಯುತ್‌ನ್ನು ಕೊಂಡುಕೊಳ್ಳಲಿ ಅಥವಾ ಬಿಡಲಿ ಪ್ರತಿ ದಿವಸ ಒಂದು ಕೋಟಿ ರೂಪಾಯಿಗಳನ್ನು ಅವರಿಗೆ ಕೊಡಬೇಕು. Can anybody imagine this? Whether you purchase it or not. ಮತ್ತೆ ನಾವು ವಿದ್ಯುತ್‌ನ್ನು ಕೊಂಡುಕೊಳ್ಳುವಾಗ ಅದರ ಪ್ರೊಡಕ್ಷನ್ ಕಾಸ್ಟ್ ಕೂಡ ಕೊಡಬೇಕು. ಆ ಸಂದರ್ಭದಲ್ಲಿ ಇದು ತಮ್ಮ ಗಮನಕ್ಕೆ ಬರಲಿಲ್ಲವೇ? How can it ಇದು ಕೇವಲ ಮಾನ್ಯ ದೇಶಪಾಂಡೆಯವರ ಗಮನಕ್ಕೆ ಬಂದಿದೆಯೇ? ಆ ಸಂದರ್ಭದಲ್ಲಿ ನೀವ್ಯಾರು ಇರಲಿಲ್ಲವೇ? ಒಂದು ದಿನಕ್ಕೆ ಒಂದು ಕೋಟಿ ರೂಪಾಯಿಗಳನ್ನು ಅವರಿಗೆ ಕೊಡಬೇಕು. ಮತ್ತೆ ಇದರ ಜೊತೆಗೆ ನಾವು ಎಷ್ಟು ಯುನಿಟ್‌ಗಳನ್ನು ಅವರಿಂದ ಕೊಂಡುಕೊಳ್ಳುತ್ತೇವೆಯೋ ಅದಕ್ಕೆ 3 ಅಥವಾ 6 ರೂಪಾಯಿ ಕಾಸ್ಟ್‌ನ್ನೂ ಕೂಡ ಕೊಡಬೇಕಾಗುತ್ತದೆ. ಅವರಿಂದ ನಮ್ಮ ರಾಜ್ಯ ಸರ್ಕಾರ ವಿದ್ಯುತ್‌ನ್ನು ಕೊಂಡುಕೊಳ್ಳದಿದ್ದರೂ ಕೂಡ ಒಪ್ಪಂದದ ಪ್ರಕಾರ ಒಂದು ವರ್ಷಕ್ಕೆ 365 ಕೋಟಿ ರೂಪಾಯಿಗಳನ್ನು ಅನಾವಶ್ಯಕವಾಗಿ ತಣ್ಣೀರು ಬಾವಿ ಪ್ರಾಜೆಕ್ಟ್‌ನವರಿಗೆ ಕೊಡಬೇಕಾಗಿದೆ. ಈ ಒಂದು ಪ್ರಾಜೆಕ್ಟ್‌ನ್ನು ನೋಡಿಕೊಂಡು ಬರುವುದಕ್ಕೆ ನಾನೊಬ್ಬನೇ ಹೋಗಿರಲಿಲ್ಲ. ನಮ್ಮ ಸ್ನೇಹಿತರೂ ಕೂಡ ಆ ಸಂದರ್ಭದಲ್ಲಿ ಬಂದಿದ್ದರು. ಇವರಿಗೆ ಕೊಡತಕ್ಕಂಥ 365 ಕೋಟಿ ರೂಪಾಯಿ ಯಾರದು? ಈ 365 ಕೋಟಿ ರೂಪಾಯಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬಂದಿದ್ದರೆ ರೈತರಿಗೆ ಕೊಡಬೇಕಾಗಿರತಕ್ಕಂಥ

80 ಕೋಟಿ ರೂಪಾಯಿ ಕೊಡುವುದಕ್ಕೆ ನಾವು ಹಿಂದೆ–ಮುಂದೆ ನೋಡುತ್ತಿರಲಿಲ್ಲ. ನಾನು ಈಗಾಗಲೇ ಹೇಳಿದ ಹಾಗೆ ಹಿಡಿತವನ್ನು ಸರಿದೂಗಿಸುತ್ತಾ ಹೋಗಬೇಕಾದರೆ ನಮಗೆ ಬೇರೆ ಮಾರ್ಗವೇ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ತಣ್ಣೀರು ಬಾವಿ ಪ್ರಾಜೆಕ್ಟ್‌ಗೆ ಪುಕ್ಕಟೆಯಾಗಿ ನಾವು 365 ಕೋಟಿ ರೂಪಾಯಿ ಕೊಟ್ಟಿದ್ದೇವೆಂದು ಅವರು ನಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ ಹಾನಿಯಾಯಿತು ಎಂದು ಅವರು ಹೇಳುತ್ತಿದ್ದಾರೆ. ಆದ್ದರಿಂದ, ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ, ಇದನ್ನು ಯಾರು ಕೊಟ್ಟರು? ಮತ್ತೆ ಸುಮ್ಮನೆ ಕೊಟ್ಟಿದ್ದಾರೆಯೆ? ಮತ್ತೆ ಇದು ಏನಾಗಿದೆ ಎನ್ನತಕ್ಕಂಥದ್ದನ್ನು ಸ್ವಲ್ಪ ಕ್ಲಿಯರ್ ಆಗಿ ಹೇಳಿದರೆ ಒಳ್ಳೆಯದು. ಏಕೆಂದರೆ, ಇದರ ಬಗ್ಗೆ ತಾವು ಇಷ್ಟು ಹೊತ್ತು ಹೇಳಿರತಕ್ಕಂಥದ್ದು ಇಲ್ಲಿ ಯಾರಿಗೂ ಕೂಡ ತಿಳಿಯಲಿಲ್ಲ. ಆದ್ದರಿಂದ ಮತ್ತೊಮ್ಮೆ ಕ್ಲಿಯರ್ ಆಗಿ ಹೇಳಿ.

ಶ್ರೀ ವೈ.ಕೆ. ರಾಮಯ್ಯ:– ನನ್ನ ಸ್ನೇಹಿತರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ, ಈ ಕಹಿ ಗುಳಿಗೆಯನ್ನು ನುಂಗುವುದರಿಂದ ನಮ್ಮ ಆರೋಗ್ಯ ತುಂಬಾ ಚೆನ್ನಾಗಿರುತ್ತದೆ. ನೀವು ಎಷ್ಟೇ ಕಹಿ ಗುಳಿಗೆಗಳನ್ನು ಕೊಟ್ಟರೂ ಸಹ ನಾವು ನುಂಗುವುದಕ್ಕೆ ಸಿದ್ಧರಿದ್ದೇವೆ. ನಮ್ಮ ಆರೋಗ್ಯ ದೃಷ್ಟಿಯಿಂದ ನೀವು ಕೊಡತಕ್ಕಂಥ ಕಹಿ ಗುಳಿಗೆಗಳನ್ನು ನುಂಗುವುದಕ್ಕೆ ನಾವು ತಯಾರಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್:– ನಮ್ಮ ತಪ್ಪಿದ್ದರೆ ನಾವು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ. ಆದ್ದರಿಂದ, ಇದರ ಬಗ್ಗೆ ಕ್ಲಿಯರ್ ಆಗಿ ಹೇಳಿ ನಾವು ಎಲ್ಲವನ್ನೂ ಸರಿ ಮಾಡಿದ್ದೇವೆಂದು ಹೇಳುವುದಿಲ್ಲ. ನಾವು ಕೂಡ ಮಾಡಿರತಕ್ಕಂಥ ತಪ್ಪುಗಳನ್ನು ಸಾಕಷ್ಟು ಸಲ ಒಪ್ಪಿಕೊಂಡಿದ್ದೇವೆ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಉಪಾಧ್ಯಕ್ಷರೆ, ತಣ್ಣೀರು ಬಾವಿ ಪ್ರಾಜೆಕ್ಟ್‌ನಿಂದ ವಿದ್ಯುತ್‌ನ್ನು ಕೊಂಡುಕೊಳ್ಳುವುದರ ಬಗ್ಗೆ ಹಿಂದಿನ ಸರ್ಕಾರ ಅವರ ಜೊತೆ ಒಪ್ಪಂದವನ್ನು ಮಾಡಿಕೊಂಡಿತ್ತು. ಆ ಒಪ್ಪಂದದ ಪ್ರಕಾರ ವಿದ್ಯುತ್‌ನ್ನು ಅವರಿಂದ ಕೊಂಡುಕೊಳ್ಳಲಿ ಅಥವಾ ಬಿಡಲಿ ಅವರಿಗೆ ಪ್ರತಿದಿವಸ ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕು. ಈ ವಿಷಯವನ್ನು ತೀರ್ಮಾನ ಮಾಡುವುದಕ್ಕೋಸ್ಕರ ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ನ್ಯಾಯ ಮಂಡಳಿಯನ್ನು ಸ್ಥಾಪನೆ ಮಾಡಲಾಗಿದ್ದು, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ತಿಂಗಳು ಅಥವಾ 15 ದಿವಸಗಳ ಹಿಂದೆ ತೀರ್ಮಾನ ಬಂದಿದೆ. ಆದರೆ, ಏನು ತೀರ್ಮಾನ ಬಂದಿದೆ ಎನ್ನತಕ್ಕಂಥದ್ದು ನನಗೆ ಗೊತ್ತಿಲ್ಲ. ಆದರೆ, ಒಪ್ಪಂದ ಆಗಿರತಕ್ಕಂಥದ್ದು ಮತ್ತು ಸರ್ಕಾರಕ್ಕೆ ಆಗಿರತಕ್ಕಂಥ ನಷ್ಟದ ಬಗ್ಗೆ ನನಗೆ ಗೊತ್ತು. ಒಪ್ಪಂದದ ಪ್ರಕಾರ ಒಂದು ದಿನಕ್ಕೆ ಒಂದು ಕೋಟಿ ರೂಪಾಯಿ ಕೊಡಬೇಕು. ಮತ್ತೆ ಅವರಿಂದ ವಿದ್ಯುತ್ ಕೊಂಡುಕೊಂಡ ದಿವಸ ಅವರಿಗೆ ಪ್ರೊಡಕ್ಷನ್ ಕಾಸ್ಟ್ ಕೊಡಬೇಕಾಗುತ್ತದೆ. ಮತ್ತೆ ಅವರು ವಿದ್ಯುತ್ ಉತ್ಪಾದನೆ ಮಾಡದೇ ಅವರ ಯಂತ್ರಗಳು ರಿಪೇರಿ ಇದ್ದಾಗಲೂ ಕೂಡ ಮತ್ತು ವಿದ್ಯುತ್‌ನ್ನು ಉತ್ಪಾನೆ ಮಾಡಲಿ ಅಥವಾ ಬಿಡಲಿ ಒಂದು ದಿನಕ್ಕೆ ಒಂದು ಕೋಟಿ ರೂಪಾಯಿ ಕೊಡಬೇಕು. ಇದು ಅವರ ಜೊತೆ ಆಗಿರತಕ್ಕಂಥ ಒಪ್ಪಂದವಾಗಿದೆ. ಅವರಿಂದ ವಿದ್ಯುತ್ ಕೊಂಡುಕೊಳ್ಳಲಿ ಅಥವಾ ಬಿಡಲಿ 365 ದಿವಸಕ್ಕೆ 365 ಕೋಟಿ ರೂಪಾಯಿ ಕೊಡಬೇಕಾಗುತ್ತದೆ. ಒಂದು ವೇಳೆ ನಾನು ಇಲ್ಲಿ ಹೇಳತಕ್ಕಂಥ ಮಾಹಿತಿ ತಪ್ಪು ಇದ್ದರೆ ಅಥವಾ ನಾನು ಹೇಳತಕ್ಕಂಥ ಮಾತು ಸುಳ್ಳು ಆಗಿದ್ದರೆ ನಾನು ಇಲ್ಲಿಂದ ರಾಜೀನಾಮೆ ಕೊಟ್ಟು ಆಚೆಗೆ ಹೋಗುತ್ತೇನೆ. ಇದನ್ನೆಲ್ಲಾ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟರೆ ನಾನು ಇನ್ನು ಮೂರು ದಿವಸಗಳವರೆಗೆ ಮಾತನಾಡುತ್ತೇನೆ. ಮಾನ್ಯ ಉಪಾಧ್ಯಕ್ಷರು ಟೈಂ ಕೊಟ್ಟರೆ ನಾನು ಖಂಡಿತ ಮಾತನಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್:– ನಿಮ್ಮಂಥ ಅನುಭವ ಇರತಕ್ಕಂಥವರು ಮಾತನಾಡುವುದರಲ್ಲಿ ತಪ್ಪೇನೂ ಇಲ್ಲ. ಮತ್ತೆ ತಪ್ಪೆಂದು ನಾನೂ ಕೂಡ ಹೇಳುವುದಿಲ್ಲ. ಅವರು ಮೂರು ದಿವಸಗಳವರೆಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ಇದನ್ನು ನಾವು ಕೂಡ ಒಪ್ಪಿ ಕೊಳ್ಳುತ್ತೇವೆ. ಹಾಗೆಯೇ, ನಾವೂ ಕೂಡ ಮಾತನಾಡುವುದಕ್ಕೆ ಆರು ದಿವಸಗಳಾದರು ಬೇಕಾಗುತ್ತದೆ. ನಾವು ಸುಮ್ಮನೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇದಕ್ಕೆ ಸಂಬಂಧಪಟ್ಟಂಥ ಮಾಹಿತಿಗಳನ್ನು ತರಿಸಿಕೊಂಡು ಮಾತನಾಡುತ್ತೇವೆ.

ಉಪಾಧ್ಯಕ್ಷರು:– ಇವತ್ತು ಬೇಡಿಕೆಯ ಮೇಲಿನ ಚರ್ಚೆಯನ್ನು ಏಕೆ ಇಟ್ಟಿದ್ದೀರಿ? ಮಾನ್ಯ ಮುಖ್ಯಮಂತ್ರಿಯವರು ಇಲ್ಲಿಯೇ ಇದ್ದಾರೆ. ಆದ್ದರಿಂದ, ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ತಾವು ಈ ರೀತಿ ಮಧ್ಯ ಪ್ರವೇಶ ಮಾಡಿದರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್:– ಹಾಗಾದರೆ ತಾವು ಬೇಡಿಕೆಯ ಮೇಲೆ ಚರ್ಚೆಯನ್ನು ಏಕೆ ಇಟ್ಟಿದ್ದೀರಿ? ಮಾನ್ಯ ಮುಖ್ಯಮಂತ್ರಿಯವರು ಇಲ್ಲಿಯೇ ಇದ್ದಾರೆ. ಆದ್ದರಿಂದ ಅವರ ಗಮನಕ್ಕೆ ತರುವುದೇನೆಂದರೆ, ಬೇಡಿಕೆಯ ಮೇಲೆ ನಾವು ಮಾತನಾಡಬೇಕೆಂದು ಮೂರು ವಾರಗಳಿಂದ ತಯಾರು ಮಾಡಿ ಓದಿಕೊಂಡು ಇಲ್ಲಿಗೆ ಬಂದಿರುತ್ತೇವೆ. ಆದರೆ, ಕೇವಲ 5 ನಿಮಿಷದಲ್ಲಿ ಮಾತನಾಡಿ ಎದ್ದು ಹೋಗಿ ಎಂದು ಹೇಳುವುದಾದರೆ ಈ ಅಸೆಂಬ್ಲಿಯನ್ನು ಏಕೆ ಕರೆಯುತ್ತೀರಿ? ಈ ರೀತಿಯಾದರೆ ಮಂದಿ ಯಾರೂ ಇರುವುದಿಲ್ಲ...

ಉಪಾಧ್ಯಕ್ಷರು:– ಇನ್ನು ಸಾಕಷ್ಟು ಜನರು ಮಾತನಾಡುವವರು ಇರುವುದರಿಂದ ತಾವು ಮಾತನಾಡತಕ್ಕಂಥದ್ದನ್ನು ಸ್ವಲ್ಪ ಶಾರ್ಟ್ ಮಾಡಿ ಎಂದು ಮಾನ್ಯ ರಾಮಯ್ಯನವರಿಗೆ ಹೇಳುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್:– ಅವರು ನಮ್ಮ ಬಗ್ಗೆ ಹೇಳುತ್ತಿದ್ದಾರೆ. ಆದ್ದರಿಂದ ಅದಕ್ಕೆ ನಾವು ಉತ್ತರ ಕೊಡಬೇಕಾಗುತ್ತದೆ.

ಉಪಾಧ್ಯಕ್ಷರು:– ತಮಗೂ ಕೂಡ ಗೊತ್ತಿರಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಬಹಳಷ್ಟು ಜನ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಇದೆ ಎಂದು ಹೇಳಿದ್ದೇವೆ. ಆದ್ದರಿಂದ ಎಲ್ಲರಿಗೂ ಅವಕಾಶ ಕೊಡಬೇಕಾಗಿದೆ. ಆದ್ದರಿಂದ ನೀವು ಮಾತನಾಡತಕ್ಕಂಥದ್ದನ್ನು ಶಾರ್ಟ್ ಮಾಡಬೇಕು. ಮತ್ತೆ ಮಧ್ಯೆ ಮಧ್ಯೆ ನಿಮ್ಮಂಥವರು ಇಂಟ್ರಪಷನ್ ಮಾಡತಕ್ಕಂಥದ್ದನ್ನು ತಪ್ಪಿಸಬೇಕು.

5.50 ಪಿಎಂ

ಶ್ರೀ ಎಸ್.ಎಸ್. ಪಾಟೀಲ್:– ಹೀಗಾಗುತ್ತದೆ ಕೆಲವು ಸಲ.

ಉಪಾಧ್ಯಕ್ಷರು:– ಈಗ ಆಗುವುದು ಇಷ್ಟೆ, ಮಧ್ಯೆ ಮಧ್ಯೆ ನೀವು ಅಡ್ಡಿ ಮಾಡುವುದನ್ನು ನಿಲ್ಲಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್:– ಅವರೇ ಮೂರು ದಿವಸಗಳ ಕಾಲ ಮಾತನಾಡುತ್ತೇನೆಂದು ಹೇಳುತ್ತಾರೆ. ಈಗ ಅವರು ಮಾತನಾಡಲಿ, ನಂತರ ಅದಕ್ಕೆ ನಾವು ಉತ್ತರವನ್ನು ಕೊಡುತ್ತೇವೆ.

ಉಪಾಧ್ಯಕ್ಷರು:– ಈಗ ತಾವು ಮಧ್ಯೆ ಮಧ್ಯೆ ಅಡ್ಡಿ ಮಾಡುವುದನ್ನು ನಿಲ್ಲಿಸಬೇಕು. ನೀವು ಇದೇ ರೀತಿಯಾಗಿ ಅಡ್ಡಿ ಪಡಿಸುತ್ತಿದ್ದರೆ ಅವರ ಭಾಷಣ ಹೇಗೆ ಮುಗಿಯುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಹಿರಿಯ ಸದಸ್ಯರಾದ ಶ್ರೀರಾಮಯ್ಯನವರು ನಾನು ಮೂರು ದಿವಸಗಳ ಕಾಲ ಬೇಕಾದರೆ ಮಾತನಾಡುತ್ತೇನೆ, ತಾವು ಟೈಮ್ ಕೊಡುವುದಿಲ್ಲವೆಂದರು.

ನೀವು ಇವತ್ತೆ ಮುಗಿಸಬೇಕೆಂದು ಹೇಳುತ್ತಿದ್ದೀರಿ. ಹಾಗಾದರೆ ಅಭ್ಯಾಸ ಮಾಡಿಬಂದವರು ಏನು ಮಾಡಬೇಕು.

ಉಪಾಧ್ಯಕ್ಷರು:- ಹೌದು, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಾತನಾಡಿದ ಪ್ರಕಾರ ಬಿಸಿನೆಸ್ ನಡೆಯಬೇಕಲ್ಲಾ? ಅಲ್ಲೊಂದು ಮಾತನಾಡುವುದು ಇಲ್ಲಿ ಮಾತನಾಡುವುದು ಹೇಗೆ ಅದು?

ಶ್ರೀ ಎಸ್.ಎಸ್. ಪಾಟೀಲ್:- ಸುಮ್ಮನೆ ಟೈಮ್ ಇಲ್ಲದಿದ್ದರೆ ಸದನವನ್ನು ಕರೆಯಬೇಡರಿ. ಈ ಅಸೆಂಬ್ಲಿಯಲ್ಲಿ ಬಡಬಡ ಎಂದು ಕೈಯೆತ್ತಿ ಎದ್ದು ಹೋಗುವುದು ಬೇಡ.

ಉಪಾಧ್ಯಕ್ಷರು:- ಇವತ್ತು ಚರ್ಚೆ ಮುಗಿಯಬೇಕು, ನಾಳೆ ರಿಪ್ಲೈ ಆಗಬೇಕು. ವೋಟ್ ಆನ್ ಅಕೌಂಟ್ ಆಗಬೇಕು, ಎಲ್ಲವೂ ನಿಮಗೆ ಗೊತ್ತಿದೆ. ಈ ರೀತಿ ತಮಗೆ ಗೊತ್ತಿದ್ದರೂ ಕೂಡ ಮಧ್ಯೆ ಮಧ್ಯೆ ಒಂದು ವಾರ ಟೈಮ್ ಬೇಕೆಂದರೆ ಹೇಗೆ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಉಪಾಧ್ಯಕ್ಷರೆ,..

ಶ್ರೀ ಎಸ್.ಎಸ್. ಪಾಟೀಲ್:- ಇಲ್ಲಿ ಸರಿಯಾದ ರೀತಿಯಲ್ಲಿ ಚರ್ಚೆಯಾಗಬೇಕಾಗುತ್ತದೆ. ಮಧ್ಯೆ ಮಧ್ಯೆ ಚರ್ಚೆ ನಡೆಯದಿದ್ದರೆ ಅದಕ್ಕೆ ಅರ್ಥ ಬರುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಪಾಟೀಲರೆ, ತಾವು: ಅನುಭವಿಕರು, ಸೀನಿಯರ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಮಾಡಿದ್ದೇವೆ. 31ನೇ ತಾರೀಖಿನೊಳಗಡೆ ಬಜೆಟ್ ಪಾಸ್ ಮಾಡಬೇಕಲ್ಲವೇ? 31ನೇ ತಾರೀಖಿನೊಳಗಡೆ ಬಜೆಟ್ ಪಾಸಾಗಿ ನಾವು ಅಪ್ರೋಪ್ರಿಯೇಷನ್ ಬಿಲ್ ಮಂಜೂರಾಗದಿದ್ದರೆ 1ನೇ ತಾರೀಖು ನಾವೆಲ್ಲಾ ಒಂದು ರೂಪಾಯಿ ಡ್ರಾ ಮಾಡುವುದಕ್ಕೆ ಅವಕಾಶವಿಲ್ಲ. 31ನೇ ತಾರೀಖು ಇಲ್ಲದಿದ್ದರೆ ಇನ್ನೂ ಒಂದು ವಾರ ಕೂರಬಹುದು, ಆದರೆ 31ನೇ ತಾರಿಖಿನೊಳಗಡೆ ಬಜೆಟ್ ಪಾಸಾಗ ಬೇಕಾಗಿರುವ ಕಾರಣ ನಾವು ತಮ್ಮಲ್ಲಿ ಮನವಿ ಮಾಡುವುದಿಷ್ಟೆ...

ಶ್ರೀ ಎಸ್.ಎಸ್. ಪಾಟೀಲ್:- ಹಿಂದೆ ಯಾವ ರೀತಿ ನಡೆಯುತ್ತಿತ್ತು ಎಂಬುದನ್ನು ನಾವು ನೋಡಿದ್ದೇವೆ. ಇಂತಹ ಅನುಭವಿಕರು ಮಾತನಾಡುವಾಗ ತಾವು ಎಷ್ಟೆಷ್ಟು ಟೈಮ್‌ನ್ನು ಕೊಡುತ್ತಿದ್ದೀರೆಂದು ನಾವು ನೋಡುತ್ತಿದ್ದೇವೆ. ಅವರು ಉತ್ತಮ ಸಂಸದೀಯ ಪಟುಗಳು ಎನಿಸಿಕೊಳ್ಳಬೇಕಾದರೆ ಅವರು ಹೆಚ್ಚಿಗೆ ಹೊತ್ತು ಮಾತನಾಡುವುದಕ್ಕೆ ಟೈಮ್ ಬೇಕಾಗುತ್ತದೆ. ಐದು ನಿಮಿಷ ಮಾತನಾಡಿ ಹೋಗಿ ಎಂದರೆ ಯಾರಿಗೆ ಸಾಧ್ಯವಾಗುತ್ತದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ:- ಐದು ನಿಮಿಷ ಮಾತನಾಡಿ ಹೋಗಿ ಎಂದು ಹೇಳಿಲ್ಲ, ಅದಕ್ಕಾಗಿ ಅಧಿವೇಶನವನ್ನು ಕರೆದಿರುವುದು, ಬೇರೆ ವಿಚಾರಗಳನ್ನು ಸದನದಲ್ಲಿ ತಂದು ಚರ್ಚೆಗೆ ಅವಕಾಶವಿಲ್ಲದಿದ್ದರೆ ಆ ಹೊಣೆಗಾರಿಕೆಯನ್ನು ಎಲ್ಲರೂ ಹೊರಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:- ಮೂರು ದಿವಸ ಮಾತನಾಡುತ್ತೇನೆಂದು ಅವರು ಹೇಳುತ್ತಿದ್ದಾರೆ. ಅವರು ಅನುಭವಿ ನಾಯಕರು, ನಾವು 6 ದಿವಸ ಉತ್ತರ ಕೊಡುವುದಕ್ಕೆ ತಯಾರಿದ್ದೇವೆ. ತಾವು ಆ ರೀತಿಯಾಗಿ ಮಾತನಾಡಬೇಕಾಗುತ್ತದೆ.

ಉಪಾಧ್ಯಕ್ಷರು:- ಈಗಾಗಲೇ 18 ಗಂಟೆಗಳ ಕಾಲ ನಾವು ಮಾತನಾಡಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್:- ತಾವು ಕೊಟ್ಟ ನಿರ್ಣಯಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ.

ಉಪಾಧ್ಯಕ್ಷರು:- ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಯಾವ ರೀತಿ ನಿರ್ಣಯವನ್ನು ತೆಗೆದುಕೊಂಡರೋ ಆ ರೀತಿಯಾಗಿ ಸದನ ನಡೆಯಬೇಕಲ್ಲಾ. ಅದಕ್ಕಾಗಿ ತಾವುಗಳೆಲ್ಲರೂ ಸಹಕಾರವನ್ನು ಕೊಡಬೇಕು.

ಶ್ರೀ ಎಸ್.ಎಸ್. ಪಾಟೀಲ್:- ಹಿಂದೆ ನಾವು ಆಡಳಿತ ನಡೆಸುವವರ ಕಡೆ ಇದ್ದೆವು, ಅವರು ವಿರೋಧಪಕ್ಷದ ಕಡೆ ಇದ್ದರು. ಈ ನಮೂನೆ ಮಾಡಿ ಎದ್ದು ಹೋಗಿಲ್ಲ. ಇದು ಐದು ವರ್ಷ ನಡೆಯುವುದು, ಅವರು ಉತ್ತರವನ್ನು ಹೇಳುತ್ತಾರೆ. ನಾವು ಇಷ್ಟೆಲ್ಲಾ ಮಾಡಿದರೂ ಕೂಡ...

ಶ್ರೀ ಡಿ.ಬಿ. ಚಂದ್ರೇಗೌಡ:- ಅದಕ್ಕೆ ಒಂದು ಡಿಬೇಟ್ ಮಾಡೋಣ. ಯಾರು ಯಾರೇನೂ ಮಾಡಿದ್ದಾರೆಂದು ಡಿಬೇಟ್ ಮಾಡೋಣ.

ಶ್ರೀ ಎಸ್.ಎಸ್. ಪಾಟೀಲ್:- ನೀವು ಆಗ ಸದನದಲ್ಲಿ ಇರಲಿಲ್ಲ. ಆಗ ಸದನದಲ್ಲಿ ಇದ್ದವರನ್ನು ಕೇಳಿ ಗೊತ್ತಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಅದಕ್ಕಾಗಿ ಒಂದು ಡಿಬೇಟ್‌ನ್ನು ಮಾಡೋಣ.

ಶ್ರೀ ಎಸ್.ಎಸ್. ಪಾಟೀಲ್:- ಬೇಕಾದಷ್ಟು ಟೈಮ್ ಕೊಡುತ್ತಿದ್ದೆವು. ವಿರೋಧಪಕ್ಷದವರು ಮಾತನಾಡುವುದಕ್ಕೆ ಟೈಂ ಕೊಡುತ್ತಿದ್ದೆವು.

ಶ್ರೀ ಕರಿಯಣ್ಣ:- ಆಯಿತು ಬಿಡಿ, ಅವರು ಈಗ ಮಾತನಾಡಲಿ.

ಉಪಾಧ್ಯಕ್ಷರು:- ಈಗ ಮಾತನಾಡುವುದಕ್ಕೆ ನಾವು ಅವಕಾಶವನ್ನು ಕೊಟ್ಟಿಲ್ಲವೇ?

ಶ್ರೀ ಎಸ್.ಎಸ್.ಪಾಟೀಲ್:- ಕರಿಯಣ್ಣನವರೇ, ನಾನು ಇಲ್ಲವೆಂದು ಹೇಳಿಲ್ಲ. ಇವತ್ತೇ ಇದು ಮುಗಿಯಬೇಕಂತೆ.

ಉಪಾಧ್ಯಕ್ಷರು:- ಶ್ರೀ ಆರಗ ಜ್ಞಾನೇಂದ್ರರವರು ಎರಡು ಗಂಟೆ ಹತ್ತು ನಿಮಿಷಗಳ ಕಾಲ ಮಾತನಾಡಿದರು. ಸುಮ್ಮನೆ ಕುಳಿತುಕೊಳ್ಳಲಿಲ್ಲವಾ? ಒಳ್ಳೆಯದನ್ನು ಮಾತನಾಡುತ್ತಿದ್ದರು ಮಾತನಾಡಿ ಎಂದು ಹೇಳಿದೆವು. ತಾವು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲವೆಂದು ಹೇಳುತ್ತಿದ್ದೀರಿ?

ಶ್ರೀ ಎಸ್.ಎಸ್. ಪಾಟೀಲ್:-ಆಯಿತು ಉಪಾಧ್ಯಕ್ಷರೇ.

ಉಪಾಧ್ಯಕ್ಷರು:- ಬಹಳ ಜನರಿಗೆ ಮಾತನಾಡಲು ಅವಕಾಶವನ್ನು ಮಾಡಿಕೊಡಬೇಕೆಂದರೆ ಮಾತನಾಡುವವರು ಸ್ವಲ್ಪ ಶಾರ್ಟ್ ಆಗಿ ಮಾತನಾಡಬೇಕು.

ಶ್ರೀ ಎಸ್.ಎಸ್. ಪಾಟೀಲ್:- ಇಲ್ಲಿ ಮಾತನಾಡುವುದಕ್ಕೆ ಅಭ್ಯಾಸ ಮಾಡಿರುವವರು ಕೆಲವು ಜನರು ಇರುತ್ತಾರೆ. ಅವರು ಅಭ್ಯಾಸ ಮಾಡಿಕೊಂಡು ಬಂದಿರುವವರು ನಾನೇ ಎರಡು ದಿವಸಗಳ ಕಾಲ ಮಾತನಾಡುತ್ತೇವೆಂದು ಹೇಳುತ್ತಾರೆ. ಅವರು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ನಮಗೆ ತಿಳಿಸುತ್ತಿದ್ದಾರೆ, ಅದು ತಪ್ಪೇನೂ ಅಲ್ಲ. ನಾವು ಅದಕ್ಕೆ ಮತ್ತೆ ಉತ್ತರವನ್ನು ಕೊಡುತ್ತೇವೆ. ಇದೇ ಸಂಸದೀಯ ವ್ಯವಸ್ಥೆ, ಇಲ್ಲದೇ ಇದ್ದರೆ ಏನು ಉಪಯೋಗವಾಗುತ್ತದೆ? ನಾವು ಇಲ್ಲವೆಂದು ಹೇಳುವುದಿಲ್ಲ, ನಮ್ಮದು ಎಲ್ಲಾ ಹುಳುಕನ್ನು ತೆಗೆಯಿರಿ, ಸರ್ಕಾರದೆಲ್ಲಾ ತೆಗೆಯಬೇಕು, ನವು ಒಳ್ಳೆಯದನ್ನು ಮಾಡುವುದಕ್ಕೆ ಇರುವುದು ಎಂದು ಅವರು ಹೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ:- ಒಂದು ಹುಳುಕನ್ನು ತೆಗೆಯದಿದ್ದಕ್ಕೆ ನಿಮಗೆ ತಾಳ್ಮೆ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ನಾನು ತಾಳ್ಮೆಯಿಂದ ಇದ್ದೇನೆ, ಅವರಿಗೆ ತಾಳ್ಮೆಯನ್ನು ಬಿಡಿಸಬೇಡಿರಿ ಎಂದು ಹೇಳಿದ್ದೇನೆ. ನೀವು ಹೋಗಿ ಅವರನ್ನು ಬಿಡಿಸುವುದಕ್ಕೆ ಹತ್ತಿದ್ದೀರಿ? ನಾನು ತಾಳ್ಮೆಯನ್ನು ಕೆಟ್ಟಿಲ್ಲ, ಅವರು ಇನ್ನೂ ತೆಗೆಯಲಿ ಎಂದು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು:- ಅವರಿಗೆ ಟೈಮ್ ಕೊಟ್ಟರೆ ನಿಮಗೆ ಮಾತನಾಡುವುದಕ್ಕೆ ಜಾಸ್ತಿ ಅವಕಾಶವಿರುವುದಿಲ್ಲ. ಅದಕ್ಕೆ ಒಪ್ಪಿಕೊಳ್ಳುವುದಾದರೆ ಆಗಬಹುದು.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಉಪಾಧ್ಯಕ್ಷರೆ, ನಾನು ಪ್ರಸ್ತಾಪ ಮಾಡುವಂತಹ ವಿಷಯ ಯಾವುದಾದರೂ ಸುಳ್ಳುಎಂದು ಇದ್ದರೆ, ಅದು ತಪ್ಪಾಗಿದ್ದರೆ ನಾನು ತಿದ್ದಿಕೊಳ್ಳುತ್ತೇನೆ, ಸುಳ್ಳು ಎಂದು ಅವರು ಹೇಳುವುದಾದರೆ ನಾನು ಅದಕ್ಕೆ ಈ ಸದನ ಏನು ಶಿಕ್ಷೆಯನ್ನು ಕೊಡುತ್ತದೆಯೋ ಅದನ್ನು ಅನುಭವಿಸುವುದಕ್ಕೆ ನಾನು ಸಿದ್ದನಿದ್ದೇನೆ. I repeat my charges. Because of the bad management of the previous years, the financial situation in Karnataka has been deteriorated. ನಮಗೆ ಏನು ಇವತ್ತು ಬಜೆಟ್‌ನಲ್ಲಿ ಕೊಟ್ಟಿದ್ದಾರೋ ಅದರ ಹತ್ತರಷ್ಟು ಕೊಡಿ ಸ್ವಾಮಿ ಎಂದು ಅವರ ಜೊತೆಯಲ್ಲಿ ಸೇರಿಕೊಂಡು ನಾನು ಕೇಳುತ್ತೇನೆ. ದುಡ್ಡ ಎಲ್ಲಿಂದ ತಂದುಕೊಡಬೇಕು? ಸಾಲವನ್ನು ಮಾಡಬೇಡಿ ಎಂದು ಹೇಳುತ್ತಾರೆ, ನಾನು ಸಾಲದ ಬಗ್ಗೆ ಮುಂದೆ ಪ್ರಸ್ತಾಪ ಮಾಡುತ್ತೇನೆ, ಈಗ ಇಷ್ಟನ್ನು ಮಾತ್ರ ಹೇಳುತ್ತೇನೆ, ಇವರು ನಾನು ಹೇಳುವುದೆಲ್ಲವನ್ನೂ ಕೇಳಿಸಿಕೊಳ್ಳಲಿ, ನಾನು ಇವತ್ತು ಪ್ರಾಮಾಣಿಕವಾಗಿ ಹೇಳುತ್ತೇನೆ, ಇಂತಹ ಒಂದೇ ಒಂದು ನಡವಳಿಕೆಗಳು ಈ ಸರ್ಕಾರದಲ್ಲಿ ನಡೆದಿರುವುದಾದರೆ 11 ಸಾವಿರ ಕೋಟಿ ರೂಪಾಯಿಗಳು ಸರ್ಕಾರದ ಬೊಕ್ಕಸಕ್ಕೆ ಹಾಳು ಮಾಡಿರುವ ಬಗ್ಗೆ ಒಂದೇ ಒಂದು ತೀರ್ಮಾನವನ್ನು ಈ ಮುಖ್ಯಮಂತ್ರಿಗಳು ತೆಗೆದುಕೊಂಡಿರುವುದಾದರೆ, ಈ ಕ್ಯಾಬಿನೆಟ್ ತೆಗೆದುಕೊಂಡಿವುದಾದರೆ, ಈ ಸದನಕ್ಕೆ ರಾಜೀನಾಮೆಯನ್ನು ಕೊಟ್ಟು ಆಚೆಗೆ ಹೊರಟು ಹೋಗುತ್ತೇನೆ. Let him come forward. ಸಾರ್ವಜನಿಕ ಸಭೆಗೆ ಹೋಗುತ್ತೇನೆ, ಕಾಂಗ್ರೆಸ್ ಸರ್ಕಾರವಿದ್ದಾಗ ಅಬ್ಕಾರಿಯ ನಿಯಮಾವಳಿಗಳಿಗೆ ಬದಲಾವಣೆಯನ್ನು ತಂದುರು ಇಡೀ ಅಬ್ಕಾರಿ ವ್ಯವಹಾರವನ್ನು ಸರ್ಕಾರದ ಕೈಗೆ ತೆಗೆದುಕೊಂಡರು, ಅದನ್ನು ಇವರು ಅಮೆಂಡ್ ಮಾಡಿ ಪುನ: ಗುತ್ತಿಗೆದಾರರ ಕೈಗೆ ಕೊಡುತ್ತಾರೆ. ಇವತ್ತು ನಾವು ಪಾನ ನಿಗಮವನ್ನು ತಂದಿದ್ದೇವೆ, ಯಾರನ್ನೂ ದೂಷಿಸಬೇಕೆಂದು ಹೇಳುತ್ತಿಲ್ಲ. ಇದರ ಬಗ್ಗೆ ನಾನು ಆಗಲೇ ಹೇಳಿದ್ದೇನೆ. ಈಗಾಗಲೇ ತಾವುಗಳೆಲ್ಲರೂ ಒಟ್ಟಾಗಿ ಸೇರಿಕೊಂಡು ಮತ್ತೆ ಅಧಿಕಾರಕ್ಕೆ ಬರಬೇಕೆಂದು ಹೊರಟಿದ್ದೀರಿ? What guarentee is there that you are not going to destroy this Pana Nigama? ಏನು ಸ್ವಾಮಿ, ಹಿಂದೆ ಸರ್ಕಾರ ತಂದಿರುವುದನ್ನು ಇವರು ಬದಲಾವಣೆಯನ್ನು ಮಾಡಿದರು. ಮುಂದೆ ಕೂಡ ಇವರು ಮಾಡುವುದಿಲ್ಲವೆಂದು ಯಾವ ಗ್ಯಾರಂಟಿ? ಮುಂದೆ ಇದೇ 11 ಸಾವಿರ ಕೋಟಿ ರೂಪಾಯಿಗಳು ಮೆಗಾ ಪ್ರಾಜೆಕ್ಟ್‌ಗಳಿಗೆ ವಿನಾಯಿತಿ ಕೊಡುವುದಿಲ್ಲವೆಂದು ಯಾವ ಗ್ಯಾರಂಟಿ? ನೀವು ಇಲ್ಲಿ ನನ್ನನ್ನು ಮಾತನಾಡುವುದನ್ನು ತಡೆಯಬಹುದು, ನಾನು ಮಾತನಾಡುವುದನ್ನು ಸಾರ್ವಜನಿಕ ಸಭೆಯಲ್ಲಿ ತಡೆಯುವುದಕ್ಕೆ ಆಗುವುದಿಲ್ಲ. ಇಲ್ಲಿ ನಾನು ಮಾತನಾಡುವ ಬಗ್ಗೆ ನನ್ನ ನಾಲಿಗೆಯನ್ನು ತಡೆಯಬಹುದು, ಆದರೆ ರೇಕಾರ್ಡ್ಸ್‌ನಲ್ಲಿರುವುದನ್ನು ತಡೆಯುವುದಕ್ಕೆ ಆಗುವುದಿಲ್ಲ. Agro Industries Corporation alone. 98 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ, ಇದು ಸುಳ್ಳಾದರೆ ಅವರು ಕೇಳಿದ ತಪ್ಪುಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಏನೂ ಸರ್ಕಾರದ ಗಮನಕ್ಕೆ ಬರಲಿಲ್ಲವೆಂದು ಹೇಳುತ್ತೀರಾ? ಇದು ಸರ್ಕಾರದ ಗಮನಕ್ಕೆ ಬಂದಿದೆ. The concerned Minister has written an order that the COD enquiry may be conducted. ಕೆಪಿಸಿ, ನಾನು ಹೇಳಿದ ಹಾಗೆ, ಮಾನ್ಯ ಸಚಿವರಾದ ಶ್ರೀ ಚಂದ್ರೇಗೌಡರು ಹೇಳಿದ ಹಾಗೆ, ನಾನು

ಒಂದೂ ತೆಗೆದೇ ಇಲ್ಲ, ಈ ದೇಶದ ಜನರು ಬೊಕ್ಕಸಕ್ಕೆ ಕಟ್ಟುವ ಒಂದೊಂದು ರೂಪಾಯಿಯನ್ನು ಖರ್ಚು ಮಾಡುವಾಗ people representatives are expected to be the trustees. ಈ ಒಂದು ದೃಷ್ಟಿಯಿಂದ ಹೇಳುತ್ತಿದ್ದೇನೆ. ನಾನು ವಿರೋಧಪಕ್ಷದಲ್ಲಿ ಕುಳಿತುಕೊಂಡು ಕೆಲಸವನ್ನು ಮಾಡಿದ್ದೇನೆ. ಆಡಳಿತ ಪಕ್ಷದಲ್ಲಿಯೂ ಸಹ ಕುಳಿತುಕೊಂಡು ಕೆಲಸ ಮಾಡಿದ್ದೇನೆ. ನನಗೆ ಪಕ್ಷ ಎರಡನೆಯದು, ಮೊದಲನೆಯದು ಈ ದೇಶದ ಜನ, ಎರಡನೆಯದು ನನ್ನ ಪಕ್ಷ, ಮೂರನೆಯದು ಆಮೇಲೆ ಈ ರಾಜ್ಯ. ನನಗೆ ಜನ ಮೊದಲು, ಎರಡನೆಯದು ಪಕ್ಷ, ಮೂರನೆಯದು ಈ ಸರ್ಕಾರ, ಆ ಒಂದು ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ರಾಜ್ಯದ ಬೊಕ್ಕಸಕ್ಕೆ ಬರಬೇಕಾದ ಒಂದೊಂದು ರೂಪಾಯಿ ಒಂದೊಂದು ಚಕ್ಕಾಸನ್ನೂ ಕೂಡ ಸರ್ಪದ ರೀತಿಯಲ್ಲಿ ಕಾವಲನ್ನು ಕಾಯಬೇಕಾಗಿದ್ದಂಥ ನಾವು ಸಾವಿರಾರು ಕೋಟಿ ರೂಪಾಯಿಗಳನ್ನು ಬೊಕ್ಕಸಕ್ಕೆ ಬರುವುದನ್ನು ತಡೆಯುವಂತಹ ಘಟನೆಯನ್ನು ಹೇಳಿದರೆ it creates a record. ನನ್ನ ಮಾತನ್ನು ಇವರು ತಡೆಯಬಹುದು, ರೇಕಾರ್ಡ್ಸ್‌ನ್ನು ಅವರು ತಿದ್ದುವುದುಕ್ಕೆ ಆಗುವುದಿಲ್ಲ. ಆಗಿರುವಂತಹ ಘಟನೆಗಳನ್ನು ಚಲಾಯಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಕರ್ನಾಟಕ ಆಗ್ರೋ ಇಂಡಸ್ಟ್ರಿಸ್ 98 ಕೋಟಿ ರೂಪಾಯಿಗಳ ನಷ್ಟವಾಯಿತು, ಅದು ನಷ್ಟವೇನಲ್ಲ, ಅಲ್ಲಿ ಅವ್ಯವಹಾರಗಳಾಯಿತು. ಅಲ್ಲಿ ಭ್ರಷ್ಟ ತನ ನಡೆಯಿತು. ಸಂಬಂಧಪಟ್ಟಂತಹ ಮಂತ್ರಿಗಳು ಇದರ ಬಗ್ಗೆ ಸಿಓಡಿ ಎನ್‌ಕ್ವಯರಿ ಮಾಡಿ ಎಂದು ಬರೆದುಬಿಟ್ಟು ಬಂದರು. ಇವತ್ತಿನವರೆವಿಗೂ ಸಿಓಡಿ ಎನ್‌ಕ್ವಯರಿ ಆಗಿಲ್ಲ. ಒಂದು ರೂಪಾಯಿ ಅದರಿಂದ ರೆಕವರಿಯಾಗಿಲ್ಲ, ಇದನ್ನೆಲ್ಲಾ ನೋಡಿ ಸ್ವಾಮಿ, ಕರ್ನಾಟಕ ಪವರ್ ಕಾರ್ಪೊರೇಷನ್, ಒಂದು ವರ್ಷದಲ್ಲಿ ಮುಗಿಯುವಂತಹ ಕೆಲಸಕ್ಕೆ 2 ವರ್ಷವೆಂದು ಷೆಡ್ಯೂಲ್ ಟೈಮ್‌ನ್ನು ಫಿಕ್ಸ್ ಮಾಡುವುದು. ಅವರು ಒಂದು ವರ್ಷದಲ್ಲಿ ಕೆಲಸವನ್ನು ಮುಗಿಸಿದ ಎಂದು ಅವನಿಗೆ ನೂರಾರು ಕೋಟಿ ರೂಪಾಯಿಗಳನ್ನು ಇನ್‌ಸೆಂಟೀವ್ ಪೇಮೆಂಟ್ ಮಾಡುವುದು. I think ನನಗಿಂತ ಸರ್ಕಾರದಲ್ಲಿ ಹೆಚ್ಚಿನ ಮಾಹಿತಿ ಇದೆ. ಅವರು ಸಮರ್ಥರಿದ್ದಾರೆ, ಇವೆಲ್ಲಕ್ಕೂ ಅವರು ಉತ್ತರವನ್ನು ಕೊಡುತ್ತಾರೆ. ಎರಡು ವರ್ಷದಲ್ಲಿ ಆಗುವಂತಹ ಕೆಲಸವನ್ನು ಒಂದು ವರ್ಷಕ್ಕೆ ಕಾಲಾವಧಿಯನ್ನು ನಿಗಧಿ ಮಾಡುವುದು. ಮುಗಿಸುವುದು ಎಂದು ಹೇಳಿಬಿಟ್ಟು ಅವರಿಗೆ ಇನ್‌ಸೆಂಟೀವ್ಸ್ ಕೊಡುವುದು. ನಾನು ಯಾವುದಾದರೂ ಸರ್ಕಾರ ಒಂದು ವರ್ಷದಲ್ಲಿ ಮುಗಿಸುವಂತಹ ಕೆಲಸವನ್ನು ಮೂರು ವರ್ಷ ಡಿಲೇ ಮಾಡಿದರಲ್ಲಾ ಕಂಟ್ರಾಕ್ಟರ್, ಅವರಿಂದ ಒಂದೇ ಒಂದು ರೂಪಾಯಿಯನ್ನು ರೆಕವರಿ ಮಾಡಿ ಬೊಕ್ಕಸಕ್ಕೆ ಕಟ್ಟಿದ್ದು ನಿಮಗೂ ಗಮನಕ್ಕೆ ಬಂದಿಲ್ಲ, ನನಗೂ ಗಮನಕ್ಕೆ ಬಂದಿಲ್ಲ. ಆದರೆ ನೂರಾರು ಕೋಟಿ ರೂಪಾಯಿಗಳನ್ನು ಗುತ್ತಿಗೆದಾರನಿಗೆ ಬೇಗ ಮುಗಿಸಿದ ಎಂದು ಇನ್‌ಸೆಂಟೀವ್ ಕೊಟ್ಟಿರುವುದು ಮಾತ್ರ ನಮಗೆ ಗೊತ್ತಿದೆ.

ಶ್ರೀ ಬಿ.ಸೋಮಶೇಖರ್:– ಅದನ್ನು ನಾನು ಓದಿದ್ದೆ, ಮೆಗಾ ಪ್ರಾಜೆಕ್ಟ್ಸ್‌ಗಳಿಗೆ ರಿಯಾಯಿತಿ ಕೊಟ್ಟಿದ್ದು, ಮತ್ತು ಅದನ್ನು ಮುಂದುವರಿಸಿಕೊಂಡು ಹೋಗಿರುವುದು ತಾವು ಹೇಳಿದ್ದೀರಿ. ಮೆಗಾ ಪ್ರಾಜೆಕ್ಟ್ಸ್‌ಗಳಿಗೆ ರಿಯಾಯಿತಿ ಕೊಡುವಾಗ ಯಾವ ಮಂತ್ರಿ ಇದ್ದರು, ಮತ್ತೆ ಈಗ ಯಾವ ಮಂತ್ರಿಗಳು ಮುಂದುವರಿಯುತ್ತಿದ್ದಾರೆ. ಯಾರು ಎಂದು ನಿಮಗೆ ಗೊತ್ತು. ಅವರನ್ನೇ ಮುಂದುವರಿಸಿಕೊಂಡು ಹೋಗುವಂತಹ ಅನಿವಾರ್ಯತೆ ಯಾರಿಗೆ ಬಂದಿದೆ, ಅದನ್ನು ತಾವು ಯೋಚನೆ ಮಾಡಬೇಕು. ಆಗ್ರೋ ಇಂಡಸ್ಟ್ರೀಸ್ ಬಗ್ಗೆ ಹೇಳಿದ್ದೀರಿ, ಅದನ್ನು ಗೊತ್ತಾದ ಮೇಲೆ ಸಿಓಡಿ ಎನ್‌ಕ್ವೈಯರಿ ಮಾಡಬೇಕೆಂದು ಆದೇಶವನ್ನು ಮಾಡಿದ ಮೇಲೆ ನಾವೇನೂ ಮುಚ್ಚಿಹಾಕುವುದಕ್ಕೆ ಪ್ರಯತ್ನ ಮಾಡಿಲ್ಲ.

ಅದಕ್ಕಾಗಿ ತಾವು ನಾಲ್ಕು ವರ್ಷದಿಂದ ಸರ್ಕಾರದಲ್ಲಿದ್ದೀರಿ, ಅದನ್ನು ಮುಂದುವರಿಸಿ ಯಾರ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ನಾವೇನೂ ಆಡಿಟ್ ಬಂದಿದ್ದೀವಾ? ಅದನ್ನು ನೀವು ಮಾಡಬೇಕಾಗಿತ್ತು? ಪಾನ ನಿಗಮದ ಬಗ್ಗೆ ಹೇಳುವುದಾದರೆ ಅದರಲ್ಲಿ ಏನೂ ಒಳಗಡೆ ಇದೆ ಸಂದರ್ಭ ಬಂದಾಗ ಅದನ್ನು ನಾವು ಹೇಳುತ್ತೇವೆ. ಈಗ ತಾವು ಅವರೂ ನಮಗೂ ಒಂದು ಡಿಬೇಟ್ ನಡೆಯಲಿ. ತಮ್ಮ ನಾಲ್ಕು ವರ್ಷದಲ್ಲಿ ನಾವು ಏನು ಐದು ವರ್ಷದಲ್ಲಿ ಮಾಡಿದ್ದೇವೆ ಅದನ್ನೆಲ್ಲಾ ಪಟ್ಟಿ ಸದನದಲ್ಲಿಡಿ, We are prepared for any enquiry. ತಾವು ಏನೇನು ಮಾಡಿದ್ದೀರಿ ಎನ್ನತಕ್ಕಂಥದ್ದನ್ನು ನಾವು ಇಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ:– ತಾವು ಹೇಳಿದ್ದೀರಿ.

ಶ್ರೀ ಬಿ. ಸೋಮಶೇಖರ್:– ನಾವು ಎಲ್ಲಿ ಹೇಳಿದ್ದೇವೆ?

ಶ್ರೀ ವೈ.ಕೆ. ರಾಮಯ್ಯ:– ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಸೋಮಶೇಖರ್‌ರವರು ಭಾಷಣ ಮಾಡುವಾಗ ಕಣ್ಣು ಕಿವಿ ಎಲ್ಲವನ್ನೂ ತೆಗೆದುಕೊಂಡು ಕೇಳುತ್ತಿದ್ದೆ. ಯಾವುದಾದರೂ ತೆಗೆದು ಇಟ್ಟಿದ್ದರೆ ನಾನು ಬಹಳ ಸಂತೋಷದಿಂದ ಅವರನ್ನು ಅಪ್ರೀಷಿಯೇಟ್ ಮಾಡುತ್ತಿದ್ದೆ. Who prevented these people to ಯಾವುದಾದರೂ ಇದ್ದಿದ್ದರೆ ಒಂದನ್ನು ನಾನು ಸಾವಿರಾರು ಕೋಟಿ ರೂಪಾಯಿಗಳ ಬಗ್ಗೆ ಹೇಳುತ್ತಿದ್ದಿನಲ್ಲಾ, ಇಂತಹ ಒಂದೇ ಈ ಸರ್ಕಾರದ ಒಂದು ಹಗರಣವನ್ನು ಬಿಚ್ಚಿಟ್ಟಿದ್ದರೆ ನೀವು ವಿರೋಧಪಕ್ಷದಲ್ಲಿ ಕುಳಿತುಕೊಂಡಿರುವುದಕ್ಕೆ ಸಾರ್ಥಕವಾಗುತ್ತಿತ್ತು.

ಶ್ರೀ ಬಿ.ಸೋಮಶೇಖರ್:– ನಾವು ಹೇಳಿದಕ್ಕೆ ಅದಕ್ಕೇನು ಸಮಜಾಯಿಷಿಯನ್ನು ಕೊಡುತ್ತೀರೋ ಕೊಡಿ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಸೋಮಶೇಖರ್‌ರವರೆ, ತಾವು ಕುಳಿತುಕೊಳ್ಳಿ ಹೇಳುತ್ತೇನೆ. ನಾನು ಓದಬಾರದು ಎಂದು ಇದ್ದೆ, ಈಗ ಅದನ್ನು ಓದುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್:– ಹಗಲೆಲ್ಲಾ ಹೇಳಬಾರದು ಎಂದು ಬಿಟ್ಟಿದ್ದೇವೆ, ಎಲ್ಲವನ್ನೂ ಹೇಳುತ್ತೇವೆ. ಇಲ್ಲಿ ಸಿಎಜಿಯವರು ಆಡಿಟ್ ರಿಪೋರ್ಟ್‌ನಲ್ಲಿ ಬರೆದಿದ್ದಾರೆ.

SRI Y.K. RAMAIAH:- I am on my legs.

ಶ್ರೀ ಎಸ್.ಎಸ್. ಪಾಟೀಲ್:– ಸಿಎಜಿಯವರು ಆಡಿಟ್ ರಿಪೋರ್ಟಿನಲ್ಲಿ ಬರೆದಿದ್ದಾರೆ. ಸಿಎಜಿಯವರ ವರದಿ ಬಂದಿದೆ, ಕಾರ್ಪೊರೇಷನ್ ಬಗ್ಗೆ ಬಂದಿದೆ. ಮಾನ್ಯ ಉಪಾಧ್ಯಕ್ಷರೆ, ತಾವು ಸಮಯವನ್ನು ಕೊಟ್ಟರೆ ಎಲ್ಲವನ್ನೂ ಹೇಳುತ್ತೇವೆ. ಪ್ರಶ್ನೆಯೇ ಇಲ್ಲ. ಎಲ್ಲವನ್ನು ಹೇಳುತ್ತೇವೆ.

ಉಪಾಧ್ಯಕ್ಷರು:– ಈಗ ಮಾತನಾಡುವುದಕ್ಕೆ ವೈ.ಕೆ. ರಾಮಯ್ಯನವರಿಗೆ ಅವಕಾಶವನ್ನು ಕೊಟ್ಟಿದ್ದೇವೆ, ಮಾನ್ಯ ಪಾಟೀಲರೆ, ತಾವು ಕುಳಿತುಕೊಳ್ಳಿ. ನಿಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಾಗ ತಾವು ಮಾತನಾಡುವಿರಂತೆ. ಈಗ ತಾವು ಕುಳಿತುಕೊಳ್ಳಿ.

ಶ್ರೀ ವೈ.ಕೆ. ರಾಮಯ್ಯ:– ವಿಜಯನಗರ ಜಿಂದಾಲ್‌ನವರಿಗೆ 2370 ಕೋಟಿ ರೂಪಾಯಿಗಳ ಎಕ್ಸ್‌ಮ್‌ಷನ್ ಕೊಟ್ಟಿದ್ದಾರೆ. ಇದನ್ನು ಕೊಟ್ಟಿರುವುದು ನಾವಲ್ಲ ಇದನ್ನು 2000 ಇಸವಿಯ ಹಿಂದಕ್ಕೆ ಕೊಟ್ಟಿರುವುದು, ಅವರು ಹೇಳುವುದನ್ನು ನಾವು ಯಾರೂ ಅಡ್ಡಿ ಮಾಡುವುದಿಲ್ಲ. ನಮ್ಮ ಆರೋಗ್ಯ ದೃಷ್ಟಿಯಿಂದಲೇ ಕಹಿ ಗುಳಿಗೆಗಳನ್ನು ನಮಗೆ ಯಾರಾದರೂ ಅಡ್ಮಿನಿಸ್ಟ್ರೇಟ್ ಮಾಡಿ ತಿನ್ನಿಸಿದರೆ ನಾವು ಕಹಿಗುಳಿಗೆಗಳನ್ನು ತಿನ್ನುವುದು ಉತ್ತಮ ನಾವು ಅದು ಆರೋಗ್ಯಕ್ಕೆ ಒಳ್ಳೆಯದು. ಅದನ್ನು ಬಿಟ್ಟು ನೀವು ಕಣ್ಣಿಗೆ ಖಾರದಮಡಿಯನ್ನು ಎರಚಬೇಡಿ. ತಾವು ಕಹಿಗುಳಿಗೆಗಳನ್ನು ಕೊಡಿ ಅದು

ಆರೋಗ್ಯಕ್ಕೆ ಒಳ್ಳೆಯದು ಅದನ್ನು ನಾವು ಅರಗಿಸಿಕೊಳ್ಳುತ್ತೇವೆ. ಆದರೆ ಕಣ್ಣಿಗೆ ಖಾರದಪುಡಿಯನ್ನು ಎರಚಿದರೆ ನಾನು ಏನು ಮಾಡಲಿ? ನಿಮಗೆ ಕಹಿಗುಳಿಗೆಗಳನ್ನು ಕೊಡಬೇಡಿ ಎಂದು ಹೇಳಿದ್ದೇವಾ? ಎಷ್ಟು ಕಹಿಗುಳಿಗೆಗಳನ್ನು ನುಂಗಿದರೂ ಆಡಳಿತ ದೃಷ್ಟಿಯಿಂದ ಆಡಳಿತ ಪಕ್ಷಕ್ಕೆ ಅದು ಒಳ್ಳೆಯದು. ಅದನ್ನು ನಾವು ನುಂಗುವುದಕ್ಕೆ ಸಿದ್ಧರಿದ್ದೇವೆ, ಆ ಕೆಲಸವನ್ನು ಮಾಡಿ ದುಯಮಾಡಿ ತಾವು ಕಣ್ಣಿಗೆ ಖಾರದ ಪುಡಿಯನ್ನು ಎರಚಬೇಡಿ. ಮೈಸೂರು ಮಿನರಲ್ ಕಾರ್ಪೋರೇಷನ್ ಅರ್ಧ ಕೋಟಿ ರೂಪಾಯಿಗಳ ಒಂದು ಮೆಷಿನ್‌ನ್ನು ತಂದು ಯಾರಿಗೂ ಹೇಳಲಿಲ್ಲ, ಇದರ ಬಗ್ಗೆ ರೆಕಾರ್ಡ್ಸ್ ನನ್ನ ಹತ್ತಿರ ಇಲ್ಲ, ಸರ್ಕಾರದ ಹತ್ತಿರ ಇದೆ ಬೇಕಾದರೆ ತಾವು ತರಿಸಿಕೊಳ್ಳಿ. ಬೋರ್ಡ್‌ನವರ ಗಮನಕ್ಕೂ ತರದೆ ಅರ್ಧ ಕೋಟಿ ರೂಪಾಯಿಗಳನ್ನು ಕೊಟ್ಟು ಮೆಷಿನ್‌ನ್ನು ಕೊಂಡುಕೊಂಡು ಮಂತ್ರಿಯವರು ಮತ್ತು ಎಂಡಿಯವರು ವಸ್ತು ಪ್ರದರ್ಶನವನ್ನು ನೋಡುವುದಕ್ಕೆ ಹೋಗಿದ್ದರಂತೆ, ಆ ಎಕ್ಸಿಬಿಷನ್‌ನಲ್ಲಿ ಮೆಷಿನ್ ಚೆನ್ನಾಗಿ ಕಾಣಿತಂತೆ ಅದನ್ನು ಕೊಂಡುಕೊಂಡರಂತೆ. ನೋಡಿ ಎಷ್ಟು ಸುಲಭ, ಸಾರ್ವಜನಿಕರ ಹಣ ಅದನ್ನು ಕೊಂಡುಕೊಂಡು ಇಲ್ಲಿ ತಂದರಂತೆ. ಇಲ್ಲಿ ತಂದಾದ ಮೇಲೆ ಆ ಮೇಷಿನ್ ಇಂಡಿಯನ್ ಕಲ್ಲುಗಳನ್ನು ಕಟ್ ಮಾಡುವುದಿಲ್ಲ, ಎಂದು ಗೊತ್ತಾಯಿತಂತೆ ವಾಪಸ್ಸು 13 ರಿಂದ 14 ಲಕ್ಷ ರೂ. ಗೋ ಆ ಯಂತ್ರವನ್ನು ಮಾರಿದ್ದಾರಂತೆ. ಇದು ಯಾವುದಾದರೂ ಸುಳ್ಳಾದರೆ ಅದನ್ನು ಹೇಳಿ, ನಾನು ಇಷ್ಟೆಲ್ಲಾ ಉದಾಹರಣೆಗಳನ್ನು ಏತಕ್ಕಾಗಿ ಕೊಡಬೇಕಾಯಿತೆಂದರೆ, ಅನೇಕ ವರ್ಷಗಳು ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸಿದಂತಹ ಅದು ಸರ್ಕಾರವಿರಬಹುದು, ಸಿಸ್ಟಮ್ ಇರಬಹುದು, ಅದುಯಾವುದೋ ಒಂದು ಪಕ್ಷದ ಸರ್ಕಾರವಿರಬಹುದು, ಉತ್ತಮವಾಗಿ ನಿರ್ವಹಣೆಯನ್ನು ಮಾಡದೆ ಇರುವಂತಹ ಕಾರಣಕ್ಕಾಗಿ ಇದರ ಬಗ್ಗೆ ಸ್ಪಷ್ಟವಾದಂತಹ ನಮ್ಮ ಕಣ್ಮುಂದೆ ನಿರ್ದಶನಗಳು ಇವೆ. ಆ ಕಾರಣಕ್ಕಾಗಿ ಇವತ್ತು ಆರ್ಥಿಕ ಸಂಕಷ್ಟವನ್ನು ನಾವು ಅನುಭವಿಸಬೇಕಾಗಿ ಬಂದಿದೆ. ಎನ್ನುವಂತಹ ಒಂದೇ ಒಂದು ಕಾರಣಕ್ಕಾಗಿ ಈ ವಿಷಯವನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಹಣದ ಕೊರತೆ ಇದೆ, ಸಾಲವನ್ನು ಮಾಡಬೇಡಿ, ಮಾನ್ಯ ಮುಖ್ಯಮಂತ್ರಿಗಳು ವರ್ಲ್ಡ್ ಬ್ಯಾಂಕ್‌ನಿಂದ ಸಾಲವನ್ನು ತರುವುದಿಲ್ಲ, ಅವರು ಯಾರ ಹತ್ತಿರ ಸಾಲವನ್ನು ಮಾಡುವುದಿಲ್ಲವೆಂದು ಹೇಳಿಬಿಟ್ಟಿದ್ದಾರೆ. ಅದಕ್ಕಾಗಿ ನಾನು ಹೇಳಿದ್ದೇನೆ, ಇದನ್ನು ಹೇಗೆ ನಿಭಾಯಿಸಬೇಕೆಂದು ನಾವು ಎಲ್ಲರೂ ಕುಳಿತುಕೊಂಡು ಚರ್ಚೆ ಮಾಡೋಣ. ಸಾಲವನ್ನು ತರಬೇಡಿ ಎಂದು ಹೇಳುತ್ತೀರಿ, ಅಭಿವೃದ್ಧಿಗೆ ಹಣವನ್ನು ಜಾಸ್ತಿ ತೊಡಗಿಸಬೇಕು. ಇಲ್ಲಿ ಮೊಬಿಲೈಜ್, ಟ್ಯಾಕ್ಸೇಷನ್‌ನ್ನು ಜಾಸ್ತಿ ಮಾಡಿ, Karnataka is the highest taxing State ಕರ್ನಾಟಕದಲ್ಲಿ ಈಗಾಗಲೇ ಎಷ್ಟು ಟ್ಯಾಕ್ಸ್‌ಗಳನ್ನು ಹಾಕುವುದಕ್ಕೆ ಸಾಧ್ಯವೋ ಅಷ್ಟು ಟ್ಯಾಕ್ಸ್‌ನ್ನು ಹಾಕಿ ಆಗಿಹೋಗಿದೆ. ಏನಾದರೂ ಮಾಡುವುದಿದ್ದರೆ efficiency and productivity increase ಮಾಡಬಹುದೇ, ಹೊರತು ಇನ್ನು ಮತ್ತೆ ಟ್ಯಾಕ್ಸ್ ಕರ್ನಾಟಕದಲ್ಲಿ ಹಾಕುವುದಕ್ಕೆ ಅವಕಾಶವಿಲ್ಲ. ಇನ್ನು ಎಲ್ಲಿಂದ ಹಣವನ್ನು ತರಬೇಕು? ಸಾಲ ಮಾಡುವಾಗಲೂ 3 ವಿಷಯಗಳನ್ನು ಗಮನಿಸಬೇಕಾಗುತ್ತದೆ. (1) Availability of the Loan (2) Necessity of the Loan and (3) most improtant of all the capacity to repay it. ಇವತ್ತು ನಮಗೆ ಅದೇ ದುರಂತ ಬಂದಿರುವುದು. ನಮ್ಮ ಯೋಜನೇತರ ವೆಚ್ಚದಲ್ಲಿ ಸಂಬಳವಷ್ಟೇ ಅಲ್ಲ. ಇದಕ್ಕೆ ಕೊಡುತ್ತಿರುವಂತಹ ಬಡ್ಡಿ ತೊಡಗಿಸುತ್ತಿರುವಂತಹ ಹಣ ಇವು ನಮ್ಮ ಕುತ್ತಿಗೆಗೆ ಬಂದಿರುವುದು. The capacity to repay i.e., the most important consideration, when you are borrowing the money either from any source. ಇದನ್ನು ನಾವು

ಗಮನಿಸಬೇಕಾಗುತ್ತದೆ. ಒಂದು ಕಾಲ ಇತ್ತು, ರಾಜ್ಯ ಸರ್ಕಾರವು ಯಾವುದೇ ಲಂಗುಲಗಾಮು ಇಲ್ಲದೆ ಸಾಲವನ್ನು ಮಾಡಿದೆ, ನಾನು ಈ ಸದನದ ಮೂಲಕ ನನ್ನ ಸ್ನೇಹಿತರಿಗೆ, ಮತ್ತು ರಾಜ್ಯದ ಜನತೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಏನು ಈ ಸರ್ಕಾರ ಫಿಸಿಕಲ್ ರೆಸ್ಪಾನ್ಸಿಬಿಲಿಟಿ ಆ್ಯಕ್ಟ್‌ನ್ನು ತಂದಿದೆಯೋ ಇದರ ಮುಖಾಂತರ ಇವತ್ತು ಸಾಲವನ್ನು ಮಾಡುವುದಕ್ಕೂ ಕೂಡ ಸರ್ಕಾರಕ್ಕೆ ಸ್ವಾತಂತ್ರ ಇಲ್ಲ. ಏಕೆಂದರೆ, ಇವತ್ತು ಜಾರಿಯಲ್ಲಿರುವಂತಹ ಫಿಸಿಕಲ್ ರೆಸ್ಪಾನ್ಸಿಬಿಲಿಟಿ ಆ್ಯಕ್ಟ್‌ನ ಪ್ರಕಾರ ನಂ:1 you must completely liquidate the revenue deficiency .(2) you should not exceed 3% (3) The borrowing shoould not exceed the 1:38 of the GSDP.. GSDPಗಿಂತ 33ರಷ್ಟು ಮ್ಯಾಕ್ಸಿಮಮ್ ಹೋಗಬಹುದು, 30 ನಾರ್ಮಲ್, 33ಕ್ಕೆ ಹೋದರೆ ಅದು ಅತ್ಯಂತ ಕೆಟ್ಟ ಪರಿಸ್ಥಿತಿಗೆ ಬರಬೇಕಾಗುತ್ತದೆ. ಇವತ್ತು ಕರ್ನಾಟಕ 38ಕ್ಕೆ ಈಗಾಗಲೇ ತಲುಪಿದೆ. ಜಿ.ಡಿಪಿ ಅನುಪಾತದ 38 ರಷ್ಟು ತಲುಪಿದೆ. There is no scope for borrowing at all. If we still continues to borrow, that will leads to a debt trap. ನಾನು ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಿ ಈ ಸರ್ಕಾರ ಮಾಡಿರುವಂತಹ ಒಳ್ಳೆಯ ಕೆಲಸಗಳ ಬಗ್ಗೆ ಹೇಳುವುದಕ್ಕೆ ಹೋದರೆ ನಮ್ಮ ಶ್ರೀನಿವಾಸಗೌಡರು, ರಾಮಯ್ಯನವರನ್ನು ಮಂತ್ರಿ ಮಾಡಲಿ ಎಂದು ಅವರು ಹೇಳುತ್ತಾರೆ. ಸ್ವಲ್ಪ ಕಟುವಾಗಿ ಹೇಳೋಣವೆಂದರೆ, ಕಾಗೇರಿಯವರು ಹೇಳುತ್ತಾರೆ...

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ:- ಮಂತ್ರಿಗಳಾಗಿ ಮಾಡಲಿ, ಬೇಕಾದರೆ ಇನ್ನು ಒಳ್ಳೆಯ ಮಂತ್ರಿ ಹುದ್ದೆಯನ್ನು ಕೊಡಲಿ ಚೆನ್ನಾಗಿ ಉತ್ತರ ಹೇಳುತ್ತಾರೆ. ನಮಗೆ ಗ್ರಹಚಾರವನ್ನು ಕೊಡುತ್ತಿದ್ದಾರೆ ಮಾನ್ಯ ಚಂದ್ರೇಗೌಡರು. ಅವರಿಗೆ ಇನ್ನೂ ಯಾವುದೋ ಒಳ್ಳೆಯ ಮಂತ್ರಿಯಾಗಿ ಕೊಟ್ಟು ನಿಮಗೆ ಅದೇ ಮಂತ್ರಿ ಹುದ್ದೆ ಕೊಟ್ಟರೂ ಬೇಡ ಎಂದು ಹೇಳುವವರು ಯಾರು? ನಾವು ಸಂತೋಷ ಪಡುವವರು ಸ್ವಾಮಿ.

ಶ್ರೀ ಆರಗ ಜ್ಞಾನೇಂದ್ರ:- ಇಲ್ಲಾ ಸಾರ್ ನನ್ನದಂತೂ ತಕರಾರು ಉಂಟು. ಏಕೆಂದರೆ, ಇನ್ನು ಎಷ್ಟು ತಿಂಗಳು ಮಹಾ ಇರುವುದು, ಈ ಶಾರ್ಟ್‌ಪಿರಿಯಡ್‌ನಲ್ಲಿ ರಾಮಯ್ಯ ನವರನ್ನು ಮಾಡಬೇಡಿ. ಮಾಡುವುದಾಗಿದ್ದರೆ ಐದು ವರ್ಷ ಮಾಡಬೇಕಾಗಿತ್ತು.

ಶ್ರೀ ವೈ.ಕೆ. ರಾಮಯ್ಯ:- ಇಲ್ಲ, ಏನಾದರೂ ಸರ್ಕಾರದ ಮೇಲೆ ಕಟುವಾಗಿ ಮಾತನಾಡೋಣವೆಂದರೆ ಮಾನ್ಯ ಕಾಗೇರಿಯವರು ಹೇಳುತ್ತಾರೆ ರಾಮಯ್ಯನವರು ಮಂತ್ರಿಯಾಗ ಬೇಕಾಗಿತ್ತು, ಅದಕ್ಕಾಗಿ ಸಿಟ್ಟಾಗಿ ಮಾತನಾಡುತ್ತಿದ್ದಾರೆ ಎನ್ನುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ:- ಇಲ್ಲಾ ಸಾರ್, ಅದಕ್ಕಾಗಿ ಮಾನ್ಯ ಕಾಗೇರಿಯವರು ಹೊರಗೆ ಹೋದರು. ಈ ಅಧಿವೇಶನದಲ್ಲಿ ಮಾನ್ಯ ರಾಮಯ್ಯನವರ ಹತ್ತಿರ ಜಗಳವನ್ನು ಆಡುವುದು ಬೇಡ ಎಂದು.

ಶ್ರೀ ವೈ.ಕೆ. ರಾಮಯ್ಯ:- ಈ ಇಕ್ಕಟ್ಟಿನಲ್ಲಿರುವುದರಿಂದ ನಾನು ಈ ಸರ್ಕಾರವನ್ನು ಹೊಗಳುವುದಕ್ಕೆ ಆಗದೆಯೇ, ತೆಗಳುವುದಕ್ಕೆ ಆಗದೆಯೇ ನಿಭಾಯಿಸಿಕೊಂಡು ಹೋಗಬೇಕಾಗುತ್ತದೆ. ಮಾನ್ಯ ಶ್ರೀನಿವಾಸಗೌಡರು ಮತ್ತು ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರಿಗೆ ಹೆದರಿಕೊಂಡು. ಆದರೆ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ, ಕಳೆದ ವರ್ಷನೋ ಅಥವಾ ಆಚೆ ವರ್ಷನೋ ನಮ್ಮ

ಮುಖ್ಯಮಂತ್ರಿಗಳು ಆಯವ್ಯಯ ಭಾಷಣವನ್ನು ಓದಿ ಮುಗಿಸಿದ ಮೇಲೆ ಡಿವಿಜಿಯವರು ಒಂದು ಪದ್ಯವನ್ನು ಹೇಳಿದ್ದರು. ಅದು ಸ್ವಲ್ಪ ನನಗೆ ಜ್ಞಾಪಕವಿದೆ.

"ಜಗಕ್ಕೆಲ್ಲಾ ಬೆಳಕು ಕೊಡುವ ಸೂರ್ಯ ಉದಯಿಸುವಾಗ ತಮಟೆಯ ಸದ್ದಿಲ್ಲ,
ವಿಶ್ವಕ್ಕೆಲ್ಲಾ ಅನ್ನು ಕೊಡುವ ಬೀಜ ಮೊಳಕೆಯೊಡೆಯುವಾಗ ಗಂಟೆಯ ನಿನಾದವಿಲ್ಲ,
ಫಲ ಮಾಗಿ ಹಣ್ಣಾಗುವಾಗ, ಯಾವ ಗದ್ದಲವೂ ಇಲ್ಲ ಎಲ್ಲವನ್ನೂ ನಾನು ಮಾಡಿದ್ದೇನೆ
ಎಂಬ ಹಮ್ಮಿಕೆ ಒಲೆ ನಿನ್ನ ಬಾಯಿ ಮಂಕುತಿಮ್ಮ" ಅದರಿಂದ ಎಲ್ಲವನ್ನೂ

ಮಾಡಿಕೊಂಡಿದ್ದೇವೆಂದು ಹೇಳಿಕೊಳ್ಳುವುದರ ಬದಲು ಅದನ್ನು ಜನರ ತೀರ್ಮಾನಕ್ಕೆ ಬಿಡೋಣ. ನಾವು ಏನು ಮಾಡಿದ್ದೇವೆ, ಏನು ಮಾಡಿಲ್ಲವೆಂದು ಜನರ ತೀರ್ಮಾನಕ್ಕೆ ಬಿಡೋಣ. ಆದ್ದರಿಂದ ಈ ಸಾಲವನ್ನು ತೆಗೆದುಕೊಳ್ಳುವಾಗಲೂ ಕೂಡ ಸರ್ವ ಸ್ವಾತಂತ್ರ್ಯವನ್ನು ಯಾವುದೇ ಸರ್ಕಾರಕ್ಕೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರಣಕ್ಕಾಗಿಯೇ ಫಿಸಕಲ್ ರೆಸ್ಪಾನ್ಸಿಬಿಲಿಟಿ ಆ್ಯಕ್ಟ್‌ನ್ನು ತಂದಿರುವುದು. ಈ ಆ್ಯಕ್ಟ್‌ನ ಪ್ರಕಾರ 30 ರಿಂದ 33 ಪರ್ಸೆಂಟ್ ಮಾಡಬಹುದು, ಈಗಾಗಲೇ ಕರ್ನಾಟಕ ಸರ್ಕಾರ 38 ಪರ್ಸೆಂಟ್‌ಗೆ ಹೋಗಿರುವುದರಿಂದ ಜಿಡಿಎಸ್‌ಪಿಯ ಅನುಪಾತದಲ್ಲಿ ಇನ್ನು ಮುಂದೆ ಸಾಲವನ್ನು ತರುವುದಕ್ಕೆ ಕೂಡ ಸಾಧ್ಯವಾಗುವುದಿಲ್ಲ. ಆಮೇಲೆ ಟ್ಯಾಕ್ಸ್‌ನ್ನು ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಇರುವುದು ಒಂದೇ ಒಂದು ದಾರಿ ಎಂದರೆ ಎಲ್ಲೆಲ್ಲಿ ನಮ್ಮ ಸೋರುವಿಕೆ ಇದೆಯೋ ಅವನ್ನು ಪೆಗ್ ಮಾಡುವಂತಹದ್ದು ಆಗಬೇಕು. ಎಲ್ಲೆಲ್ಲಿ ನಾನು ಹಣವನ್ನು ಅನಾವಶ್ಯಕವಾಗಿ ಖರ್ಚು ಮಾಡುತ್ತಿದ್ದೇವೆಯೋ ಅದನ್ನು ತಡೆಯುವಂತಹ ಕೆಲಸಗಳಾಗಬೇಕು. ಇವುಗಳ ಮುಖಾಂತರ ಮಾಡಿದರೆ ಮಾತ್ರ ನಾವು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದಕ್ಕೆ ಸಾಧ್ಯ.

ಶ್ರೀ ಅರಗ ಜ್ಞಾನೇಂದ್ರ:- ಸರ್ಕಾರ ಈ ಪಾನೀಯ ನಿಗಮ ಮಾಡಿರುವ ಕಾರಣ, ಶ್ರೀಮಂತರು ಕುಡಿಯುವ ಲಿಕ್ಕರ್ಸ್ ಬೆಲೆ ಬಹಳ ಕಡಿಮೆಯಾಗಿದೆ, 800 ರೂಪಾಯಿ ಬೆಲೆಯಿಂದ ಬಾಟಲಿ ಈಗ 300–500 ರೂಪಾಯಿಗಳಷ್ಟಾಗಿವೆ, ಆದರೆ ಸಾಮಾನ್ಯ ಮನುಷ್ಯರು ಕುಡಿಯುವ ಪಾನೀಯಗಳು 5 ರಿಂದ 10 ರೂಪಾಯಿ ಜಾಸ್ತಿಯಾಗಿದೆ. ಹೀಗಾಗಿ ಶ್ರೀಮಂತರು ಕೊಡುವ ತೆರಿಗೆ ಈಗ ತಪ್ಪಿತು, ಯಾರಿಗೆ ತೆರಿಗೆ ರಿಯಾಯಿತಿ ಬೇಕಾಗಿತ್ತೋ ಅವರಿಗೆ ಸಿಗಲಿಲ್ಲ. ಇದರಿಂದ ಸರ್ಕಾರಕ್ಕೆ ಏನು ಆದಾಯ ಬಂದ ಹಾಗೆ ಆಯಿತು ಎನ್ನುವುದು ನನಗೆ ಅರ್ಥವಾಗಲಿಲ್ಲ.

ಶ್ರೀ ವೈ.ಕೆ. ರಾಮಯ್ಯ:- ಈ ಬಾಕಿ ಹಣ 476.00 ಕೋಟಿ ರೂ.ಇವನ್ನೆಲ್ಲಾ ನೋಡಿದಾಗ It is negligible ನಾನು ನೋಡಿದೆ, ಒಟ್ಟು 476.00 ಕೋಟಿ, ಇದರಲ್ಲಿ 14 ಅಥವಾ 15 ಕೋಟಿ ರೂ ಕಳೆದ ತಿಂಗಳು ಬಂದಿದೆ. ಆದ್ದರಿಂದ ಸಾವಿರಾರು ಕೋಟಿ ರೂಪಾಯಿಗಳ ಬಗ್ಗೆ ಮಾತ್ರ ನಾನು ಹೇಳುತ್ತಿದ್ದೇನೆ. ಹಾಗಾಗಿ ಅಬಕಾರಿ ಇಲಾಖೆಯಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಹಣ ನನ್ನ ಅಂಕಿ ಅಂಶಗಳ ಪ್ರಕಾರ ಸುಮಾರು 476.00 ಕೋಟಿ ರೂಪಾಯಿಗಳು, ಅಷ್ಟೆ. ಕಳೆದ ವರ್ಷ ಸುಮಾರು 14 ಅಥವಾ 15 ಕೋಟಿ ರೂಪಾಯಿ ರಿಕವರಿ ಆಗಿದೆ, ಇದು ನಮ್ಮ ಪಾನೀಯ ಪದ್ಧತಿ ಬಂದಾಗಲಿಂದಲೂ ಆಗಿರುವಂತಹದು. ಈ ಅಬಕಾರಿ ಇಲಾಖೆ ಬಗ್ಗೆ ಮಾತನಾಡುವಾಗ ಅನೇಕ ವಿಶಿಷ್ಟ ಸಮಸ್ಯೆಗಳನ್ನು ನಾವು ಎದುರಿಸಬೇಕಾಗುತ್ತದೆ. ವೈವಿಧ್ಯಮಾನವಾದ ವಿಷಯಗಳನ್ನು ನಾವು ಅರಗಿಸಿಕೊಳ್ಳಬೇಕಾಗಿತ್ತದೆ. ಒಂದು ಕಡೆ ಇಂತಿಷ್ಟೇ ಟ್ಯಾಕ್ಸ್ ರಿಕವರಿ ಮಾಡಬೇಕು ಎಂದು ಹೇಳುತ್ತಾರೆ, ಇನ್ನೊಂದು ಕಡೆ ಸಂಯಮ ಮಂಡಳಿ ಮಾಡಿ ಜನಗಳಿಗೆ ಕುಡಿಯಬೇಡಿ ಎಂದು ಹೇಳುತ್ತಾರೆ. ಇಂಥ ಅನಿವಾರ್ಯ ಪರಿಸ್ಥಿತಿಯ ಮಧ್ಯೆ ನಾವು ಬದುಕಬೇಕಾಗುತ್ತದೆ, ಆದ್ದರಿಂದ ಬೇರೆ ಇಲಾಖೆಗಳಿಗೆ

ಹೋಲಿಸಿದಾಗ ಅಬಕಾರಿ ಇಲಾಖೆಯ ಬಾಕಿ ಅಷ್ಟೇನೂ ದೊಡ್ಡದಿಲ್ಲ ಎಂಬುದು ನನ್ನ ಭಾವನೆ. 6808 ಕೋಟಿ ರೂ ಡೆಫರ್ಡ್ ಪೆಮೆಂಟ್ ಅನ್ನು ರಿಕವರಿ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತಿಲ್ಲ. 6808 ರೂ ಕೋಟಿ ರೂಪಾಯಿಗಳ ತೆರಿಗೆಯನ್ನು ಮುಂದೂಡಿದ್ದಾರೆ ಅದನ್ನು ರಿಕವರಿ ಮಾಡಿಕೊಳ್ಳಲಿಕ್ಕೆ ಆಗುತ್ತಿಲ್ಲ. ಏಕೆಂದರೆ They have not taken any guarantee. They have not taken any warranty. In the normal course. ಇವತ್ತು ಕಮರ್ಷಿಯಲ್ ಟ್ಯಾಕ್ಸ್ ಆಕ್ಟ್ ಕೆಳಗೆ ಯಾವ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವೋ ಅಷ್ಟನ್ನು ಮಾತ್ರ ತೆಗೆದುಕೊಳ್ಳಲಿಕ್ಕೆ ಸಾಧ್ಯ. ಹಾಗಿದ್ದಲ್ಲಿ ನೀವು 14 ವರ್ಷಕ್ಕೆ ಅವರಿಗೆ ವಿನಾಯಿತಿಯನ್ನು ಕೊಟ್ಟಿದ್ದೀರಿ. 14 ವರ್ಷಕ್ಕೆ ಕಂಪನಿ ಇರುತ್ತದೋ, ಆ ಮಾಲಿಕ ಅಥವಾ ಕೈಗಾರಿಕೆ ಇರುತ್ತದೋ ಗೊತ್ತಿಲ್ಲ. ಆದ್ದರಿಂದ ನನ್ನ ದೃಷ್ಟಿಯಿಂದ ಬರೇ 4350 ಕೋಟಿ ರೂಪಾಯಿ ಎಕ್ಸೆಮ್ಪ್‌ಷನ್ ಕೊಟ್ಟಿರುವುದು ಅಷ್ಟೇ ಅಲ್ಲ, The tax deferred payment of Rs.6000 crores ಇದು ಕೂಡ ಸರ್ಕಾರದ ಬೊಕ್ಕಸಕ್ಕೆ ದೋಖಾನೇ ಎಂಬುದು ನನ್ನ ಅಭಿಪ್ರಾಯ. ನಮ್ಮ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುವುದು ಅಥವಾ ನಮ್ಮ ಆರ್ಥಿಕ ಸಮತೋಲವನ್ನು ಕೆಡಿಸುವಂತಹ ಮತ್ತೊಂದು ಸಂಗತಿ ಏನೆಂದರೆ ನಮ್ಮ ಸಾರ್ವಜನಿಕ ಉದ್ದಿಮೆಗಳು. ಇವತ್ತು ಡಿಫಿಷಿಯೆನ್ಸಿ ಆಫ್ ಬಜೆಟ್ ಏನಿದೆ ಅದಕ್ಕಿಂತ ಹೆಚ್ಚು ಹಣವನ್ನು ಕೆ.ಪಿ.ಟಿ.ಸಿ.ಎಲ್. ಒಂದಕ್ಕೆ ನಾವು ಕೊಡಬೇಕಾಗಿದೆ. ನಮ್ಮ ಇಡೀ ಆಯವ್ಯಯದ ಕೊರತೆ ಏನಿದೆಯೋ ಅದಕ್ಕಿಂತ ಹೆಚ್ಚು ಹಣವನ್ನು ಸಹಾಯಧನವನ್ನು ನಾವು ತುಂಬಬೇಕಾಗಿದೆ. ಅದೃಷ್ಟವಶಾತ್ ಇಲ್ಲಿ ಕೆ.ಎಸ್.ಆರ್.ಟಿ.ಸಿ. ಅಧ್ಯಕ್ಷರು ಇದ್ದಾರೋ ಇಲ್ಲವೋ ಗೊತ್ತಿಲ್ಲ, ಸತತವಾಗಿ ಎಲ್ಲಾ ವರ್ಷಗಳಲ್ಲೂ ಕೂಡ 100 ಕೋಟಿ ರೂಪಾಯಿಗಳ ಸಹಾಯಧನವನ್ನು ಕೊಡಬೇಕಾಗಿದ್ದ ಕೆ.ಎಸ್.ಆರ್.ಟಿ.ಸಿ. ಯಲ್ಲಿ ಕಳೆದ ವರ್ಷದಿಂದ 100 ಕೋಟಿ ರೂಗಳನ್ನು ಸರ್ಕಾರಕ್ಕೆ ಉಳಿಸುವಂತಹ ಕೆಲಸವನ್ನು ಸರ್ಕಾರ, ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳು ಹಾಗೂ ಅಧ್ಯಕ್ಷರು ಮಾಡಿದ್ದಾರೆ, ಅವರುಗಳು ಅಭಿನಂದನಾರ್ಹರು. ನಮ್ಮಲ್ಲಿರುವಂತಹ 86 ಸಾರ್ವಜನಿಕ ಉದ್ದಿಮೆಗಳಲ್ಲಿ ಒಂದೆರಡು ಉದ್ದಿಮೆಗಳನ್ನು ಬಿಟ್ಟರೆ ಉಳಿದೆಲ್ಲವೂ ನಷ್ಟದಲ್ಲಿವೆ. ಸರ್ಕಾರ ಈ ಬಿಳಿ ಆನೆಗಳನ್ನು ಯಾವ ಪುರುಷಾರ್ಥಕ್ಕೆ ಸಾಕಿಕೊಂಡು ಹೋಗಬೇಕಾಗುತ್ತದೆ. ಸಾವಿರಾರು ಕೋಟಿ ರೂಪಾಯಿಗಳ ಗ್ಯಾರಂಟಿಯಾಗಿ ಹಣ ಕೊಡಬೇಕು, ಸಹಾಯಧನವನ್ನು ಕೊಡಬೇಕು, ಇವರಿಂದ ನಮಗೆ ಬರುತ್ತಿರುವ ಡಿವಿಡೆಂಡ್ 0.22. from all these public undertakings, the Government is getting only 0.22 dividend. ಈ ಪುರುಷಾರ್ಥಕ್ಕಾಗಿ ಈ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಅನ್ನು ಏಕೆ ಇಟ್ಟುಕೊಳ್ಳಬೇಕು? ಆದ್ದರಿಂದ ಈ ಆರ್ಥಿಕ ಸಮತೋಲನವನ್ನು ಕೆಡಿಸುತ್ತಿರುವಂತಹ ಈ ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚುವುದು ಅಥವಾ ಪ್ರೈವೇಟೈಸ್ ಮಾಡುವುದು, ಏನಾದರೊಂದು ಕೆಲಸವನ್ನು ಮಾಡಬೇಕಾಗುತ್ತದೆ. ಈ ಎಲ್ಲಾ bad management ಫಲವನ್ನು ಅನುಭವಿಸುವುದರ ಜೊತೆಗೆ ಸರ್ಕಾರಕ್ಕೆ ಬಿದ್ದ ಮೊದಲನೇ ಹೊಡೆತ ಯಾವುದೆಂದರೆ ಬಡವರಿಗೆ ಮನೆ ಕೊಡುತ್ತಿದ್ದ ಆಶ್ರಯ ಯೋಜನೆಯನ್ನು ನ್ಯಾಯಾಲಯ ಸ್ಟ್ರಕ್ ಡೌನ್ ಮಾಡಿತು. ನಮಗೆಲ್ಲಾ ದಿಗ್ಭ್ರಮೆಯಾಯಿತು. ಉತ್ತಮ ಸಮಯಪ್ರಜ್ಞೆ ಹಾಗೂ ಸಂಯಮಹೊಂದಿರುವ ನಮ್ಮ ಮುಖ್ಯಮಂತ್ರಿಗಳು ಮತ್ತು ಒಂದು ನಿಗಮವನ್ನು ಮಾಡಿ ಆಶ್ರಯ ಸಮಿತಿ ಯೋಜನೆಯನ್ನು ರದ್ದು ಮಾಡಿದ ಕಾನೂನನ್ನು ತಿದ್ದುಪಡಿ ಮಾಡಿ ಮತ್ತೆ ಬಡವರಿಗೆ ಮನೆ ಕೊಡಲಿಕ್ಕಾಗಿ ವ್ಯವಸ್ಥೆಯನ್ನು ಮಾಡಿದರು. ಇಂತಹ ಕಾರ್ಯ ನೀವು ಮಾಡಿದ್ದರೆ ನಿಮಗೆ ದೀರ್ಘದಂಡ ನಮಸ್ಕಾರ ಮಾಡುತ್ತೇವೆ. ನ್ಯಾಯಾಲಯದ ತೀರ್ಪನ್ನು ಅಸಿಂಧು ಮಾಡಿ ಸರ್ಕಾರ ರಾಜೀವ್‌ಗಾಂಧಿ

ಕಾರ್ಪೊರೇಷನ್ ಮುಖಾಂತರ 12–13 ಲಕ್ಷ ಎಕರೆ ಮನೆಗಳನ್ನು ಕಟ್ಟುವಂತಹ ಕೆಲಸ ಮಾಡಿದೆ. ಅದರ ಹಿಂದೆ ಕಾಡುಗಳ್ಳ ವೀರಪ್ಪನ್ ಕಾಟ, ರಾಜ್‌ಕುಮಾರ್‌ರವರನ್ನು ಹಿಡಿದುಕೊಂಡು ಹೋಗಿ ಎಂದು ಸರ್ಕಾರ ಹೇಳಿರಲಿಲ್ಲ. ಈ ರಾಜ್ಯದ ಜನ ಹೇಳಿರಲಿಲ್ಲ, ನಾವು ಹೇಳಲಿಲ್ಲ, ನೀವು ಹೇಳಿಲಿಲ್ಲ, ಅಕಸ್ಮಿಕವಾಗಿ ಬಂದಂತ ಹೊಡೆತ ಸುಮಾರು 6 ತಿಂಗಳು ಈ ದುಸ್ಥಿತಿಯನ್ನು ಸರ್ಕಾರ ಎದುರಿಸಬೇಕಾಗಿ ಬಂತು. ಇದಕ್ಕೆ ಯಾರೂ ಕಾರಣ ಕರ್ತರ ಅಲ್ಲ, ಅದರ ಹಿಂದೆಯೇ, ನಾಗಪ್ಪನ ಅಪಹರಣ ನಂತರ ನಾಗಪ್ಪನ ಹತ್ಯೆ, ಹೀಗೆ ಈ ಸಂಕಟಗಳ ಸರಮಾಲೆ ಮಧ್ಯೆದಲ್ಲಿಯೇ ಬರ, ಹಿಂದೆಯೆಲ್ಲಾ ಬರ ಬಂದಿತ್ತು ಒಂದು ವರ್ಷದ ಮಟ್ಟಿಗೆ, ಆಗ ರೈತ ಒಡವೆ, ಕೋಳಿ, ಕುರಿ ಮಾರಿಕೊಂಡು ಹೇಗೆ ಬದುಕುತ್ತಿದ್ದನು. ಸತತವಾಗಿ ಮೂರು ವರ್ಷಗಳ ಕಾಲ ಬರ ಬಂದಿತ್ತು. ಈ ಬರವನ್ನು ನಿಭಾಯಿಸುವಂತಹ ಪರಿಸ್ಥಿತಿ ಎಂತಹದ್ದು ಅಂದರೆ, Every pie the Government spends is none out of the plan expenditure. ಇದು ನಿರೀಕ್ಷೆಪಟ್ಟಂತಹ ಖರ್ಚಲ್ಲ, It is here, you have to give special attention for the problem. ಮೊದಲೇ ಈ ರೀತಿ ಬರ ಬರುತ್ತದೆಯೆಂದು ಗೊತ್ತಿದ್ದರೆ ಬರ ಪರಿಹಾರ ನಿಧಿ ಯೋಜನೆಗಾಗಿ ಎಂದು 100–200 ಕೋಟಿ ರೂಪಾಯಿ ಮೀಸಲಿರಿಸಿ ಎಂದು ಕೇಳಬಹುದಾಗಿತ್ತು. ಯೋಜನೇತರ ವೆಚ್ಚವಾಗಿ ನೂರಾರು ಕೋಟಿ ರೂಪಾಯಿ ಖರ್ಚು ಮಾಡಬೇಕಾದಂತಹ ಒಂದು ಪರಿಸ್ಥಿತಿ. ಇನ್ನು ಕೇಂದ್ರದವರ ಮಲತಾಯಿ ಧೋರಣೆ ಬಗ್ಗೆ ಹೇಳುವುದಾದರೆ ಜನಗಳೇ ಈಗ ತೀರ್ಮಾನ ಮಾಡುವಂತಹವರಾಗಿದ್ದಾರೆ, ಆಂಧ್ರ ಪ್ರದೇಶದಲ್ಲಿ 1300 ಕೋಟಿ ರೂಪಾಯಿಗಳನ್ನು ಮಾಡರ್ನೈಸೇಷನ್ ಆಫ್ ಎಲೆಕ್ಟ್ರಿಸಿಟಿಗಾಗಿ ಕೊಟ್ಟಿದ್ದಾರೆ. ಆಂಧ್ರದವರು ಯಾವುದೇ ನಿಬಂಧನೆಗಳನ್ನು ನಿಭಾಯಿಸಲು ಸಿದ್ಧವಿರಲಿಲ್ಲ, ನಮ್ಮ ಸರ್ಕಾರ ಅದನ್ನೆಲ್ಲಾ ಒಪ್ಪಿಕೊಂಡರೂ ಸಹ ಒಂದು ರೂಪಾಯಿ ಕೊಡಲಿಕ್ಕೆ ಕೇಂದ್ರ ಸರ್ಕಾರ ಸಿದ್ಧವಿಲ್ಲ.

6.20 ಪಿಎಂ

ಸನ್ಮಾನ್ಯ ಉಪಾಧ್ಯಕ್ಷರೇ, ಇನ್ನು ಕಾವೇರಿ ನೀರು. ಕಾವೇರಿ ನೀರು ಸಮಸ್ಯೆ ಬಂದಿದ್ದು ಮಧ್ಯಂತರ ತೀರ್ಪಿನ ಆಜ್ಞೆ ಬಂದಮೇಲೆ. ಕಾವೇರಿ ನೀರಿನ ಬಗ್ಗೆ ಮಧ್ಯಂತರ ತೀರ್ಪಿಗೆ ತಲೆಬಾಗಿ ನೀರನ್ನು ಬಿಡುವಂತಹ ಕೆಲಸವನ್ನು ಎಲ್ಲಾ ಸರ್ಕಾರಗಳು ಮಾಡಿಕೊಂಡುಬಂದಿವೆ. 1995–96ರಲ್ಲಿ ಏನು ಮಧ್ಯಂತರ ತೀರ್ಪು ಬಂದಿತು, ಅವತ್ತಿನಿಂದ ಇವತ್ತಿನವರೆಗೆ ನೀರು ಬಿಡಬೇಕಾಯಿತು ಮತ್ತು ನೀರನ್ನು ಬಿಟ್ಟುಕೊಂಡೇಬಂದಿರುತ್ತಾರೆ. ನ್ಯಾಯಾಲಯದ ತೀರ್ಪಿಗೆ ಮಣಿದು ನೀರು ಬಿಡುವುದಿಲ್ಲ ಎಂದು ಹೇಳಿದರೆ ಮಹಾ ನಾಯಕರೊಬ್ಬರು ಹೇಳುತ್ತಾರೆ "ಒಕ್ಕೂಟದ ವ್ಯವಸ್ಥೆಯಲ್ಲಿ ನೀವು ಆ ತರಹ ಹೇಳುವುದಕ್ಕೆ ಆಗುವುದಿಲ್ಲ" ಎಂದು. ಭಾಗಮಂಡಲದಲ್ಲಿ ಭಾಷಣ ಆಯಿತು. ಮುಖ್ಯಮಂತ್ರಿಗಳು ಏನಾದರೂ ಕಷ್ಟವಾಗಲಿ, ನಾವು ನೀರು ಬಿಡುವುದಿಲ್ಲ ಎಂದರು. ಆದರೆ ಇವರು ಹೇಳುತ್ತಾರೆ ಏನೆಂದರೆ ಒಕ್ಕೂಟದ ವ್ಯವಸ್ಥೆಯಲ್ಲಿ ನೀವು ನೀರು ಬಿಡುವುದಿಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ ಎಂದು. ಹಾಗಾದರೆ ಏನು ಮಾಡಬೇಕು? ಒಂದು ಕಡೆ ಕೊಳ್ಳದ ಜನರ ಬದುಕಿನ ಜತೆಯಲ್ಲಿ ಚೆಲ್ಲಾಟ ಆಡಬೇಕು, ಮತ್ತೊಂದು ಕಡೆ ಈ ಕೋರ್ಟುಗಳು ಕಣ್ಣು ಮುಚ್ಚಿಕೊಂಡು ನ್ಯಾಯ ತೀರ್ಪು ಕೊಡುತ್ತವೆಯಲ್ಲಾ, ಇವನ್ನು ಪರಿಪಾಲನೆ ಮಾಡದೆ ವಿಧಿ ಇಲ್ಲ. ಇವತ್ತಿನ ದಿವಸಗಳಲ್ಲಿ ಮಿಲಿಟರಿ ಒಂದು ಬಿಟ್ಟು ಉಳಿದ ಎಲ್ಲದರಲ್ಲೂ they are poking their nose. I don't know when they poke their nose. ಅದು ಆದ ದಿವಸ ಈ ದೇಶಕ್ಕೆ ಒಂದು ಅಂತ್ಯ. ರಕ್ಷಣಾ ವ್ಯವಸ್ಥೆಯೊಂದನ್ನು ಬಿಟ್ಟು ಈ ದೇಶದಲ್ಲಿ ಉಳಿದ ಎಲ್ಲದರಲ್ಲೂ

ನ್ಯಾಯಾಲಯು ಕೈಹಾಕುತ್ತಿದೆ. ಅದಕ್ಕೆ ಯಾವಾಗ ಕೈಹಾಕುತ್ತಾರೆಯೋ ಅವತ್ತೇ ಈ ನ್ಯಾಯಾಲಯಗಳಿಗೆ ಒಂದು ಅಂತ್ಯಕಾಣುತ್ತದೆ. ಆದ್ದರಿಂದ ಕಾವೇರಿ ನೀರಿನ ವಿಷಯದಲ್ಲಿ ಒಂದು, ನ್ಯಾಯಾಲಯದ ತೀರ್ಮ. ಎರಡನೇಯದು, ಸತತವಾಗಿ ಮೂರು ವರ್ಷಗಳಿಂದ ಸತತವಾಗಿ ಮಳೆ ಹುಯ್ಯದೆ ಅನೇಕ ಕಡೆ ನೀರು ಬರದೇ ಹೋದದ್ದು. ಈ ಕಾರಣದಿಂದಾಗಿ ಕಾವೇರಿ ನದಿನೀರಿನ ವಿಷಯದಲ್ಲಿ, ಇದು ನಮ್ಮ ಸ್ನೇಹಿತರುಗಳಿಗೆ ಇದರ ಬಿಸಿ ಮುಟ್ಟದೇ ಇರಬಹುದು. ಆದರೆ ನೇರವಾಗಿ ನಾವು ಅದರ ತಾಪವನ್ನು ಅನುಭವಿಸಬೇಕಾಗಿದೆ. ಈ ಜನರಿಗೆ ಏನಾದರೂ ಸಮಾಧಾನ ಮಾಡಬೇಕು. ಅವರಿಗೆ ಏನಾದರೂ ಒಂದು ಪರಿಹಾರವನ್ನು ಕೊಡಬೇಕು. In the future days, either for drinking or for irrigation Unless we adopt the better management of the water. ಅದು ಮುಂದಿನ ದಿವಸಗಳಲ್ಲಿ ಸಾಧ್ಯವೇ ಆಗುವುದಿಲ್ಲ. ಈ ಒಂದು ಕಾರಣಕ್ಕೆ ನಾನು ಮುಖ್ಯಮಂತ್ರಿಗಳಿಗೆ ಕಾಗದವನ್ನು ಬರೆದೆ. ಇದು ಅವರ ತಲೆಯಲ್ಲಿ ಬಂದಿತು. ನಾವು ಎಲ್ಲರೂ ಕೂಡ ಒತ್ತಾಯ ಮಾಡಿ, ಇದರ ಜತೆಗೆ ಕಾವೇರಿ ಜಲಾನಯನ ಪ್ರದೇಶದ ಎಲ್ಲಾ ಶಾಸಕರುಗಳು ಅವರಿಗೆ ದುಂಬಾಲು ಬಿದ್ದು "ನೀವು ಇರುವ ನೀರನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಿ... for the better management of the available water, you have to improve the system ಎಂದರು ಏಕೆಂದರೆ ನಮಗೆ ಇರುವಂತಹ ಅಚ್ಚುಕಟ್ಟನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಮತ್ತೆ ಸುಪ್ರೀಂ ಕೋರ್ಟಿನ ಮಧ್ಯಂತರ ತೀರ್ಮ ಕೂಡ ಅಡ್ಡ ಬರುತ್ತದೆ. 11 ಲಕ್ಷದ 20 ಸಾವಿರ ಎಕರೆಗಿಂತ ಜಾಸ್ತಿ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇರುವಂತಹ ಅಚ್ಚುಕಟ್ಟಿನ ವ್ಯವಸ್ಥೆಯನ್ನು ಸುಧಾರಣೆ ಮಾಡುವುದಕ್ಕೆ ಹಣವನ್ನು ಒದಗಿಸಬೇಕು. ಆದರೆ ಹಣವನ್ನು ಎಲ್ಲಿಂದ ಒದಗಿಸುವುದು? ನಿಮಗೂ ಗೊತ್ತಿದೆ ಮತ್ತು ನನಗೂ ಕೂಡ ಗೊತ್ತಿದೆ. Our non plan expenditure is Rs.85 crores and plan expenditure is only Rs.50 crores. How can anybody expect the Government to spend money for the developmental works? ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಮಾಡಬೇಕಾಗಿತಕ್ಕಂಥ ಅಭಿವೃದ್ಧಿ ಕೆಲಸಗಳಿಗೆ ಮೂಲಭೂತ ಸೌಕರ್ಯಗಳನ್ನು ಜನಸಾಮಾನ್ಯರಿಗೆ ಒದಗಿಸಲಿಕ್ಕಾಗಿ ತೆರಬೇಕಾಗಿರುವಂದತಹ ಹಣವನ್ನು ಎಲ್ಲಿಂದ ತರುವುದು? ನಾವು ಅದಕ್ಕೇ ಮಾನ್ಯ ಮುಖ್ಯಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಂಡೆವು. ಒಂದು ಯಾವುದಾದರೂ ಬೇರೆ ಮಾರ್ಗವನ್ನು ಕಾಣಬೇಕು. ಕಾವೇರಿ ಜಲಾನಯನ ಪ್ರದೇಶದ ಜನರ ಪರವಾಗಿ ಅವರು ವೈಯಕ್ತಿಕವಾಗಿ ತೆಗೆದುಕೊಂಡಂಥ ಆಸಕ್ತಿ ಏನಿದೆ ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಇದರಲ್ಲಿ ನಾನೂ ಕೂಡ ಫಲಾನುಭವಿ ಇದ್ದೇನೆ. ಏನು ಕಾವೇರಿ ಜಲಭಾಗ್ಯ ನಿಗಮವನ್ನು ಮಾಡಿದ್ದಾರೋ, ಅದರ ಮೂಲಕ ಐದು ನೂರು ಕೋಟಿ ರೂಪಾಯಿಗಳನ್ನು ಈ ವರ್ಷ ಇಟ್ಟು ಒಟ್ಟಾರೆ 1500 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನಮಗೆ ಇರುವಂತಹ ಈ ಅಚ್ಚುಕಟ್ಟಿನ ನೀರನ್ನು ಸುವ್ಯವಸ್ಥಿತವಾಗಿ ಇಟ್ಟುಕೊಂಡು. ಇನ್ನು ಮುಂದಿನ ದಿವಸಗಳಲ್ಲಿ ಬರುವಂತಹ ಕಡಿಮೆ ನೀರನ್ನು, ಕನಿಷ್ಟ ಪ್ರಮಾಣ ನೀರನ್ನು ಗರಿಷ್ಟ ಪ್ರಮಾಣದಲ್ಲಿ ಉಪಯೋಗಿಸುವುದಕ್ಕಾಗಿ ಏನು ವ್ಯವಸ್ಥೆಯನ್ನು ಏನು ಈ ಮೂಲಕ ಅವರು ಮಾಡಿದ್ದಾರೆ ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಇದೇಸಂದರ್ಭದಲ್ಲಿ ನಮಗೆ ಅಲ್ಲಿ ಕೇಂದ್ರದಲ್ಲಿ ಕುಳಿತುಕೊಂಡು ಇಷ್ಟೇ ನೀರನ್ನು ನೀವು ಕೊಡಬೇಕೆಂದು

ನಮಗೆ ಅಪ್ಪಣೆ ಕೊಡುತ್ತಾರೆಲ್ಲಾ, ನ್ಯಾಯಾಲಯಗಳು ಮತ್ತು ಕೇಂದ್ರಸರ್ಕಾರ, ಅವರಿಗೆ ಈ ಸದನದ ಮೂಲಕ ನಾನು ಅತ್ಯಂತ ಗೌರವದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೊನ್ನೆ ಈ ದೇಶದ ಪ್ರಧಾನಿಗಳು ಒಂದು ಉತ್ತಮವಾದ ಮಾತನ್ನು ಹೇಳಿದ್ದಾರೆ. ಇನ್ನು ಮುಂದಿನ ದಿವಸಗಳಲ್ಲಿ ನೀರಿನ ಬರ ಬರುತ್ತದೆ, ಅದಕ್ಕೆ ಮುಂದಿನ ತಿಂಗಳನ್ನು ನೀರಿನ ಬರ ತಿಂಗಳಾಗಿ ಆಚರಿಸಬೇಕು. ಎಂದು ಅವರು ಹೇಳಿದ್ದಾರೆ. I appreciate him. I congratulate him. Yes, ಇದನ್ನು ಮಾಡದೆ ಬೇರೆ ವಿಧಿಯೇ ಇಲ್ಲ. ಜುಲೈ ತಿಂಗಳನ್ನು ನೀರಿನ ತಿಂಗಳು ಎಂದು ಅವರು ಘೋಷಣೆ ಮಾಡಿದ್ದಾರೆ. ಅದು ಯಾವುದಾದರೂ ಮಾಡಿ, ನಡೆಯಿರಿ ಸ್ವಾಮಿ. ಡೆಲ್ಲಿಗೆ ನಾನೂ ಕೂಡ ನಿಮ್ಮ ಜತೆಯಲ್ಲಿ ಬರುತ್ತೇನೆ. ಅದು ಬಿಟ್ಟು ತುಳಿಸಿ ದಳ ಕೊಡುತ್ತೇವೆ, ಅಯೋಧ್ಯೆಯಿಂದ ಮಣ್ಣು ತಂದು ಕೊಡುತ್ತೇವೆ, ಅದೇತರಹ ತ್ರಿಶೂಲ ಕೊಡುತ್ತೇವೆ ಎಂದರೆ ಅದಕ್ಕೆ ನಾನು ಬರುವುದಿಲ್ಲ, ಸ್ವಾಮಿ. ನೀರಿನ ವಿಷಯಕ್ಕೆ ಬನ್ನಿ. ಗಂಗಾಕಾವೇರಿ ಯೋಜನೆಯನ್ನು ಬೇಗ ಮಾಡಿ ಎಂದು ಹೇಳಿ, ನಾನು ನಿಮ್ಮ ಜತೆಯಲ್ಲಿ ಬರುತ್ತೇನೆ. ಇದಕ್ಕೆ ಎಲ್ಲಿ ಬೇಕಾದರೂ ಮುಷ್ಕರಕ್ಕೆ ಕೂಡೋಣ...

ಶ್ರೀ ಅರಗ ಜ್ಞಾನೇಂದ್ರ:– ಗಂಗಾಜಲ ಎಂದರೆ ನೀವು ಬೇಡ ಅನ್ನುತ್ತೀರಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:– ಅವರು ಇದೆಲ್ಲಾ ಮಾಡುವುದು ಅಲ್ಲಿ ರಾಮನು ಏಜೆಂಟ್ ಆಗಿರಬೇಕೂಂತ, ಅದಕ್ಕೋಸ್ಕರ ಇದೆಲ್ಲಾ ಮಾಡುವುದು ಅಷ್ಟೆ. ನೀವು, ನಾವು ಎಜೆಂಟ್ ಆಗಿ ಇರಬಾರದು ಎಂಬುದು ಅವರ ಲೆಕ್ಕಾಚಾರ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಉಪಾಧ್ಯಕ್ಷರೇ, ಬಿ.ಜೆ.ಪಿ. ಯವರು ಏನಾದರೂ ನನ್ನ ಹೆಸರನ್ನು ದುರುಪಯೋಗ ಮಾಡಿಕೊಳ್ಳುವುದಾದರೆ even at this late stage, I am thinking of changing my name.

ಶ್ರೀ ಕೆ. ಶ್ರೀನಿವಾಸ್ ಗೌಡ ಕುಡುವನಹಳ್ಳಿ:– ನಾನು ರಾಮ ಎಂದು ಹೇಳಿದೆ. ರಾಮಯ್ಯನವರು ಎಂದು ಹೇಳಿಲ್ಲ.

ಶ್ರೀ ವೈ.ಕೆ. ರಾಮಯ್ಯ:– ಇಲ್ಲ, ರಾಮ ಎನ್ನುವ ಹೆಸರನ್ನು ಏನಾದರೂ ಈ ಪಕ್ಷದವರು ದುರುಪಯೋಗ ಮಾಡಿಕೊಂಡರೆ ನಾನು ನನ್ನ ಹೆಸರನ್ನೇ ಬದಲಾವಣೆ ಮಾಡಿಕೊಂಡುಬಿಡುತ್ತೇನೆ, ಅಷ್ಟೆ.

ಶ್ರೀ ಎಸ್.ಎಸ್. ಪಾಟೀಲ್:– ಜಗದೀಶ ಎಂದು ಅವರ ಹೆಸರಿದೆ. ಆದರೆ ರಾಮನ ಕಡೆಗೆ ಹೋದರು. ಏನು ಮಾಡುವುದು?

ಶ್ರೀ ವೈ.ಕೆ. ರಾಮಯ್ಯ:– ನಾನು ನನ್ನ ಸ್ನೇಹಿತರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಕೋರ್ಟಿಗಂತೂ ನಾವ್ಯಾರೂ ಹೇಳುವುದಕ್ಕೆ ಆಗುವುದಿಲ್ಲ. ಅವರು ಏನಾದರೂ ಮಾಡಿಕೊಳ್ಳಲಿ. ಆದರೆ ಕೇಂದ್ರ ಸರ್ಕಾರಕ್ಕೆ ಒಂದು ಮಾತನ್ನು ನಾವು ಹೇಳಬಹುದು. ಈ ನೀರಿನ ವಿಷಯ ಬಂದಾಗ ಸ್ಥಳೀಯ ಪರಿಸ್ಥಿತಿಯನ್ನು ಗಮನಿಸಿ ತೀರ್ಮಾನವನ್ನು ತೆಗೆದುಕೊಳ್ಳಿ ಸ್ವಾಮಿ, ಎಂದು ನಾವು ಅವರಿಗೆ ಹೇಳಬೇಕು. ಎರಡನೇಯದು ಇದು ಇವತ್ತಲ್ಲ, ಸುಮಾರು ನಲ್ವತ್ತು ವರ್ಷಗಳ ಹಿಂದೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಬರುವಂತಹ ಮೆಟ್ಟೂರು ಜಲಾಶಯದಲ್ಲಿ better management and better use of the water ಅನ್ನುವುದಕ್ಕೆ ಎನ್.ಸಿ. ಪಾಟೀಲ್ ಕಮಿಷನ್‌ನವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಆದರೆ ಇವತ್ತಿನವರೆಗೂ ತಮಿಳುನಾಡಿನಲ್ಲಿ – for improving the system, they have not spent even a pie. ಬಿಳಿಗೊಡ್ಲನಿಂದ

ಕೆಳಗಡೆ ಬರತಕ್ಕಂಥ ನೀರನ್ನು ಶೇಖರಿಸಿ ಇಟ್ಟುಕೊಳ್ಳಿ, ಅಣೆಕಟ್ಟುಗಳನ್ನು ಕಟ್ಟಿಕೊಳ್ಳಿ ಎಂದು ಎನ್.ಸಿ. ಪಾಟೀಲ್ ಕಮಿಟಿಯವರು ತಮ್ಮ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಆ ಪ್ರಯತ್ನ ಕೂಡ ಇವತ್ತಿನವರೆಗೂ ಆಗಲಿಲ್ಲ. ಆದ್ದರಿಂದ ಕರ್ನಾಟಕ ಸರ್ಕಾರ ಕಾವೇರಿ ಬೇಸಿನ್‌ನಲ್ಲಿ ಹೇಗೆ ನೀರಿನ ಲಭ್ಯತೆ ಕಡಿಮೆ ಇದ್ದರೂ ಕೂಡ ಅದನ್ನು ಉಪಯೋಗಮಾಡಿಕೊಳ್ಳುವುದಕ್ಕೆ ಏನು ಪ್ರಯತ್ನವನ್ನು ಮಾಡಿದೆಯೋ, ಅದೇರೀತಿ ಬೇರೆ ರಾಜ್ಯಗಳೂ ಕೂಡ, ಕೇರಳ ಮತ್ತು ತಮಿಳುನಾಡು ಕೂಡ ಈ ನೀರಿನ ಗರಿಷ್ಟ ಉಪಯುಕ್ತತೆಗಾಗಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು. ಅದು ಬಿಟ್ಟು ಬರೇ ತಕರಾರು ಮಾಡುವ ಪ್ರಯತ್ನವನ್ನು ಮಾಡುವುದು ಬೇಡ. ಅವರೂ ಕೂಡ ಇದನ್ನು ಅಡಾಫ್ಟ್ ಮಾಡಬೇಕೆಂದು ಕೇಂದ್ರಸರ್ಕಾರದ ಮೂಲಕ ತಮಿಳುನಾಡಿನವರಿಗೆ ತಿಳಿಸಬೇಕೆಂದು ನಾನು ನಮ್ಮ ಸ್ನೇಹಿತರುಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸನ್ಮಾನ್ಯ ಉಪಾಧ್ಯಕ್ಷರೇ, ಈ ಸರ್ಕಾರಕ್ಕೆ ಬಂದಂಥ ಹೊಡೆತಗಳು ಅಲ್ಲಿಗೇ ನಿಲ್ಲಲಿಲ್ಲ. ಕೃಷ್ಣಾಕೊಳ್ಳದ ಯೋಜನೆಗಳು ಸಂಪೂರ್ಣವಾಗಿ ಆಗಬೇಕಾದರೆ 'ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯಿರಿ' ಎಂದು ಮೊನ್ನೆ ಭಾಷಣ ಮಾಡಿದ್ದಾರೆ. ಕೃಷ್ಣಾಕೊಳ್ಳದ ಯೋಜನೆಗಳು ಸಂಪೂರ್ಣ ಆಗಬೇಕಾದರೆ ಕಾಂಗ್ರೆಸ್ ಸರ್ಕಾರವನ್ನು ಮನೆಗೆ ಕಳಿಸಿ. ಎಂದು ಹೇಳಿದ್ದಾರೆ. ನಾನು ಹಿಂದೆ ಒಂದು ಸಾರಿ ಹೇಳಿದ್ದೆ. 2002ನೇ ಇಸವಿ ಒಳಗಡೆ ಬ್ರಹ್ಮನೇ ಬಂದರೂ ಕೂಡ ಈ ನೀರಿನ ಗೇಟ್‌ನ್ನು ಅಳವಡಿಸುವ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು. ಎಂತಹ ಹೊಡೆತ ಬಂತು? ಏಕೆಂದರೆ ಭೂಮಿಗೆ ನೀರು ಕೊಡುವಂತಹ ಕೆಲಸ, ಅದು ನನ್ನ ದೃಷ್ಟಿಯಲ್ಲಿ ದೇವರ ಪೂಜೆ ಮಾಡುವುದಕ್ಕಿಂತಲೂ ಪವಿತ್ರವಾದದ್ದು. ಅದನ್ನು ನಾನು ಹೇಳಿದ್ದೇನೆ. ಅದಕ್ಕೇ ಬಸವಣ್ಣನವರು ಹೇಳಿದ್ದು ಕಾಯಕವೇ ಶ್ರೇಷ್ಠವಾದದ್ದು ಎಂದು. ನೀವು ದೇವರ ಪೂಜೆ ಮಾಡಿದರೆ ನಿನ್ನ ಆತ್ಮ ಶುದ್ಧಿಯಾಗುತ್ತದೆ. ನಿನಗೆ ವೈಯುಕ್ತಿಕವಾಗಿ ಅನುಕೂಲವಾಗುತ್ತದೆ. ಆದರೆ ಕಾಯಕ ಮಾಡಿದರೆ ಇಡೀ ಸಮಾಜಕ್ಕೆ ಒಳ್ಳೆಯದಾಗುತ್ತದೆ. ಈ ಕೆಲಸವನ್ನು ಮಾಡುವುದಕ್ಕೆ ಹೊರಟಾಗ ತಮಗೆ ಗೊತ್ತಿದೆ ಏನಾಯಿತು? ಸುಪ್ರೀಂ ಕೋರ್ಟಿಗೆ ಹೋದರು. ಹಾಕಿದಂಥ ಗೇಟ್‌ನ್ನು ಕತ್ತರಿಸಿ ಎಂದು ಅಪ್ಪಣೆ ಅಲ್ಲಿಂದ ಬಂದಿತು. ಹೆಜ್ಜೆ ಹೆಜ್ಜೆಗೆ ಎಂತಹ ಕಿರುಕುಳವನ್ನು ಕೊಟ್ಟರು. ಅದನ್ನು ನಿಭಾಯಿಸಿ ಇವತ್ತು ನೀರನ್ನು ಉಪಯೋಗಿಸಿಕೊಳ್ಳದೇ ಇದ್ದರೂ ಕೂಡ, ನೀರನ್ನು ಕೂಡಿಟ್ಟುಕೊಳ್ಳುವ ಕೆಲಸವನ್ನು ಮಾಡುವಂತಹ ದಿಸೆಯಲ್ಲಿ ಆದಂತಹ ಹೊಡೆತಗಳು ಈ ಸರ್ಕಾರಕ್ಕೆ ಒಂದಲ್ಲ, ಎರಡಲ್ಲ.

ಮಾನ್ಯ ಉಪಸಭಾಧ್ಯಕ್ಷರೇ, ನಾನು ಬಹಳ ದಿವಸಗಳಿಂದ ನೋಡುತ್ತಿದ್ದೇನೆ. ಈ ಸಿ.ಇ.ಟಿ. ಬಗ್ಗೆ ನಾನು ಮೊದಲೇ ಒಂದು ಮಾತನ್ನು ಹೇಳಿದೆ. ಸಮಾಜದಲ್ಲಿ ಈ ವೆಸ್ಟೆಡ್ ಇಂಟರ್‌ಸ್ಟ್ ಎನ್ನುವ ಗೂಳಿಗಳು ಎಲ್ಲ ಕಡೆಯಲ್ಲೂ, ಎಲ್ಲಪಕ್ಷದಲ್ಲೂ ಇರುತ್ತವೆ, ಮತ್ತು ಎಲ್ಲಾ ಊರುಗಳಲ್ಲೂ ಇರುತ್ತವೆ. ಇವುಗಳು ಎಲ್ಲಾ ಊರುಗಳಲ್ಲೂ ಬೆಳೆದು ನಿಂತಿರುತ್ತವೆ. ಅವುಗಳನ್ನು ಸ್ವಲ್ಪ ಕೊಂಬು ಹಿಡಿದು ಬಗ್ಗಿಸಿ ಅವಕ್ಕೆ ಮೂಗುದಾರ ಹಾಕುವುದು ಕಷ್ಟವಾಗುತ್ತದೆ. ಮತ್ತೆ ನ್ಯಾಯಾಲಯದ ತೀರ್ಪು ಬಂದಿತು. ಇದನ್ನು ನಾವು ಯಾರೂ ನಿರೀಕ್ಷೆ ಮಾಡಿದ್ದಲ್ಲ. ಇದು ಯಾರೂ ಬಯಸಿದ್ದೂ ಕೂಡ ಅಲ್ಲ...

ಶ್ರೀ ಕರಡಿ ಸಂಗಣ್ಣ:-- ಅಧ್ಯಕ್ಷರೇ, ಆ ಗೂಳಿ ಯಾರು ಎಂಬುದನ್ನು ಹೇಳಬೇಕು.

ಶ್ರೀ ವೈ.ಕೆ. ರಾಮಯ್ಯ:-- ಅದು ವ್ಯಕ್ತಿ ಅಲ್ಲ, ವೆಸ್ಟೆಡ್ ಇಂಟರ್‌ಸ್ಟ್. ಇದು ಒಂದು ಸಿಂಬಲ್. ಅದರ ಹೆಸರು ಹೇಳುವುದಕ್ಕೆ ಆಗುವುದಿಲ್ಲ. ನಿಮಗೆ ಗೊತ್ತಿದೆ It is a symbol, it is not an individual.

ಶ್ರೀ ಹಂಪನ ಗೌಡ ಬಾದರ್ಲಿ:- ನಾವು ಎಸ್.ಎಸ್. ಪಾಟೀಲರು ಎಂದು ತಿಳಿದುಕೊಂಡಿದ್ದೆವು.

ಶ್ರೀ ವೈ.ಕೆ. ರಾಮಯ್ಯ:- ಈಗ ಬೆಳಿಗ್ಗೆ ತಾನೇ ವಿರೋಧಪಕ್ಷದ ನಮ್ಮ ಸ್ನೇಹಿತರು ಬಹಳ ಪ್ರಾಮಾಣಿಕವಾಗಿ ಒಪ್ಪಿಕೊಂಡರು. ಸುಮಾರು ಒಂದು ವರ್ಷದಿಂದ ಇದು ಉಪಟಳವಾಗಿದೆ, ಬಡಮಕ್ಕಳಿಗೆ ಸೀಟುಗಳನ್ನು ಕೊಡಬೇಕು, ಸಾಮಾನ್ಯ ಜನರಿಗೆ ಈ ಸೌಲಭ್ಯ ದೊರೆಯಬೇಕು ಎಂದು ಹೇಳಿ ಸರ್ಕಾರದವರು ಎಂತಹ ಒತ್ತಡ ಬಂದರೂ ಕೂಡ ಇದನ್ನು ಮಾಡಬೇಕೆಂದು ಹೇಳಿದರು. ನಮ್ಮ ಸ್ನೇಹಿತರೊಬ್ಬ ಕಾಂಗ್ರೆಸ್ ನವರದ್ದು ಯಾವ್ಯಾವ ಸಂಸ್ಥೆಗಳು ಇವೆ ಎಂದು ಒಂದು ಪಟ್ಟಿಯನ್ನು ಪತ್ರಿಕೆಗಳಿಗೆ ಕೊಟ್ಟರು. ಹಾಗಾದರೂ ಮಾನ್ಯ ಮುಖ್ಯಮಂತ್ರಿಗಳು ಹೆದರಿಕೊಳ್ಳುತ್ತಾರೇನೋ ಹಾಗಾದರೂ ಇದನ್ನು ಕೈ ಬಿಡುತ್ತಾರೋ ಏನೋ ಅಂದುಕೊಂಡರು, ಹಾಗಾದರೂ ಸರ್ಕಾರ ಹೆದರಲಿಲ್ಲ. ಎಂಥಾದ್ದೇ ವೆಸ್ಟೆಡ್ ಇಂಟ್ರೆಸ್ಟ್ ಇದ್ದರೂ ಕೂಡ ಅದು ಯಾವ ಪಕ್ಷದಲ್ಲಿ ಎಷ್ಟು ಜನ ಇದ್ದರೂ ಕೂಡ ಅದನ್ನು ಗಮನಿಸದೆ 25–75 ಅನ್ನು ಸೀಟು ಹಂಚುವಂತಹ ಒಂದು ತೀರ್ಮಾನವನ್ನು ಸರ್ಕಾರ ತೆಗೆದುಕೊಂಡರು. ಈ ಸಿ ಇ ಟಿ, ಇದನ್ನು ಯಾರು ಸ್ವಾಮಿ ಇವರನ್ನು ಕೇಳಿದರು. ಇದು ಕೋರ್ಟಿನಿಂದ ಬಂದಿದ್ದು. ಮಾನ್ಯ ಉಪಾಧ್ಯಕ್ಷರೇ, ನನ್ನ ಪ್ರಾರ್ಥನೇ ಇಷ್ಟೇ. ಈ ರಾಜ್ಯದ ಜನರ ಹಿತವನ್ನು ಕಾಪಾಡುವುದರಲ್ಲಿ ಯಾರು ಹೆಚ್ಚೂ ಇಲ್ಲ ಯಾರು ಕಡಿಮೆ ಇಲ್ಲ. ನಾವೆಲ್ಲರೂ ಕೂಡ ಆ ಕೆಲಸವನ್ನು ಮಾಡಲಿಕ್ಕೆ ಪ್ರಾಮಾಣಿಕವಾಗಿ ಮನಸ್ಸು ಇರುವವರು. ಆದರ ಈ ಕೆಲಸವನ್ನು ಮಾಡುವಂತಹ ಸಂದರ್ಭದಲ್ಲಿ ಈ ಪಕ್ಷಗಳು, ಈ ವೈಯಕ್ತಿಕ ಹಿತಾಸಕ್ತಿಗಳು ಅಡ್ಡಿ ಬಂದು ಈ ಕೆಲಸಕ್ಕೆ ತೀರ್ಮಾನವನ್ನು ತೆಗೆದುಕೊಳ್ಳುವಾಗ ಸ್ವಲ್ಪ ಕಿರಿಕಿರಿಯನ್ನುಂಟು ಮಾಡುತ್ತದೆ. ಅದಕ್ಕಾಗಿ ನಾನು ಸ್ನೇಹಿತರಲ್ಲಿ ಮತ್ತು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಈ ಜನರ ಕೆಲಸಗಳನ್ನು ಮಾಡುವಂಥಾದ್ದರಲ್ಲಿ ಸ್ವಲ್ಪ ಹಿತಾಸಕ್ತಿಗಳು ನಮಗೆ ವಿರೋಧವಾದರೂ ಪರವಾಗಿಲ್ಲ, ವ್ಯಕ್ತಿಗಳು ವಿರೋಧವಾದರೂ ಪರವಾಗಿಲ್ಲ, ಜನರಿಗೆ ಒಳ್ಳೆಯದೆಂದು ಯಾವ ಕೆಲಸಗಳು ನಮ್ಮ ಕಣ್ಣಿಗೆ ಕಾಣುತ್ತವೆಯೋ ಯಾವುವು ಮನಸ್ಸಿಗೆ ಅರಿವಾಗುತ್ತವೆಯೋ ಅದನ್ನು ಮಾಡಿ ಮುಗಿಸಬೇಕು. ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದಂತೆ ಈ ಸರ್ಕಾರ ಮಾಡಿರುವ ಅನೇಕ ಕೆಲಸಗಳ ಬಗ್ಗೆ ಈಗಾಗಲೇ ನನ್ನ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಈ ಬೆಂಗಳೂರಿನಲ್ಲಿ ಆಗುತ್ತಿರುವಂತಹ ಅಭಿವೃದ್ಧಿಯನ್ನು ನೋಡಿದರೆ ನಮಗಂತೂ ಸ್ವಲ್ಪ ಹೊಟ್ಟೆಕಿಚ್ಚು. ಆದರೆ ಬೆಂಗಳೂರಿನಲ್ಲಿ ಅಷ್ಟೇ ಮಾಡಿ ಹಳ್ಳಿ ಕಡೆ ಏನೂ ಮಾಡಿಲ್ಲವೆಂದು ಅರ್ಥವಲ್ಲ. ನಮ್ಮ ಮಾನ್ಯ ಬಚ್ಚೇಗೌಡರು ಪ್ರಾಮಾಣಿಕವಾಗಿ ಮೊನ್ನೆ ಒಪ್ಪಿಕೊಂಡರು. ಮೈಸೂರು ರಸ್ತೆಯನ್ನು ಜ್ಞಾಪಿಸಿಕೊಂಡರೆ ಹೇಳಿ ಎಷ್ಟ ಸಲ ನೀವೂ ಮೈಸೂರಿಗೆ ಹೋಗಿ ಬರುತ್ತೀರಿ. ನಾನು ಕುಣಿಗಲ್ ರಸ್ತೆಯಲ್ಲಿ ಮಾರಿಸ್ ಮೈನರ್ ಕಾರು ತೆಗೆದುಕೊಂಡು ಹೊರಟರೆ ಎಷ್ಟು ಕಷ್ಟಪಡಬೇಕಾಗಿತ್ತು ಸ್ವಾಮಿ. ಇವತ್ತು ಹೇಗೆ ಆಗಿದೆ ನಮ್ಮ ರಸ್ತೆ. ಹೇಳಿ ಎಲ್ಲಿ ತಪ್ಪಾಗಿದೆಯೋ ಎಲ್ಲಿ ವಿಫಲತೆ ಇದೆಯೋ ಎಲ್ಲಿ ಸೋಲು ಇದೆಯೋ ಎಲ್ಲಿ ಅಲಕ್ಷತೆ ಇದೆಯೊ ಎಲ್ಲಿ ಅವಿವೇಕ ಇದೆಯೋ ಅದನ್ನು ನೀವು ಹೇಳಿ ನಾನು ಒಪ್ಪಿಕೊಳ್ಳುತ್ತೇನೆ. ನಾನು ಅದಕ್ಕೆ ನೀವು ಹೇಳುವುದನ್ನೆಲ್ಲಾ ಕುಳಿತುಕೊಂಡು ಕೇಳುತ್ತಿರುತ್ತೇನೆ. ಹೇಳಿ ರಸ್ತೆಗಳ ಅಭಿವೃದ್ಧಿಯ ಬಗ್ಗೆ ಸರ್ಕಾರ ಮಾಡಿರುವುದು, ಬೆಂಗಳೂರಿನಲ್ಲಿ ನಿಮಗೆ ಪಾರ್ಕಿಗೆ ಹೋಗುವುದು ರೂಡಿಯಿಲ್ಲ ಎಂದು ಕಾಣುತ್ತದೆ. ಇಲ್ಲೇ ವಾಕ್ ಮಾಡಿಬಿಡುತ್ತೀರಿ. ನೀವು ಸುಮ್ಮನೇ ಒಂದು ಆಟೋ ರಿಕ್ಷಾದಲ್ಲಿ ಏನೂ ಕಾಣದಂತೆ ಇಡೀ ಬೆಂಗಳೂರು ನಗರವನ್ನು ಒಂದು ಸಲ ಸುತ್ತುಕೊಂಡು ಬನ್ನಿ. ನನಗೆ

ಈ ರಸ್ತೆಗಳಿಗಿಂತ ಹೆಚ್ಚಾಗಿ ನಾನು ಪ್ರೀತಿಸುತ್ತಿರುವಂತಹ ಗಿಡ ಮರಗಳು ಅದೆಷ್ಟೋ ಅದ್ಭುತವಾದಂತಹ ಬದಲಾವಣೆ. ಆ ಪಾರ್ಕ್‌ಗಳು, ಆಫ್ ಕೋರ್ಸ್ ಆ ಜನ ಸಾಮಾನ್ಯರಿಗೆ ಏನು ಪ್ರಯೋಜನ, ಯಾರೋ ಬೆಂಗಳೂರು ಜನರಿಗೆ ಅನುಕೂಲವಾಗುತ್ತದೆ ಎಂದು ಹೇಳುಬಹುದು ನೀವು. ಆದರೂ ಕೂಡ ಆ ಪಾರ್ಕ್‌ಗಳನ್ನು ಅಭಿವೃದ್ಧಿ ಮಾಡಿರುವಂತಹ ರೀತಿಯನ್ನು ನೋಡಿದರೆ, ಆಮೇಲೆ ಈ ಬೆಂಗಳೂರು ಕಾರ್ಪೋರೇಷನ್‌ನಲ್ಲಿ ಮಾಡುತ್ತಿರುವಂತಹ ಅಭಿವೃದ್ಧಿ ಕೆಲಸಗಳನ್ನು ನೋಡಿದರೆ, ಈ ಕಾರ್ಪೋರೇಷನವರು ಹಣ ಎಲ್ಲಿ ತರುತ್ತಿದ್ದಾರೆ ಇವರು ಏನಾದರೂ ಖೋಟಾ ನೋಟು ಪ್ರಿಂಟ್ ಮಾಡುತ್ತಾರೆಯೇ? ಇಲ್ಲ. ನಾನು ಅದನ್ನು ಹೇಳಲಿಕ್ಕೆ ಇಷ್ಟೆಲ್ಲಾ ಹೇಳಿದ್ದು. ಸ್ವಯಂ ನಿರ್ಧಾರ ಕರ ಪದ್ಧತಿಯನ್ನು ತಂದಿದ್ದರಿಂದ ಇವತ್ತು ಕಾರ್ಪೋರೇಷನ್‌ಗೆ ಆದಾಯ ಜಾಸ್ತಿಯಾಯಿತು, ಅಷ್ಟೇ ಅಲ್ಲ ಯಾವ ಫಲಾನುಭವಿ ಇದ್ದನೋ ಅವನು ಪಡುತ್ತಿದ್ದ ಸಂಕಟ ಕಡಿಮೆಯಾಯಿತು. ಈ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಿಂದ ಹಿಂಸೆ ಪಡುತ್ತಿದ್ದನಲ್ಲಾ, ಆ ಹಿಂಸೆಯು ತಪ್ಪಿತು ಅವನಿಗೆ, ಜೊತೆಗೆ ಇಷ್ಟೆಲ್ಲಾ ಖರ್ಚು ಮಾಡಲಿಕ್ಕೆ, ಈ ಪ್ಲೈ ಓವರ್‌ಗಳನ್ನು ಕಟ್ಟಲಿಕ್ಕೆ ರಸ್ತೆಗಳನ್ನು ಮಾಡಲಿಕ್ಕೆ ಈ ಪಾರ್ಕ್‌ಗಳನ್ನು ಇಂಪ್ರೂವ್ ಮಾಡಲಿಕ್ಕೆ ಖರ್ಚು ಮಾಡುತ್ತಿರುವಂತಹ ಹಣ ಬಂದಿದ್ದು ಆ ಸ್ವಯಂ ನಿರ್ಧಾರ ತೆರಿಗೆಯಿಂದ. It is an excellent decision. ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಷಯ ಅದು ಮತ್ತೆ ಚರ್ಚೆಗೆ ಬರುತ್ತಿದೆ. ಈ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯದಲ್ಲಿ ಇವತ್ತು ರಾಜ್ಯ ಅದರಲ್ಲೂ ಬೆಂಗಳೂರು It is a focus point in the world ನನಗೆ ಗೊತ್ತಿಲ್ಲ, ನನಗೆ ಕಂಪ್ಯೂಟರ್ ಅಪರೇಟ್ ಮಾಡುವುದಕ್ಕೂ ಬರುವುದಿಲ್ಲ but on reading. I can understand that the Bangalore is the focus point of this ತಂತ್ರಜ್ಞಾನ. ಇದು ಒಳ್ಳೆಯ ವಿಷಯವಲ್ಲವೇ? ನಿನ್ನೆ ನಮ್ಮ ಊರಲ್ಲಿ ಒಬ್ಬ ಹುಡುಗ ಕೇಳುತ್ತಿದ್ದ. ಇದೇನೋ ಸರಿ ಕಣಣ್ಣ, ಈ ಕಂಪ್ಯೂಟರ್ಸ್ ಬಂದು ಮಳೆ ಬರಿಸುವುದಕ್ಕೆ ಆಗುತ್ತದೆಯೇ ಎಂದು. ಮಳೆ ಸುರಿಸುವುದಕ್ಕೆ ಆಗುವುದಿಲ್ಲ ನಿಜ. ಅವು ಶಾಸ್ತ್ರ ಹೇಳುವುದಕ್ಕೂ ಆಗುವುದಿಲ್ಲ ನಿಜ. ಆದರೆ ಇಷ್ಟಾಗುತ್ತದೆ, ಮಾಹಿತಿ ತಂತ್ರಜ್ಞಾನದಿಂದ ಬಂದಂತಹ ಕೋಟ್ಯಾಂತರ ರೂಪಾಯಿಗಳು ಏನು ಇದೆಯೋ ಆ ಹಣ ಈ ರಾಜ್ಯಕ್ಕೆ ದೊರೆತಿದೆ. ಆ ಒಂದು ಉತ್ಪತ್ತಿ ಈ ರಾಜ್ಯದಲ್ಲಿ ಆಗುವುದರಿಂದ ಇಲ್ಲಿ ಆರ್ಥಿಕ ಚಟುವಟಿಕೆಗಳು ಜಾಸ್ತಿಯಾಗುತ್ತವೆ. ಇದು ಅಭಿವೃದ್ಧಿಗೆ ಒತ್ತನ್ನು ಕೊಡುತ್ತದೆ. ಆದ್ದರಿಂದ ಮಾಹಿತಿತಂತ್ರಜ್ಞಾನ ಕ್ಷೇತ್ರದಲ್ಲಿ ಇತ್ತೀಚಿನ ವರ್ಷಗಳಲ್ಲಿ ಈ ರಾಜ್ಯ ಸರ್ಕಾರ ಮಾಡಿರುವಂತಹ ಒಂದು ಸಾಧನೆ, ಇದು ಇಡೀ ಪ್ರಪಂಚದ ಒಂದು ಗಮನವನ್ನು ಸೆಳೆದಿದೆ. ಸನ್ಮಾನ್ಯ ಅಧ್ಯಕ್ಷರೇ, ಬಿ ಡಿ ಎ ನಲ್ಲಿ 10 ವರ್ಷಗಳಿಂದ ಒಂದು ಸೈಟ್ ಏನಾದರೂ ಕೊಟ್ಟಿದ್ದರೆ ಹೇಳಿ ಸ್ವಾಮಿ. ಯಾವುದೋ ಈ 'ಜೆ' ಕೆಟಗರಿಯಲ್ಲೋ, 'ಎಫ್' ಕೆಟಗರಿಯಲ್ಲೋ 'ಇ' ಕೆಟಗರಿಯಲ್ಲೋ ಅವರಿಗೆ ಬೇಕು ಬೇಕಾದವರಿಗೆ ಕೊಡುತ್ತಿದ್ದಿದ್ದನ್ನು ಬಿಟ್ಟರೆ, ಎಷ್ಟು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಸರ್ಕಾರ ಸಹ ಒಳ್ಳೆಯ ಕೆಲಸ ಮಾಡುತ್ತಿದೆ. ಏಕೆಂದರೆ ಮೊನ್ನೆ ನಮ್ಮ ಮುಖ್ಯಮಂತ್ರಿಗಳು ಹೇಳುತ್ತಿದ್ದರು. ನಮ್ಮ ಮಂಡ್ಯ ಜಿಲ್ಲೆಯವರು ವಿಶ್ವೇಶ್ವರಯ್ಯ ಕನ್ನಂಬಾಡಿ ಕಟ್ಟೆ ಕಟ್ಟಿದ ಎಂದು ಹೇಳಿ ವಿಶೇಶ್ವರಯ್ಯ ನವರ ಫೋಟೋ ಹಾಕಿಕೊಳ್ಳುತ್ತಾರೆ ಹೊರತು, ಅದಕ್ಕೆ ದುಡ್ಡು ಒದಗಿಸಿದರಲ್ಲಾ 323 ಲಕ್ಷರೂ ಅದರ ಎಸ್ಟಿಮೇಟ್, ಅವತ್ತಿನ ಇಡೀ ಒಟ್ಟು ಹುಟ್ಟುವಳಿ 353 ಲಕ್ಷ ರೂ 353 ಲಕ್ಷ ರೂ ಇಡೀ ರಾಜ್ಯದ ಹುಟ್ಟುವಳಿ. ಆಗಿನ ಪ್ರಾಂತ್ಯದ್ದು. ಕೆ ಆರ್ ಎಸ್ ನ ಅಂದಾಜು 323 ಲಕ್ಷ ರೂ.

ಆ ದಿಟ್ಟತನವನ್ನು ತೋರಿ ಯಾರು ಮಹಾರಾಜರು ಕೆಲಸ ಮಾಡಿಸಿದರೋ ಅವರ ಫೋಟೋ ಹಾಕಿಕೊಳ್ಳುವುದಕ್ಕಿಂತ ಜಾಸ್ತಿವಿಶ್ವೇಶ್ವರಯ್ಯನವರ ಫೋಟೋ ಹಾಕಿಕೊಳ್ಳುತ್ತಿದ್ದಾರಂತೆ ನೋಡಿ ಇಲ್ಲಿ ಹೇಳುತ್ತಿದ್ದಾರೆ. ಆದರೆ ವಿಶ್ವೇಶ್ವರಯ್ಯನವರು ಮಹಾರಾಜರು ದುಡ್ಡು ಕೊಡದಿದ್ದರೆ ಕನ್ನಂಬಾಡಿ ಕಟ್ಟೆಯನ್ನು ಕಟ್ಟಿಸುವುದಕ್ಕೆ ಆಗುತ್ತಿರಲಿಲ್ಲ ಎನ್ನುವುದನ್ನು ಮಂಡ್ಯ ಜಿಲ್ಲೆಯವರು ಮರೆತಿದ್ದಾರೆಂದು ಕಾಣುತ್ತದೆ. ಅದೇ ನಮ್ಮ ದುರಂತ. ಮಾನ್ಯ ಚೌಡಯ್ಯನವರು ಇಲ್ಲ. ಅದ್ದರಿಂದ ಬಿ ಡಿ ಎ ನಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ತುಂಬಾ ಕೆಲಸ ಮಾಡುತ್ತಿದ್ದಾರೆ ಅವರನ್ನು ಅಭಿನಂದಿಸುವಾಗ ಅದಕ್ಕೆ ಒತ್ತುಕೊಟ್ಟಂತಹ, ಅದಕ್ಕೆ ಹಣ ಒದಗಿಸಿಕೊಟ್ಟಂತಹ ಸಹಾಯ ಸಹಾಯಕ ಒದಗಿಸಿದಂತಹ ಸರ್ಕಾರವನ್ನೂ ಸಹ ನಾನು ಅಭಿನಂದಿಸುತ್ತೇನೆ. ನಿನ್ನೆಯೂ ಮೊನ್ನೆಯೋ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಉತ್ತರ ಕೊಟ್ಟಿದ್ದಾರೆ 40 ಸಾವಿರ ನಿವೇಶನಗಳನ್ನು ಹಂಚಿದ್ದಾರೆ. ಹೇಳಿ ಯಾವ ಕಾಲದಲ್ಲಿ ಆಗಿತ್ತು. ನೀವು ಒಂದೊಂದು ಆದರೂ ಹೇಳಿ. ನಾನು ಹೇಳಿದ್ದೇನಲ್ಲಾ. ತಪ್ಪಾಗಿರುವುದನ್ನು ತಪ್ಪು ಅಂತ ಹೇಳಿ. ಒಳ್ಳೆಯ ಕೆಲಸವನ್ನು ಒಳ್ಳೆಯದೆಂದು ಹೇಳುವಂತಹ ಹೃದಯ ವಿಶಾಲತೆ ಇಲ್ಲವೇ? 40 ಸಾವಿರ ನಿವೇಶನಗಳನ್ನು ಹಂಚಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ಬೆಳಿಗ್ಗೆ ತಾನೇ ನಮ್ಮ ಮಾನ್ಯ ಮೋಟಮ್ಮನವರು ಅಥವಾ ಬೇರೆ ಯಾರೋ ಈ ವಿಷಯದಲ್ಲಿ ಸ್ವಲ್ಪ ಘರ್ಷಣೆ ಮಾಡುತ್ತಿದ್ದರು. ಸ್ತ್ರೀ ಶಕ್ತಿ, ಗಂಡಸರ ಶಕ್ತಿ ಎರಡನ್ನೂ ಮಾಡೋಣ ಎಂದು ಆ ಗಂಡಸರ ಶಕ್ತಿ ಇದ್ದೇ ಇತ್ತು. ಗಂಡಸರ ಶಕ್ತಿಯನ್ನು ಹೊಸದಾಗಿ ಏನೂ ಮಾಡಬೇಕಾಗಿಲ್ಲ, ಆದರೆ ಈ ಸ್ತ್ರೀ ಶಕ್ತಿ ಕಾರ್ಯಕ್ರಮದಿಂದ ಯಾವ ಒಂದು ಮಹಾ ಸಾಧನೆಯಾಗಿದೆ It is a silent revolution. ಸುಮಾರು 25–30 ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡುತ್ತಿರುವಂತಹ ನನಗೆ ಗೊತ್ತಿದೆ. ಈ ಒಂದು ಕಾರ್ಯಕ್ರಮವನ್ನು ಹಾಕುವುದಕ್ಕಿಂತ ಮೊದಲು 10 ಜನ ಹೆಣ್ಣು ಮಕ್ಕಳನ್ನು ನಾವು ಈಚೆಗೆ ಹೊರಡಿಸುವುದಕ್ಕೆ ಆಗುತ್ತಿರಲಿಲ್ಲ. ಅವರು ಯಾವ ಕಾರ್ಯಕ್ರಮಕ್ಕೂ ಬರುತ್ತಿರಲಿಲ್ಲ. ಇವತ್ತು ನೀವು ಹೋಬಳಿ ಮಟ್ಟದಲ್ಲಿ ಯಾವುದಾದರೂ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡರೆ ಸುಮಾರು 4–5 ಸಾವಿರ ಹೆಣ್ಣು ಮಕ್ಕಳು ಆ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಾರೆ. It is not a simple achievement which cannot be measured by money. ಇದನ್ನು ಆರ್ಥಿಕ ಅಳತೆಗೋಲಿನಿಂದ ಅಳೆಯಲು ಸಾಧ್ಯವಾಗುತ್ತದೆಯೇ? ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ಈ ಸ್ತ್ರೀ ಶಕ್ತಿ ಯೋಜನೆ ತಂದಿರುವಂತಹ ಒಂದು ಕ್ರಾಂತಿ. It is a silent revolution. ಆ ಒಂದು ಶಕ್ತಿಯನ್ನು ತುಂಬುವುದರ ಮುಖಾಂತರ ಅವರು ಬರೀ ಲೋನ್ ತೆಗೆದುಕೊಳ್ಳುವುದು ಅಷ್ಟೇ ಅಲ್ಲ ಎಲ್ಲಾ ವೇದಿಕೆಗಳಲ್ಲೂ ಎಲ್ಲಿ ಬೇಕಾದರೂ ಯಾರನ್ನು ಬೇಕಾದರೂ ಪ್ರಶ್ನೆ ಮಾಡುವಂತಹ ಶಕ್ತಿ ಪಡೆದುಕೊಂಡಿದ್ದಾರೆ. ಕೆಲವರಿಗೆ ಅದರಿಂದ ಅನಾನುಕೂಲ ಆಗಿರಬಹುದು. ಅವರಿಗೆ ಆ ಶಕ್ತಿ ಬಂದಿರುವುದರಿಂದ ಗಂಡಸರಿಗೆ ಕೆಲವರಿಗೆ ಅನಾನುಕೂಲ ಆಗಿರಬಹುದು. ಅವರಿಗೆ ಆಗಿರುವ ಅನಾನುಕೂಲಕ್ಕಾಗಿ ನಾನು ಪ್ರಶ್ಚಾತಾಪ ಪಟ್ಟು ಅವರಲ್ಲಿ ಆಗಿರುವಂತಹ ಬದಲಾವಣೆಗೆ ನಾನು ಮೆಚ್ಚುಗೆ ಸೂಚಿಸುತ್ತೇನೆ. ಇಷ್ಟನ್ನು ಹೇಳಿ ಮಾನ್ಯ ಉಪಾಧ್ಯಕ್ಷರೇ ನನ್ನ ಇಡೀ ಉದ್ದೇಶ ಇನ್ನು ಮುಂದಾದರೂ ಕೂಡ ಈ ಉಳ್ಳವರಿಗೇನೇ ಎಲ್ಲವನ್ನೂ ಕೊಡುವಂತಹ ಕಾರ್ಯಕ್ರಮಕ್ಕೆ ಆದಷ್ಟು ಬೇಗ ಯಾವುದಾದರೂ ಸರ್ಕಾರವಾಗಲಿ, ಯಾರಾದರೂ ರಾಜಕಾರಣಿಗಳು ಆಗರಲಿ ಈಗ ಆರ್ಥಿಕವಾಗಿ ಕಷ್ಟ ಪರಿಸ್ಥಿತಿಯಲ್ಲಿರುವವರಿಗೆ The poorest of the poor ಅಂತಹವರಿಗೆ ನಾವು ಕಾನೂನು ಮುರಿದು ಕೂಡ ಅಥವಾ ನೀತಿ ನಿಯಮಗಳನ್ನು ಗಾಳಿಗೆ ತೂರಿ ಅದರೂ ಸಹ

ಸಹಾಯ ಮಾಡುವುದಾದರೆ ನನ್ನದು ಅಭ್ಯಂತರವಿಲ್ಲ. ಆದರೆ ಹತ್ತಾರು ಸಾವಿರ ಕೋಟಿ ರೂಗಳನ್ನು ಆ ಜಿಂದಾಲ್, ಕಲ್ಯಾಣಿ ಗ್ರೂಪ್‌ನವರಿಗೆ ಕೊಡುವಂತಹ ಕೆಲಸವನ್ನು, ಇನ್ನು ಮುಂದೆ ಯಾವ ಸರ್ಕಾರವೂ, ಇದು ಪಾಪ, ಇದನ್ನು ಯಾರೂ ಮಾಡಕೂಡದು, ಮಾಡುವುದು ಬೇಡ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

+ಶ್ರೀ ಸಿ ಗುರುಸ್ವಾಮಿ (ಚಾಮರಾಜನಗರ):- ಮಾನ್ಯ ಉಪಾಧ್ಯಕ್ಷರೇ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತ ನಮಗೆ ಗೊತ್ತಿರುವ ರೀತಿಯಲ್ಲಿ ಇವತ್ತು 27 ಇಲಾಖೆಗಳಿಗೆ ಸಂಬಂಧಿಸಿ ಏನು ವಿಷಯ ಸಮಿತಿಗಳು ಕೂಲಂಕಷವಾಗಿ ಚರ್ಚೆ ಮಾಡಿ ವರದಿ ನೀಡಿವೆ ಆ ವರದಿ ಹಿನ್ನೆಲೆಯಲ್ಲಿ ಸದನದಲ್ಲಿ ಇವತ್ತು ಬೇಡಿಕೆಗಳ ಮೇಲೆ ಚರ್ಚೆ ನಡೆದಿದೆ. ಆದರೆ 28 ವಿಷಯಗಳೇನಿವೆ ಅವೆಲ್ಲದರ ಬಗ್ಗೆಯೂ ಬೆಳಕು ಚೆಲ್ಲುವಂತಹ ವಿಚಾರಗಳು ಸಮಸ್ಯೆಗಳು ಅದು ಬಜೆಟ್ ವಿಚಾರ ಇರಬಹುದು ಅಥವಾ ಕರ್ಯಕ್ರಮದ ವಿಚಾರ ಇರಬಹುದು ಎಲ್ಲದರ ಬಗ್ಗೆ ಕೂಡ ಮಾತನಾಡಬೇಕು ಎಂಬ ಆಸೆ ನನಗೂ ಕೂಡ ಇದೆ. ಆದರೆ ಇಲ್ಲೇನಾಗಿದೆ ಅಧ್ಯಕ್ಷರೇ ಇಂದು ಕಾಲ ಹೆಚ್ಚು ಇಲ್ಲದಿರುವ ಪ್ರಯುಕ್ತ ನಾನು ಎಲ್ಲದರ ಮೇಲೂ ಮಾತನಾಡಬೇಕೆಂಬ ಇಚ್ಛೆ ಇದ್ದರೂ ನನಗೆ ಕೊಟ್ಟಿರುವ ಸಮಯದಲ್ಲಿ ಕೆಲವಾರು ಇಲಾಖೆಗಳ ವಿಚಾರದಲ್ಲಿ ಬೇಡಿಕೆಯಲ್ಲಿ ಭಾಗವಹಿಸಲು ನಾನು ಇಚ್ಛೆಪಟ್ಟು ಬೆಳಕನ್ನು ಚೆಲ್ಲಲು ಪ್ರಯತ್ನ ಮಾಡುತ್ತೇನೆ. ನನ್ನ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಲು ಪ್ರಾರಂಭಿಕವಾಗಿ ಒಂದು ವಿಚಾರವನ್ನು ಸಭೆಯ ಗಮನಕ್ಕೆ ತರಲು ಪ್ರಯತ್ನ ಮಾಡುತ್ತೇನೆ. ಅದೇನಪ್ಪಾ ಅಂದರೆ ಇಡೀ ರಾಷ್ಟ್ರದ ಗಮನವನ್ನೇ ಸೆಳೆದಂತಹ ಒಂದು ಘಟನೆ ಕಳೆದ 15 ದಿವಸದಲ್ಲಿ ನಡೆಯಿತು. ಅದು ಪಕ್ಕದ ತಮಿಳುನಾಡಿನ ಒಬ್ಬ ಮಹಿಳಾ ಮುಖ್ಯಮಂತ್ರಿ ಕುಮಾರಿ ಜಯಲಲಿತಾರವರು ಮುಖ್ಯಮಂತ್ರಿಯಾಗಿ ಏನು ಒಂದು ಆದೇಶವನ್ನು ಆ ರಾಜ್ಯದಲ್ಲಿ ಹೊರಡಿಸಿದರು ಅದು ರಾಷ್ಟ್ರವ್ಯಾಪ್ತಿ ಚರ್ಚೆಗೆ ಒಳಗಾಯಿತು. ಅಷ್ಟೇ ಅಲ್ಲ ಈ ದೇಶದ ಸುಪ್ರೀಂ ಕೋರ್ಟಿನಿಂದ ಕೂಡ ಪ್ರಶಂಸೆಗೆ ಒಳಗಾದ ಒಂದು ಆದೇಶವನ್ನು ನಾವು ನೋಡಿದೆವು. ತಮಗೆಲ್ಲರಿಗೂ ಗೊತ್ತಿರುವಂತೆ ಏನು ಸರ್ಕಾರಿ ನೌಕರರು ಅಧಿಕಾರಿಶಾಹಿ ಸರ್ಕಾರದ ಕಾರ್ಯಕ್ರಮಗಳನ್ನು ಜಾರಿಗೆ ಕೊಡಲೇ ತೊಂದರೆ ಕೊಟ್ಟಂತಹದ್ದು ಮತ್ತು ಸಮಾಜಕ್ಕೆ ಅದರಿಂದಾಗುವ ಅನಾಹುತವನ್ನು ಗಮನಿಸಿ ಮೂರೂವರೆ ಲಕ್ಷ ನೌಕರರನ್ನು ಮುಖ್ಯಮಂತ್ರಿ ಕುಮಾರಿ ಜಯಲಲಿತಾ ಅವರು dismiss ಮಾಡುತ್ತೇನೆ ಎಂದು ಹೇಳಿ ಅವರನ್ನು suspend ಮಾಡಿ ಅವರ ಜಾಗಕ್ಕೆ ಸರ್ಕಾರಿ ಕಾರ್ಯಕ್ರಮಗಳು ನಡೆಯಬೇಕೆಂಬ ದಿಕ್ಕಿನಲ್ಲಿ ಮೂರೂವರೆ ಲಕ್ಷ ನಿರುದ್ಯೋಗಿ ಹಂಗಾಮಿ ನೌಕರರನ್ನು ಆಯ್ಕೆ ಮಾಡುವಂತಹ ಆದೇಶ ಹೊರಡಿಸತಕ್ಕಂತಹದ್ದು. ಅದರ ಬಗ್ಗೆ ಬಹಳವಾಗಿ ಚರ್ಚೆಯಾಯಿತು. ಇಲ್ಲಿ ನಾವು ಮೆಚ್ಚಬೇಕಾದ್ದು ಏನಪ್ಪಾ ಅಂದರೆ ಆ ಒಬ್ಬ ಹೆಣ್ಣುಮಗಳು ಆ ರಾಜ್ಯದ ಮುಖ್ಯಮಂತ್ರಿಯಾಗಿ ಅವರ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಏನು ಅಧಿಕಾರಿಶಾಹಿ ನೌಕರರು ಸಹಕಾರ ಮಾಡಬೇಕಾಗಿತ್ತೋ ಅದನ್ನು ಧಿಕ್ಕರಿಸಿ ಮುಷ್ಕರ ಹೂಡಿದಂತಹ ಸಂದರ್ಭದಲ್ಲಿ ಈ ಒಂದು ದಿಟ್ಟ ನಿಲುವನ್ನು ತೆಗೆದುಕೊಂಡಿರುವುದನ್ನು ನಾವೆಲ್ಲರೂ ಕೂಡ ಮೆಚ್ಚಬೇಕಾಗಿದೆ. ವಿರೋಧ ಪಕ್ಷದವರೆಲ್ಲಾ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಸುಪ್ರೀಂ ಕೋರ್ಟಿನಲ್ಲೂ ಬಹಳವಾಗಿ ಹೋರಾಟ ಮಾಡಿದರು. ಆದರೆ ಕುಮಾರಿ ಜಯಲಲಿತಾ ಅದಕ್ಕೆ ಬಗ್ಗಲೇ ಇಲ್ಲ. ಕೊನೆಗೆ ವಿರೋಧ ಪಕ್ಷಗಳಿಗೆ ಸುಪ್ರೀಂ ಕೋರ್ಟಿಗೆ ಮೊರೆಹೋಗುವಂತಹ ಪರಿಸ್ಥಿತಿ ಬಂತು. ಆಗ ಸುಪ್ರೀಂ ಕೋರ್ಟ್ ಜಯಲಲಿತಾರಿಗೆ ಒಂದು ಆದೇಶ ನೀಡುತ್ತದೆ, ನೀವು ಆ ನೌಕರರನ್ನು ವಾಪಸ್

ಕೆಲಸಕ್ಕೆ ತೆಗೆದುಕೊಳ್ಳಿ. ಆ ಆದೇಶದ ಜೊತೆಗೆ ಅವರು ತೆಗೆದುಕೊಂಡ ನಿರ್ಧಾರವನ್ನು ಪ್ರಶಂಸೆ ಮಾಡುತ್ತಾರೆ. ESMA ಕಾಯಿದೆ ಜಾರಿಗೊಳಿಸಿದ್ದಿರಬಹುದು ಅಥವಾ ಅವರು ತೆಗೆದುಕೊಂಡ ನಿರ್ಧಾರ ಇರಬಹುದು ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರ ಕೆಲಸ ಮಾಡುವ ಸಂದರ್ಭದಲ್ಲಿ ನೌಕರರು ತಮಗೆ ಇಚ್ಛೆ ಬಂದಂತೆ ವರ್ತಿಸಲು ಸಾಧ್ಯವಾಗುವುದಿಲ್ಲ, ಅವರು ತೆಗೆದುಕೊಂಡಿರುವುದು ಸರಿಯಿದೆ, ಅವರಿಗೆ ಇದುವರೆಗೂ ಕೊಟ್ಟಿರುವ ಶಿಕ್ಷೆ ಇನ್ನು ಸಾಕು, ಅವರನ್ನು ತೆಗೆದುಕೊಳ್ಳಿ ಎಂಬ ಆದೇಶವನ್ನು Supreme court ಕುಮಾರಿ ಜಯಲಲಿತಾರಿಗೆ ನೀಡುತ್ತದೆ. ನಂತರ ಅವರನ್ನು ವಾಪಸ್ ತೆಗೆದುಕೊಳ್ಳುವ ಪ್ರಕ್ರಿಯೆ ಶುರು ಮಾಡುತ್ತಾರೆ, ಇನ್ನೂ ನಡೆಯುತ್ತಿದೆ ಉಪಾಧ್ಯಕ್ಷರೇ. ಈ ವಿಚಾರವನ್ನು ಇಲ್ಲಿ ನಾನು ಯಾಕೆ ಈ ಅಂಶವನ್ನು ಪ್ರಸ್ತಾಪ ಮಾಡಿದೆ ಅಂದರೆ ನಮ್ಮ ವಿಷಯ ಸಮಿತಿಗಳೇನು ವರದಿ ನಮಗೆ ನೀಡಿವೆ ಬಜೆಟಿನ ಮೇಲೆ ಯಾವ ವಿಷಯ ಸಮಿತಿ ವರದಿ ಮೇಲೆ ಚರ್ಚೆ ಮಾಡುತ್ತಿದ್ದೇವೆ, ನೀವು ಯಾವುದೇ ವಿಷಯ ಸಮಿತಿ ತೆಗೆದುಕೊಳ್ಳಿ ಉಪಾಧ್ಯಕ್ಷರೇ ಸರ್ಕಾರಿ ಕಾರ್ಯಕ್ರಮಗಳು ಲೋಪವಾಗಿರುವುದು ಜಾರಿಗೆ ಬರದೇ ಇರುವಂಥದ್ದು ನಮ್ಮ ರಾಜ್ಯದ ಬಜೆಟ್ 26 ಸಾವಿರ ಕೋಟಿ ಇರುವಂತಹದು ಇಷ್ಟೆಲ್ಲಾ ಲೋಪವಾಗುತ್ತಿರುವುದಕ್ಕೆ ಕಾರಣ ನಮ್ಮ ಅಧಿಕಾರಿಶಾಹಿ ನೌಕರಶಾಹಿ ಎಂಬುದನ್ನು ಎಲ್ಲಾ ವರದಿಗಳೂ ಸಮೂದಿಸಿವೆ. ಹಾಗಾಗಿ ನಾನು ಕುಮಾರಿ ಜಯಲಲಿತಾರ ವಿಚಾರ ಪ್ರಸ್ತಾಪಿಸಲು ಪ್ರಯತ್ನಪಟ್ಟಿದ್ದು. ಹಾಗೇ ನಮ್ಮ ಮುಖ್ಯಮಂತ್ರಿಗಳೂ ಅಂತಹ ದೃಢನಿರ್ಧಾರ ತೆಗೆದುಕೊಳ್ಳವುದುನ್ನು ಮಾಡಬೇಕು ಎಂಬುದೇ ತಮ್ಮ ಮೂಲಕ ಈ ಸಂದರ್ಭದಲ್ಲಿ ಅವರಿಗೆ ಒತ್ತಾಯಪೂರ್ವಕ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇವತ್ತು ನಿಮಗೆ ಕೊರತೆ ಏನಿಲ್ಲ ಅಥವಾ number ಕೊರತೆ ಇಲ್ಲ, 150 MLA ಗಳ ಬೆಂಬಲ ಇವತ್ತು ಕರ್ನಾಟದ ಜನ ನಿಮಗೆ ಕೊಟ್ಟಿರುವಾಗ ನೀವು ಯಾಕೆ ಹಿಂಜರಿಯಬೇಕು? ಎಲ್ಲಿ ಅಧಿಕಾರಿಗಳು ಲೋಪ ಮಾಡಿದರೋ ಎಲ್ಲಿ ಸರ್ಕಾರಕ್ಕೆ ಇರಿಸುಮುರಿಸು ಮಾಡಿದರೋ ಎಲ್ಲಿ ಭ್ರಷ್ಟಾಚಾರ ಎಸಗಿದರೋ ಎಲ್ಲಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ವಿಫಲವಾದ ಸಂದರ್ಭದಲ್ಲಿ ಯಾಕೆ ನೀವು ದೃಢವಾದ ನಿರ್ಧಾರ ತೆಗೆದುಕೊಳ್ಳಬಾರದು ಎಂಬ ಮಾತನ್ನು ಅವರಿಗೆ ಹೇಳಲು ಇಷ್ಟಪಡುತ್ತೇನೆ. ನನ್ನ ಮಾತನ್ನು ಪುಷ್ಟೀಕರಿಸಿ ಈ ವರದಿಯಲ್ಲಿ ಬಂದಿರುವ ಒಂದೆರಡು ಉದಾಹರಣೆಗಳನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲು ನಾನು ಇಚ್ಛೆಪಡುತ್ತೇನೆ. ಈ ನಾಗರೀಕ ಇಲಾಖೆಯಲ್ಲಿ ಪುಟ 17ರಲ್ಲಿ ಬಹಳ ಗಂಭೀರವಾದದ್ದು ಒಬ್ಬರು ವೆಂಕಟರಮಣಪ್ಪ ಎಂದು ಸಹಾಯಕ ನಿಯಂತ್ರಕರು ಕಾನೂನು ಮಾಪನ ಶಾಸ್ತ್ರ ಇಲಾಖೆ, ಹಾವೇರಿ ಇವರು ರಾಜ್ಯ ಸರ್ಕಾರದ ಇಲಾಖೆಯಲ್ಲಿಯೂ ಹಾಗೂ ಅದೇ ವೇಳೆ ಕೇಂದ್ರ ಸರ್ಕಾರದ ನ್ಯಾಷನಲ್ ಏರೋನಾಟಿಕ್ಸ್ ಲ್ಯಾಬೋರೇಟರಿ, ಬೆಂಗಳೂರು ಇಲ್ಲಿ ಸೈಂಟಿಸ್ಟ್ ಆಗಿಯೂ ಕಳೆದ 20 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು ಎರಡೂ ಕಡೆಯ ವೇತನವನ್ನು ಪಡೆಯುತ್ತಿದ್ದ ಇವರು ವಾರಕ್ಕೊಂದು ಸಲ ಇಲಾಖೆಗೆ ಬಂದು ಸಹಿ ಮಾಡಿ ಹೋಗುತ್ತಿದ್ದರೂ ಸಹ ಈ ವಿಷಯವು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. ಇದರಲ್ಲಿ ಇಲಾಖೆಯ ಕೆಲವು ಅಧಿಕಾರಿ:ನೌಕರರು ಶಾಮೀಲಾಗಿರುವುದು ಮೇಲ್ನೋಟಕ್ಕೇ ಕಂಡುಬರುತ್ತದೆ. ಅಂದರೆ 20 ವರ್ಷಗಳ ಕಾಲ ಈ ಅಧಿಕಾರಿ ಕೇಂದ್ರ ಸರ್ಕಾರದ Head ನಲ್ಲೂ ಸಂಬಳ ಡ್ರಾ ಮಾಡಿದ್ದಾರೆ, ವರದಿ ಇದನ್ನು ಹೇಳುತ್ತದೆ, ನೌಕರರು ಮಾಡುವ ಲೋಪಕ್ಕೆ ಇದನ್ನು ಹೇಳುತ್ತಿದ್ದೇನೆ. ಹಾಗೇನೇ ಇನ್ನೊಂದು ನಿದರ್ಶನ ನಾನು ಕೊಡಬೇಕು ಅಂದರೆ ಪುಟ 15, ಈ ಸದನ subject committee ಗಳನ್ನು ಮಾಡಿದ್ದರೂ ಆಹಾರ ಮತ್ತು ನಾಗರೀಕ ಸರಬರಾಜು ಸಮಿತಿ ಅಧ್ಯಕ್ಷರು ಒಂದು ಆದೇಶ ಕೊಡುತ್ತಾರೆ,

ಏನು ಆದೇಶ ಎಂದರೆ ಏನೋ ಕೆಲವು ಲೋಪಗಳು ಬಂದಂತಹ ಸಂದರ್ಭದಲ್ಲಿ ಆ ಕಾರ್ಯದರ್ಶಿಗಳಿಗೆ ಆದೇಶ ಕೊಡುತ್ತಾರೆ, ಯಾರೋ D.D. ಆಹಾರ ಇಲಾಖೆ ಉಪನಿರ್ದೇಶಕರನ್ನು

6.50 ಪಿಎಂ

ಸಮಿತಿ ಮುಂದೆ ಕರೆಸಬೇಕು ಎಂದು ಕೇಳಿದಾಗ ಆ ಕಾರ್ಯದರ್ಶಿಗಳು ಹೇಳುತ್ತಾರೆ ಕಾನೂನು ನಿಯಮದಡಿ ಆ ಡಿಡಿಯವರನ್ನು ಈ ಸಮಿತಿ ಮುಂದೆ ಕರೆಸಲು ಸಾಧ್ಯವಿಲ್ಲ ಎಂದು ಖಡಾಖಂಡಿತವಾಗಿ ಹೇಳಿರುವುದನ್ನು ವರದಿಯಲ್ಲಿ ಹೇಳಲಾಗಿದೆ. ಪುಟ 12ರಲ್ಲಿ "ಸಮಿತಿಯ ಸಭೆಗೆ ಉಪ ನಿರ್ದೇಶಕರುಗಳನ್ನು ಕರೆಸುವುದಕ್ಕೆ provision ಇಲ್ಲ ಎಂದು ನಿರಾಕರಿಸಿರುವುದರ ಬಗ್ಗೆ ಸಮಿತಿಯು ತನ್ನ ತೀವ್ರ ಅಸಮಾಧಾನವನ್ನು ವ್ಯಕ್ತಿಪಡಿಸುತ್ತದೆ. ಆದರೆ ನಿಯಮದಲ್ಲಿ ಅವಕಾಶವಿದರೂ ಸಹ ಕಾರ್ಯದರ್ಶಿಗಳು ಸಮಿತಿಗೆ ತಪ್ಪು ಮಾಹಿತಿ ನೀಡಿದಲ್ಲದೆ ಸಮಿತಿಯ ಸಭೆಯಲ್ಲಿ ಇವರು ಅಧಿಕಾರಿಯಾಗಿ ಸಮಿತಿ ಬಯಸುವ ಮಾಹಿತಿಯನ್ನು ನೀಡುವ ಬದಲು ಇವರೇ ಸರ್ಕಾರ ವೆಂಬಂತೆ ವರ್ತಿಸಿರುತ್ತಾರೆ" ಅಂದರೆ ನೌಕರಶಾಹಿಯ ಅಸಹಕಾರ ಇಲ್ಲಿ, ಬೆಳಿಗ್ಗೆ ಮಾನ್ಯ ರಾಮದಾಸ್ ಅವರು ಪ್ರಸ್ತಾಪ ಮಾಡಿದ ವಿಚಾರ ಇರಬಹುದು, ಅಥವಾ ಇನ್ನೂ ಅನೇಕ ಸದಸ್ಯರು ಪ್ರಸ್ತಾಪ ಮಾಡಿದ ವಿಚಾರ ಇರಬಹುದು, ಸರ್ಕಾರ ಏನು ಕಾರ್ಯಕ್ರಮಗಳು ಕೈಗೊಳ್ಳುವುದು ಇವರ ಒಂದು ವಿಫಲತೆಯಿಂದ ಇವರ ಒಂದು ನಿರ್ಲಕ್ಷ್ಯತನದಿಂದ ಈ ಕಾರ್ಯಕ್ರಮಗಳು ಜಾರಿಗೆ ಬರದಿರುವ ಅನೇಕ ನಿದರ್ಶನಗಳನ್ನು ಎಲ್ಲ ಸಮಿತಿ ಅಧ್ಯಕ್ಷರು ತಮ್ಮ ವರದಿಗಳಲ್ಲಿ ಕೊಟ್ಟಿರುವುದನ್ನು ನಾವು ಕಾಣುತ್ತೇವೆ. ಅದಕ್ಕಾಗಿ ನಾನು ಆಡಳಿತವನ್ನು ಅದು ಭ್ರಷ್ಟಾಚಾರ ಇರಬಹುದು ಅಥವಾ ಯಾವುದನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಇವರನ್ನು ಕಂಟ್ರೋಲ್ ಇಟ್ಟುಕೊಂಡು ಅವರಿಂದ ಕೆಲಸ ಮಾಡಿಸುವ ಪ್ರಯತ್ನ ನಾವು ಎಲ್ಲಿಯವರೆಗೂ ಮಾಡುವುದಿಲ್ಲವೋ ನಾವೆಷ್ಟೇ ಸಾವಿರ ಖರ್ಚು ಮಾಡಿದರೂ ಕೂಡ ಬಹುಶ: ಇಲ್ಲೇ ಎಂದು ಹೇಳುವುದಿಲ್ಲ ಜಿಲ್ಲಾ ಮಟ್ಟದಲ್ಲಿರಬಹುದು ತಾಲ್ಲೂಕು ಮಟ್ಟದಲ್ಲಿ ಆ ಅಧಿಕಾರಿ ಇರಬಹುದು ಇವರಿಂದ ಆಗಿರುವ ಲೋಪದಿಂದಲೇ ಈ ರಾಜ್ಯದ ಬಜೆಟ್‌ನಲ್ಲಿರುವ ಹಣ ಸಮರ್ಪಕವಾಗಿ ಖರ್ಚಾಗದೇ ತೊಂದರೆಯಾಗುವುದು, ಜನರು ಸಂಕಷ್ಟಪಡುತ್ತಿರುವುದಕ್ಕೆ ಕಾರಣವಾಗಿದೆ ಎಂದು ಈ ಸಂದರ್ಭದಲ್ಲಿ ನಾನು ಒತ್ತಾಯಪೂರ್ವಕವಾಗಿ ಹೇಳಲು ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಇನ್ನು ನಾನು ಹಸಿರುಕಾರ್ಡಿಗೆ ಬಂದಾಗ ಈ ಹಸಿರು ಕಾರ್ಡಿನಲ್ಲಿ ಏನಾಗಿದೆ ಇದರಲ್ಲಿ ಸುಮಾರು 56 ಲಕ್ಷ ಜನರನ್ನು ನಾವು ಗುರುತಿಸಿದ್ದೇವೆ. ಸರ್ಕಾರದ ಆದೇಶ ಏನು ಮಾಡಿದ್ದಾರೆ ಇದನ್ನು ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ಚೆನ್ನಾಗಿರುವವರೆಲ್ಲ ಈ ಕಾರ್ಡನ್ನು ತೆಗೆದುಕೊಂಡಿದ್ದಾರೆ BPL ಕೆಳಗಿರುವ ಜನರಿಗಾಗಿ ಇರುವುದು ಇದು ಅದಕ್ಕಿಂತ ಉನ್ನತವಾಗಿರುವವರು ಇದರ ಸೌಲಭ್ಯ ಪಡೆಯುತ್ತಿದ್ದಾರೆ ಇದನ್ನು ಕಡಿತಗೊಳಿಸಬೇಕೆಂದು ಸದುದ್ದೇಶ ಇಟ್ಟುಕೊಂಡು ಈ ಆದೇಶ ಹೊರಡಿಸಿರುವುದು. ಆದರೆ ಇದರಲ್ಲಿ ಏನು ಮಾಡಿದ್ದಾರೆ ಅಂದರೆ ನಿಜವಾದ ಫಲಾನುಭವಿಗಳು ಏನು BPL ಗಿಂತ ಕೆಳಗಿದ್ದಾರೆ ಅವರನ್ನೆಲ್ಲಾ ಕೈಬಿಟ್ಟಿದ್ದಾರೆ. ಮಾಡಿರತಕ್ಕಂತಹ ಕ್ರಮ ಸರಿಯಿಲ್ಲ ಇವತ್ತು ಬಹಳ ಅನ್ಯಾಯವಾಗಿ ಹಳ್ಳಿಗಳಲ್ಲಿ ರೀಸರ್ವೆ ಮಾಡಿ ಏನು ಕಾರ್ಡುಗಳನ್ನು ಸಿದ್ಧ ಮಾಡಿದ್ದಾರೋ ಆ ಕಾರ್ಡುಗಳನ್ನು ಕೂಡ ಹಂಚಲಿಕ್ಕೆ ಆಗುತ್ತಿಲ್ಲ. ಅಂತಹ ಒಂದು ಸಂದರ್ಭದಲ್ಲಿ ನೀವು ಇದನ್ನು ಸರಿಪಡಿಸಿ.

ಶ್ರೀ ಎಚ್.ಎಸ್.ಮಹಾದೇವ ಪ್ರಸಾದ್:- ಮಾನ್ಯ ಗುರುಸ್ವಾಮಿಗಳು ಯಾರಿಗೆ ಭಾಷಣ ಮಾಡುತ್ತಿದ್ದಾರೆಂಬುದು ಗೊತ್ತಾಗಲಿಲ್ಲ.

ಶ್ರೀ ಕೆ. ಬಿ. ಮಲ್ಲಿಕಾರ್ಜುನ:- ಸದಸ್ಯರು ಮಾತನಾಡುತ್ತಿರುವುದು food and civil supply ಬಗ್ಗೆ. Excise minister ನಿಮ್ಮ ಹತ್ತಿರ ಏನು ಮಾತನಾಡುತ್ತಾರೆ? ಹಳದಿ ಕಾರ್ಡಿನಲ್ಲಿ ಹೆಂಡ ಶರಾಬು ಮಾರುವ ಬಗ್ಗೆ advice ಮಾಡುತ್ತಿದ್ದಾರಾ ಸರ್ಕಾರಕ್ಕೆ?

ಶ್ರೀ ಡಿ.ಬಿ. ಚಂದ್ರೇ ಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಅದೆಲ್ಲಾ ನಿಮಗೆ ಸಂಬಂಧವಿಲ್ಲ ಬಿಡಿ. ತಾವು ಹೇಳಿದಿರಿ, ಅವರು ಮಾತನಾಡುತ್ತಿರುವ ವಿಷಯವನ್ನೆ ಚರ್ಚೆ ಮಾಡುತ್ತಿದ್ದೇವೆ ಎಂದು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಆದರೆ ಅವರು ಹಳದಿ ಕಾರ್ಡ್ ಬಗ್ಗೆ ಮಾತನಾಡುತ್ತಿದ್ದರು, ಆಗ excise minister ಬಂದು ನಿಮಗೇನು advice ಮಾಡಿರಬಹುದು ಅಂದರೆ ಹಳದಿ ಕಾರ್ಡ್ ಮೂಲಕ ಬ್ರಾಂದಿ, ಶರಾಬು ಹಂಚಿ ಎಂದು ಹೇಳಿರಬಹುದೇನೋ ಎಂದು ನಿಮಗೆ ಕೇಳಿದೆ.

ಶ್ರೀ ಡಿ.ಬಿ. ಚಂದ್ರೇ ಗೌಡ:- ನಿಮಗೆ excise ವಿಚಾರವೆಲ್ಲಾ ಗೊತ್ತಾಗುವುದಿಲ್ಲ ಸುಮ್ಮನಿರಿ, ನೀವ್ಯಾಕೆ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಕೆಲವಂ ಬಲ್ಲವರಿಂದ ತಿಳಿದು ಕೆಲವಂ ನಿಮ್ಮಂತಹವರಿಂದ ನೋಡಿ ಕಲಿತಿರುವುದು.

ಶ್ರೀ ಡಿ.ವಿ. ಸದಾನಂದಗೌಡ:- ನನ್ನ ಪ್ರಕಾರ ಸರ್ಕಾರದ ಧಾರಣೆಗಳು ಕಡಿಮೆಯಾಗಿವೆ ಕೆಲವಕ್ಕೆ, ಕೆಲವಕ್ಕೆ ಕಡಿಮೆಯಾಗಲಿಲ್ಲ, ಹಾಗಾಗಿ tax revenue collection ಇವತ್ತು ಜಾಸ್ತಿ ಮಾಡಿಸಬೇಕೋ ಅಥವಾ ಕಡಿಮೆ revenue collection ಮಾಡಿಸಬೇಕೋ ಎಂದು ಚರ್ಚೆ ಮಾಡುತ್ತಿದ್ದಾರೆ ಎಂದು ಆರಗ ಜ್ಞಾನೇಂದ್ರ ನನಗೆ ಹೇಳಿದರು.

ಶ್ರೀ ಸಿ. ಗುರುಸ್ವಾಮಿ:- ಅಧ್ಯಕ್ಷರೇ ಸಮಿತಿಯು 5ನೇ ಪುಟದಲ್ಲಿ ಬಹಳ ಸ್ಪಷ್ಟವಾಗಿ ಇದರಲ್ಲಾಗಿರುವ ಲೋಪವನ್ನು ಗುರುತಿಸಿದ್ದಾರೆ: Enquiry ಮಾಡಿ ಅದು ಈ ರೀತಿ ಇದೆ. ಅವರುಗಳು ನೀಡುವ ಮಾಹಿತಿ ಆಧಾರದ ಮೇಲೆ ಹಸಿರು ಕಾರ್ಡುಗಳನ್ನು ವಿತರಿಸುವಲ್ಲಿ ಅನೇಕ ಅರ್ಹ ಫಲಾನುಭವಿಗಳು ವಂಚಿತರಾಗಿರುವುದು ಸಮಿತಿಗೆ ಕಂಡುಬಂದಿದೆ. ಪ್ರಸ್ತುತ ಇಲಾಖೆಯವರು ಕೈಗೊಳ್ಳುವ ಈ ಕಾರ್ಯಕ್ರಮದಲ್ಲಿ ಬಡತನದ ರೇಖೆಗಿಂತ ಕೆಳಗಿರುವ ಸಾವಿರಾರುಕುಟುಂಬಗಳು ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಬಹಳ ಸ್ಪಷ್ಟವಾಗಿ ಹೇಳುತ್ತಾರೆ, ಇದನ್ನು ಸರಿಪಡಿಸುವ ಕೆಲಸ ಆಗಬೇಕಾಗಿದೆ ಈಗ. ಇವತ್ತೇನು ಗ್ರಾಮಾಂತರದಲ್ಲಿ ಸರ್ವೆ ಮಾಡಿದ್ದಾರೆ ಆ ಕಾರ್ಡುಗಳನ್ನು ಹಂಚಲು ಹೋದಾಗ ಅನೇಕ ಗಲಾಟೆಗಳಾಗುತ್ತಿದ್ದಾವೆ. ಈ ಲೋಪ ಮಾಡಿದವರು ಯಾರು? ಮತ್ತೆ ಅಲ್ಲಿಗೆ ಬರುತ್ತದೆ, ಸರ್ವೆ ಮಾಡಿದವರು ಯಾರು? ಗ್ರಾಮಪಂಚಾಯ್ತಿ ಕಾರ್ಯರ್ಶಿಗಳು, Revenue Dept. ನ Village Accountants joint survey ಮಾಡಿ ವರದಿ ಕೊಟ್ಟಿರುವುದು. ಹೇಗೆ ಕೈಬಿಟ್ಟರು? ಇಲ್ಲೇ ನಾನು ಹೇಳುತ್ತಿರುವುದು ಅಧಿಕಾರಿಗಳು ತಪ್ಪು ಮಾಡುತ್ತಾರೆ ಎಂಬುದನ್ನು, ಜಾಗ್ರತವಾಗಿ ಕೆಲಸ ಮಾಡುವುದಿಲ್ಲ ಅವರಿಗೆ punishment ಇಲ್ಲ, ಅವರಿಗೆ ಭಯ ಇಲ್ಲ ಅಧ್ಯಕ್ಷರೇ, ಮನಸೋಇಚ್ಛೆ ಮಾಡುವುದಕ್ಕೆ ಇದೇ ಒಂದು ಕಾರಣ ನೋಡಿ. ಹೀಗೆ ಆಗಿರುವುದನ್ನು ಸರಿಪಡಿಸಬೇಕು, ಇಲ್ಲದಿದ್ದರೆ ಇವತ್ತು ಬಹಳ ಅನಾಹುತ ಆಗುವುದು, ಬಡವರಿಗೆ ಅನ್ಯಾಯ ಆಗುತ್ತಿರುವುದನ್ನು ನೋಡುತ್ತೇವೆ. ಹಾಗೇ ಪುಟ 7ರಲ್ಲಿ ರಾಜ್ಯ ಸರ್ಕಾರವು 63.71 ಲಕ್ಷ ಕುಟುಂಬಗಳನ್ನು

ಬಡತನದ ರೇಖೆಗಿಂತ ಕೆಳಗಿನ ಕುಟುಂಬಗಳೆಂದು ಗುರುತಿಸಿರುತ್ತೇವೆ, ಈಗಾಗಲೇ ಇದನ್ನು ಅರ್ಧಕರ್ಧ ಕಡಿಮೆ ಮಾಡಿಬಿಟ್ಟಿದ್ದಾರೆ, ಹಾಗಾಗಿ ಬಹಳ ತೊಂದರೆಯಾಗಿದೆ ಅಧ್ಯಕ್ಷರೇ, ಇದನ್ನು ಸರಿಪಡಿಸುವ ಕೆಲಸವನ್ನು ಈಗ ಅತ್ಯಾವಶ್ಯಕವಾಗಿ ಮಾಡಬೇಕಾಗಿದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಮಾನ್ಯ ಉಪಾಧ್ಯಕ್ಷರೇ ಒಂದು ಸಣ್ಣ ವಿಷಯ ನಿಮ್ಮ ಗಮನಕ್ಕೆ ತರುತ್ತೇನೆ: ನಮ್ಮ ಊರಿನಲ್ಲೊಂದು ಹರಿಕಥೆ ನಡೆಯುತ್ತಿತ್ತು, ಎಲ್ಲರೂ ಹೋದರು, ಒಬ್ಬನೇ ಒಬ್ಬ ಕೂತಿದ್ದನಂತೆ, ಯಾಕೆ ಕುಳಿತಿದ್ದೀಯ ಅಂದರೆ ಮೈಕ್ ನನ್ನದು ಜಮಖಾನ ನನ್ನದು ಅದನ್ನು ತೆಗೆದುಕೊಂಡುಹೋಗಲು ಕೂತಿದ್ದೇನೆ ಅಂದನಂತೆ; ಹಾಗೆ ಇಲ್ಲಿ ಏನಾಗಿದೆ ಅಂದರೆ ಪಾಪ ನಮ್ಮ ಸಂಸದೀಯ ವ್ಯವಹಾರಗಳ ಸಚಿವರು ವಿಧಾನಸಭೆ ಕರೆದ ಹೊಟ್ಟೆಕಿಚ್ಚಿಗೋಸ್ಕರ ಸುಮ್ಮನೆ ಕೇಳುತ್ತಾ ಕೂತಿದ್ದಾರೆ. ಇಂತಹ ಪರಿಸ್ಥಿತಿ ಬಂದಿದೆ, ನಾವೇನು ಮಾಡುವುದು ಹೇಳಿ? ಅವರು ಜಮಖಾನ ಅಂದರೆ ಇವರು ನೀವು ಬೆಲ್ ಹೊಡೆದ ತಕ್ಷಣ ಏಳೋಣ ಎಂದು ಪಾಪ ಕಾಯುತ್ತಾ ಕೂತಿದ್ದಾರೆ. ದಯಮಾಡಿ ನೀವು ಹೊಡೆದರೆ ಸಾಕು, ಇಂತಹ ಹಿಂಸೆಗೆ ಅಸೆಂಬ್ಲಿ ನಡೆಸುತ್ತಿದ್ದಾರಲ್ಲಾ ಅರ್ಥವಾಗುತ್ತಿಲ್ಲ, ಪಾಪ ಅವರನ್ನು ನೋಡಿದರೆ ನನಗೆ ಅಯ್ಯೋ ಅನಿಸುತ್ತದೆ. ಅವರಿಗೂ ಟೈಂ ಆಗುತ್ತಾ ಇದೆ.

ಶ್ರೀ ಎಸ್.ಎಸ್.ಪಾಟೀಲ್: ಹೇಗಿದ್ದರೂ ಬರ ಇದೆ, ನಾಳೆ ಅಷ್ಟೂ ಪಾಸ್ ಮಾಡಿಕೊಂಡುಬಿಡಿ. ನಾಳೆ ಒಂದು ದಿವಸ ಅಂದುಬಿಡಿ ಆಗಬಹುದು ಎಂದು ಹೇಳಿ ಎಲ್ಲಾ ಎದ್ದುಹೋಗಿಬಿಡೋಣ.

ಶ್ರೀ ಅಪ್ಪಾಜಿ ಎಸ್.ನಾಡಗೌಡ (ಸರ್ಕಾರಿ ಮುಖ್ಯ ಸಚೇತಕರು): ಮಾನ್ಯ ಅಧ್ಯಕ್ಷರೇ, ಅದಕ್ಕೆ ಕಾರಣ ಯಾರಿಂದ ಆಗಿದೆ? ಏತಕ್ಕೆ ಧರಣಿ ಮಾಡಿದಿರಿ? ಅಲ್ಲಿ ದಾಖಲೆ ತೆಗೆಸಿ ಎಷ್ಟು ತಾಸುತನಕ ಧರಣಿ ಆಗಿದೆ, ಅದಕ್ಕಾಗಿ ಎಷ್ಟು ಗಂಟೆ ವ್ಯಯ ಮಾಡಿದ್ದೇವೆ, ಎಂಬುದನ್ನು ನೋಡೋಣ.

ಶ್ರೀ ಎಸ್.ಎಸ್. ಪಾಟೀಲ್:- ನಾನಂತೂ ಹಿಂದಿನಿಂದ ನೋಡುತ್ತಾ ಇದ್ದೇನೆ: ಇಲ್ಲಿ ಮೇಲೆ ಕೂತೂ ನೋಡಿದ್ದೇನೆ ಇಲ್ಲಿ ಒಳಗಿದ್ದೂ ನೋಡಿದ್ದೇನೆ ಈ ಮೂರು ವರ್ಷದಿಂದಲೂ ನೋಡುತ್ತಿದ್ದೇನೆ. ತಾವೇ ಹೇಳಿಬಿಡ್ರಿ ಪ್ರಾಮಾಣಿಕವಾಗಿ, ಮುಖ್ಯಮಂತ್ರಿಗಳಿದ್ದರೆ ಇಡೀ ಸದನ ತುಂಬಿರುವುದು, ರಂಗನಾಥರೇ, ಪ್ರಾಮಾಣಿಕವಾಗಿ ಹೇಳಿ.

ಶ್ರೀ ಕೆ.ಹೆಚ್. ರಂಗನಾಥ್:- ಪಾಟೀಲರೇ, ನಾನು ಯಾವಾಗಲೂ ಪ್ರಾಮಾಣಿಕವಾಗೇ ಹೇಳುವುದು, ಇಲ್ಲದಿದ್ದರೆ ಸುಮ್ಮನೆ ಬಾಯ್ಮುಚ್ಚಿ ಕುಳಿತುಕೊಳ್ಳುತ್ತೇನೆ. ನೀವು ಪ್ರಾಮಾಣಿಕವಾಗಿ ಇದನ್ನು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್:- ತಾವು ಸಹ ಹಿಂದೆ ಅಧ್ಯಕ್ಷ ಸ್ಥಾನದಲ್ಲೂ ಕೂತಿದ್ದವರು., ನೋಡಿದ್ದೀರಿ.

ಶ್ರೀ ಕೆ.ಹೆಚ್. ರಂಗನಾಥ್:- ಅದೆಲ್ಲಾ ಈಗ್ಯಾಕ್ಕೆ? ಈಗೇನಾಗಬೇಕೋ ಅದನ್ನು ಹೇಳಿ ಸ್ವಾಮಿ.

ಶ್ರೀ ಬಿ. ಸೋಮಶೇಖರ್:- ರಂಗನಾಥ್‌ರವರು ಸುಮ್ಮನೆ ಕೂತಿದ್ದಾರೆ ಅಂದರೆ ನಾವೇನಾದರೂ ಆರೋಪ ಮಾಡುತ್ತಿದ್ದರೆ ಅದಕ್ಕೆ ಅವರ ಸಮ್ಮತಿ ಇದೆ ಎಂದು ಅರ್ಥ ನಾನು ಬಹಳ ದಿವಸದಿಂದ ನೋಡುತ್ತಾ ಇದ್ದೇವೆ.

ಶ್ರೀ ಬಿ.ಎಚ್. ಬನ್ನಿಕೋಡ್:- ತಾವೆಲ್ಲಾ ತಪ್ಪು ಮಾಡಲಿ ಎಂದು ಸುಮ್ಮನೆ ಕೂತಿರ್ತಾರೆ, ತಪ್ಪು ಮಾಡಿದ ಮೇಲೆ ಅದಕ್ಕೆ ಉತ್ತರ ಹೇಳುತ್ತಾರೆ, ಅಲ್ಲಿಯ ತನಕ ಹೇಳುವುದಿಲ್ಲ.

ಶ್ರೀ ಸಿ ಗುರುಸ್ವಾಮಿ:- ಮತ್ತೆ ಮತ್ತೆ 19ರಲ್ಲಿ ಬಹಳ ಮುಖ್ಯವಾದ ವಿಷಯ ತಮ್ಮ ಗಮನಕ್ಕೆ ತರುತ್ತೇನೆ, ಮೆಕ್ಕೆಜೋಳದ ಖರೀದಿ ವಿಚಾರದಲ್ಲಿ ಆಗಿರುವುದು, ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ? ವರದಿಯಲ್ಲಿ ಹೇಳುತ್ತಾರೆ: 2000-2001 ನೇ ಸಾಲಿನಲ್ಲಿ ಚಿತ್ರದುರ್ಗ, ದಾವಣಗೆರೆ ಖರೀದಿ ಕೇಂದ್ರದಲ್ಲಿ 4 ರಿಂದ 5 ಸಾವಿರ ಟನ್ ಮೆಕ್ಕೆಜೋಳ ಖರೀದಿಯಲ್ಲಿ ನಡೆದಿರುವ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರದ ಬಗ್ಗೆ ಈ ಹಿಂದಿನ ಸಮಿತಿಯ ಚರ್ಚೆಯ ಸಂದರ್ಭದಲ್ಲಿ ಇಲಾಖಾ ಮುಖ್ಯಸ್ಥರು ಈ ಕುರಿತು ಒಂದು ತಿಂಗಳೊಳಗಾಗಿ ಕ್ರಮ ಕೈಗೊಂಡು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದರು ಆದರೆ ಒಂದು ವರ್ಷ ಕಳೆದಿದ್ದರೂ ಈ ಬಗ್ಗೆ ಜರೂರು ಕ್ರಮ ಕೈಗೊಳ್ಳದೆ ಇಲಾಖೆ ವತಿಯಿಂದ ಕಿರಿಯ ಸಹಾಯಕರಾದ ಶ್ರೀ ಜೆ ರುದ್ರಮುನಿ, ಜಿಲ್ಲಾ ವ್ಯವಸ್ಥಾಪಕರು ಹಾಗೂ ಸಹಾಯಕ ವ್ಯವಸ್ಥಾಪಕರಾದ ಶ್ರೀ ಕೆ ಬಿ ಯೋಗಾನರಸಿಂಹ ಹಾಗೂ ಶ್ರೀ ಗಂಗಾಧರಯ್ಯ... ಇವರುಗಳ ಮೇಲೆ ಇಲಾಖಾ ವಿಚಾರಣೆ ಹಾಗೂ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಿದ್ದರೂ ಅವರನ್ನು ಕರ್ತವ್ಯದಲ್ಲಿ ಮುಂದುವರಿಸಿರುವುದು, ಸಾಕ್ಷಿಗಳನ್ನು ನಾಶಪಡಿಸುವ ಸಂಭವವಿರುವುದರಿಂದ ಅವರ ವಿರುದ್ಧ ವಿಚಾರಣೆಯನ್ನು ಶೀಘ್ರವಾಗಿ ಪೂರ್ಣಗೊಳಿಸದೆ ವಿಳಂಬ ನೀತಿಯನ್ನು ಅನುಸರಿಸುತ್ತಿರುವುದರಿಂದ ಕೆಳ ಹಂತದ ನೌಕರರನ್ನು ಅವ್ಯವಹಾರದಲ್ಲಿ ತೊಡಗಿಸಲು ಉದ್ದೇಶಿಸಿದಂತಾಗುತ್ತದೆ. 4 ಸಾವಿರದಿಂದ 5 ಸಾವಿರ ಮೆಟ್ರಿಕ್ ಟನ್ ಪರ್ಚೇಸ್ ಮಾಡಿರುವುದರಲ್ಲಿ ಅವ್ಯವಹಾರವಾಗಿದೆ ಎಂದು ಹೇಳಿ ಮತ್ತೊಂದು ಸಾರಿ ಅಧಿಕಾರಿಶಾಹಿಗಳು, ಅಧಿಕಾರಿಗಳು ಮಾಡತಕ್ಕಂಥ ತಪ್ಪು, ಕಾರ್ಯಕ್ರಮ ನಿರೂಪಣೆಯಲ್ಲಿ ಆಗತಕ್ಕಂಥದ್ದು. ಹೀಗಾಗಿ ಇದಕ್ಕೆಲ್ಲಾ ನಾವೊಂದು ಬಿಗಿ ನಿಲುವನ್ನು ಮಾಡದಿದ್ದರೆ, ಒಂದು ಶಿಕ್ಷೆ ಎಂದು ಕೊಡದಿದ್ದರೆ ಅವರು ಮಾಡಿದ್ದಕ್ಕೆ ಫ್ರೈಮಾಫೇಸಿ ಕಂಡಂಥ ತಕ್ಷಣದಲ್ಲಿ ಸಸ್ಪೆನ್ಸನ್ ಮತ್ತೊಂದನ್ನು ಮಾಡದಿದ್ದರೆ ಇದನ್ನು ಯಾವ ರೀತಿ ಸರಿಪಡಿಸಲಿಕ್ಕಾಗುತ್ತೆ? ಇದೇ ಕಾರ್ಯಕ್ರಮಗಳು ಇವತ್ತು ತರುತ್ತೇನೆ. ಪೇಜ್ ನಂ.15. ನಾನು ವರದಿ ಬಿಟ್ಟು ಏನೂ ಹೇಳುವುದಿಲ್ಲ ಮಾನ್ಯ ಉಪಾಧ್ಯಕ್ಷರೇ.

ಉಪಾಧ್ಯಕ್ಷರು:- ನೀವು ರಿವ್ಯೂ ಮಾಡುತ್ತಿರುವ ಹಾಗೆ ಇದೆ.

ಶ್ರೀ ಸಿ. ಗುರುಸ್ವಾಮಿ:- ರಿವ್ಯೂ ಅಲ್ಲ ಸ್ವಾಮಿ. ಏಕೆಂದರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- ನಿಜವಾಗಿ ಸಬ್ಜೆಕ್ಟ್ ಕಮಿಟಿ ರಿಪೋರ್ಟ್‌ಗಳ ಬಗ್ಗೆ ಮನವರಿಕೆ ಮಾಡಿಕೊಡುತ್ತಿದ್ದಾರೆ. ಸ್ವಲ್ಪ ಅವರಿಗೆ ಅವಕಾಶ ಕೊಡಿ. ಮಾತನಾಡಲಿ.

ಶ್ರೀ ಶಿವಾನಂದ ಎಸ್.ಪಾಟೀಲ್:- ಈಗತಾನೇ ಮಾನ್ಯ ರಾಮಯ್ಯನವರು ನಮಗೆ ರಿವ್ಯೂ ಮಾಡಿದರು. ಈಗ ನಾವು ಅವರಿಗೆ ರಿವ್ಯೂ ಮಾಡುವುದಕ್ಕೆ ಹೋದರೆ ನೀವೇನೋ ರಿವ್ಯೂ ಮಾಡುತ್ತಿದ್ದೀರಿ ಎಂದು ಹೇಳುತ್ತೀರಿ. ಇದು ಯಾವ ನ್ಯಾಯ ಹೇಳಿ.

ಉಪಾಧ್ಯಕ್ಷರು:- ಇದೇ ಸಬ್ಜೆಕ್ಟ್ ತೆಗೆದುಕೊಂಡಿದ್ದಾರೆ. ಅವರು ಬೇರೆ ಸಬ್ಜೆಕ್ಟ್ ಬಗ್ಗೆ ಮಾತನಾಡಲಿಲ್ಲ.

ಶ್ರೀ ಸಿ. ಗುರುಸ್ವಾಮಿ:- ಏನೋ ಸಮಿತಿಯವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಆವರದಿ ಸುಮ್ಮನೆ ಚರ್ಚೆಯಾಗಿ ಹಾಗೆಯೇ ಉಳಿದುಕೊಳ್ಳಬಾರದು ಮಾನ್ಯ ಉಪಾಧ್ಯಕ್ಷರೇ. ಏನಾದರೂ ಕ್ರಮವಾಗಬೇಕು ಎನ್ನುವ ಕಾಳಜಿಗೋಸ್ಕರವಾಗಿ ಇದನ್ನು ಮಾಡುತ್ತಿರುವಂಥದ್ದು. ಮತ್ತೆ

ಪೇಜ್ ನಂ.15 ರ ಬಗ್ಗೆ ತಮ್ಮ ಗಮನಕ್ಕೆ ತರುತ್ತೇನೆ. "ರಾಜ್ಯದಲ್ಲಿರುವ ವೇ ಬ್ರಿಡ್ಜ್‌ಗಳಲ್ಲಿ ಹಾಗೂ ಸಕ್ಕರೆ ಕಾರ್ಖಾನೆಗಳಲ್ಲಿರುವ ವೇ ಬ್ರಿಡ್ಜ್‌ಗಳಲ್ಲಿ ಗರಿಷ್ಠ ಪ್ರಮಾಣದ ಅವ್ಯವಹಾರಗಳು ನಡೆಯುತ್ತಿದ್ದು. ಅದು ಕನಿಷ್ಠ ಅಲ್ಲ, ಗರಿಷ್ಠ. ಇದರಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಇದನ್ನು ತಡೆಗಟ್ಟಲು ಅಳತೆ ಮಾಡುವಂಥ ನಿಖರ ಯಂತ್ರಗಳು ಇಲ್ಲದಿರುವುದು ಇಲಾಖೆಯ ಅಸಹಾಯಕತೆಯನ್ನು ತೋರುತ್ತಿದೆ. ಪ್ರಸ್ತುತ 2003–04 ನೇ ಸಾಲಿಗೆ ಮಂಜೂರಾಗಿರುವ ಹಣದಲ್ಲಿ ನಿಖರವಾಗಿ ಅಳತೆ ಮಾಡುವಂಥ ನೂರು ಟನ್ ವೇ ಬ್ರಿಡ್ಜ್‌ಗಳನ್ನು ಲಾರಿ ಮತ್ತು ಕ್ರೇನ್ ಖರೀದಿಸಿ ರಾಜ್ಯದಲ್ಲಿರುವ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ರೈತರು ಬೆಳೆದಂಥ ಕಬ್ಬುಗಳಿಗೆ ಸುಮಾರು ಒಂದೊಂದು ಟನ್ ಕಡಿಮೆಯಾಗತಕ್ಕಂಥದ್ದು. ನಮ್ಮ ರೈತರು ಎಲ್ಲೋ ಹೊರಗಡೆ ಪ್ರೈವೇಟ್‌ನಲ್ಲಿ ತೂಕಮಾಡಿಸಿ ಅದನ್ನು ತೆಗೆದುಕೊಂಡು ಹೋದರೆ ಆ ಲಾರಿಯನ್ನೇ ಅವರು ತೆಗೆದುಕೊಳ್ಳುವುದಿಲ್ಲ. ಮತ್ತೆ ನಮ್ಮ ರೈತರು ತೆಗೆದುಕೊಂಡ ಲಾರಿಗಳನ್ನೇ ಫ್ಯಾಕ್ಟರಿಗಳ ಒಳಗೇ ಬಿಡುವುದಿಲ್ಲ. ಅಂಥ ಒಂದು ಅಕ್ರಮ ಅನ್ಯಾಯ ರೈತರಿಗೆ ನಡೆಯುತ್ತಿರುವಂಥದ್ದು. ಆ ರೀತಿ ನಡೆಯುತ್ತಿದೆ ಎಂದು ಹೇಳಿ ಮಾನ್ಯ ಅಧ್ಯಕ್ಷರು ಇದರ ಬಗ್ಗೆ ವರದಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಏನು ಕ್ರಮ ಮಾಡಬೇಕೆನ್ನತಕ್ಕದ್ದು. ರೈತರಿಗೆ ಬಹಳ ಅನ್ಯಾಯವಾಗಿರುವುದು. ಹಾಗಾಗಿ ಈ ದಿಕ್ಕಿನಲ್ಲಿ ಕೂಡ ಸರ್ಕಾರ ಚಿಂತನೆ ಮಾಡಬೇಕೆನ್ನುವುದು ನನ್ನ ಕಾಳಜಿ. ಮತ್ತೆ ನಾನು ರೂರಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ನಾನು ಹೇಳತಕ್ಕಂಥದ್ದು, ಇಲ್ಲಿ ಏನು ಈ ಒಂದು ಅಧಿಕಾರ ವಿಕೇಂದ್ರೀಕರಣ ಎಂದು ನಮ್ಮಲ್ಲಿ ಮಾಡಿದ್ದೇವೆ, ಬಹುಶ: ನಮ್ಮ ಎಲ್ಲಾ ಎಂಎಲ್‌ಎ ಗಳೂ ಕೂಡ ಅದರ ಬಗ್ಗೆ ಪ್ರಸ್ತಾಪಮಾಡಿದರು. ಅದರಲ್ಲಿ ನಾನೂ ಒಬ್ಬ. ಏನು ಅಧಿಕಾರ ವಿಕೇಂದ್ರೀಕರಣವನ್ನು ಮಾಡಿದ್ದೇವೆ, ಅದು ಗ್ರಾಮ ಪಂಚಾಯಿತಿಯೋ, ಜಿಲ್ಲಾ ಪಂಚಾಯಿತಿಯೋ ಅಥವಾ ತಾಲ್ಲೂಕು ಪಂಚಾಯಿತಿಯೋ, ಅವರು ಯಾರೂ ಕೂಡ ಎಂಎಲ್‌ಎ ಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎನ್ನುವಂಥದ್ದು ಒಂದು ಗಂಭೀರವಾದ ಆರೋಪ ನಡೆಯುತ್ತಿದೆ. ಅದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಆದರೆ ಏನಾಗಿದೆ ಎಂದರೆ ಇಲ್ಲಿ ಈ ಒಂದು ಪ್ರಜಾಪ್ರಭುತ್ವದ ವ್ಯವಸ್ಥೆ, ಈ ಸದನದ ವ್ಯವಸ್ಥೆಯಲ್ಲಿ ಆ ಬಿಲ್ ಬಂದಂಥ ಸಂದರ್ಭದಲ್ಲಿ ನಾವೆಷ್ಟೋ ಜನರು ಅದರ ಬಗ್ಗೆ ಗಮನವನ್ನು ಹರಿಸುವುದಕ್ಕಾಗುವುದಿಲ್ಲ. ಅದರ ಕಾನ್‌ಸಿಕ್ವೆನ್ಸ್ ಏನಾಗುತ್ತದೆ ಎನ್ನತಕ್ಕಂಥದ್ದು. ಹಾಗಾಗಿ ಬಹಶ: ಹಿಂದೆ ನಾವಂತೂ ಇರಲಿಲ್ಲ. ಹಿಂದೆ ಆದ ಸಂದರ್ಭದಲ್ಲಿ ಇದು ಏನು ಮೊನ್ನೆ ಮೊನ್ನೆ ನಮ್ಮ ಎಂಎಲ್‌ಎ ಗಳಿಗೆ ಕೊಡತಕ್ಕ ಬಸ್ ಪಾಸ್‌ನ ವಿಚಾರದಲ್ಲಿ ಆ ಬಿಲ್ ಬಂದಿದೆ. ಏನೂ ಸಮರ್ಪಕವಾದ ಚರ್ಚೆಯೂ ಆಗಲಿಲ್ಲ. ಒಂದೂ ಇಲ್ಲ. ಪಾಸಾಗಿ ಹೋಯಿತು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:– ಮಾನ್ಯ ಉಪಾಧ್ಯಕ್ಷರೇ, ಈಗ ಮಸೂದೆಗಳು ಬಂದಂಥ ಸಂದರ್ಭದಲ್ಲಿ ಚರ್ಚೆ ಮಾಡಬೇಕಾಗಿರುವುದು ನಮ್ಮ ಕರ್ತವ್ಯ. ಅದು ಬಂದಾಗ ನಮಗೆ ಗೊತ್ತಾಗದ ಹಾಗೆ ಪಾಸಾಯಿತು ಎಂದು ಹೇಳುವುದು ಬೇಡ. ಏನಾಗುತ್ತೆ, ಇದು ಈ ಶಾಸನಸಭೆ, ಶಾಸನಗಳನ್ನು ರಚನೆ ಮಾಡತಕ್ಕ ಮಹತ್ತರವಾದ ಜವಾಬ್ದಾರಿ ನಮ್ಮ ಮೇಲಿದೆ. ನಾವು ಆ ಕೆಲಸಗಳನ್ನು ಮಾಡಬೇಕು. ಬಂದಂಥ ಸಂದರ್ಭದಲ್ಲಿ ನಾವು ಮಾಡದೇ ನಾವು ಮಾಡುವುದಕ್ಕಾಗಲಿಲ್ಲ ಎಂದು ಹೇಳುವಂಥ ಮೆಸೇಜ್ ಇಲ್ಲಿಂದ ಹೋಗುವುದು ಬೇಡ ಎನ್ನುವುದು ನಮ್ಮ ಸ್ನೇಹಿತರಲ್ಲಿ ಮನವಿ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಮುದ್ದಹನುಮೇಗೌಡರೇ, ಚರ್ಚೆ ಮಾಡುತ್ತೇವೆ ಎಂದರೂ ಮುಗಿದುಹೋಯಿತು ಎಂದು ಪಾಸು ಮಾಡಿಕೊಂಡು ಎದ್ದು ಹೋಗುತ್ತೀರಿ. ಚರ್ಚೆ ಮಾಡಲು ಅವಕಾಶ ನೀಡುವುದಿಲ್ಲ. ಐದು ನಿಮಿಷ ಮಾತನಾಡಿ, ಹತ್ತು ನಿಮಿಷಮಾತನಾಡಿ ಎಂದು ಹೇಳುತ್ತೀರಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಹಿಂದೆ ಯಾವಾಗಲೂ ಆ ರೀತಿ ಆಗಿಲ್ಲ. ಮಾನ್ಯ ಪಾಟೀಲರೇ, ಇದು ಏನಾಗಿದೆ, ನಾವು ಚರ್ಚೆಯಲ್ಲಿ ಭಾಗವಹಿಸದೇ ಪಾಸಾಗಿರಬಹುದೇ ವಿನಹ ನಾನು ಆಡಳಿತ ಪಕ್ಷದ ಸದಸ್ಯನಾಗಿ ಚರ್ಚೆಯಾಗಬೇಕು ಎಂದು ನಾನು ಹೇಳಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಪಾಟೀಲರು 5 ನಿಮಿಷದಲ್ಲಿ ಮಾಡುತ್ತೇವೆ, 10 ನಿಮಿಷದಲ್ಲಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಈ ಸಭೆಯನ್ನು ಕರೆದ ಉದ್ದೇಶವೇ, ಈ ಬಜೆಟ್ ಅಧಿವೇಶನದಲ್ಲಿ ಚರ್ಚೆಯಾಗಬೇಕು. ಅದು ಬಿಟ್ಟು ಬಾಕಿಯದೆಲ್ಲಾ ಚರ್ಚೆ ಮಾಡಿದ್ದೀರಿ. ಧರಣಿ ಕುಳಿತಿದ್ದೀರಿ. ಹೊರಗೆ ಹೋಗಿದ್ದೀರಿ. ಇದಕ್ಕೆ ನಾವು ಹೊಣೆಯೇ? ಸರ್ಕಾರ ಹೊಣೆಯೇ? ಸರ್ಕಾರದಿಂದ ಏನು ತಪ್ಪಾಗಿದೆ ಎಂದು ಅವರು ಹೇಳುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೇ, ಬಾಕಿ ಚರ್ಚೆ ಯಾವಾಗ ಮಾಡಿದ್ದೇವೆ? ಅದರ ಬಗ್ಗೆ ತಾವು ಹೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ:- ಬಜೆಟ್ ಅನ್ನು ಚರ್ಚೆ ಮಾಡಬೇಕು, ನಂತರ ಬಿಲ್‌ಗಳನ್ನೆಲ್ಲಾ ಫಸ್ಟ್ ವೀಕ್‌ನಲ್ಲಿ ಹಾಕಿಕೊಳ್ಳುವುದು ಎಂದು ಹೇಳಿ ತೀರ್ಮಾನ ಬಿಸಿನೆಸ್ ಅಡ್ವೇಸರಿ ಕಮಿಟಿಯಲ್ಲಿ ಆಯಿತು. ಆ ತೀರ್ಮಾನದಂತೆ.....

ಶ್ರೀ ಎಸ್.ಎಸ್. ಪಾಟೀಲ್:- ಬರಗಾಲದ ಬಗ್ಗೆ ಚರ್ಚೆ ಮಾಡಿದ್ದೇವೆ. ಅದರಲ್ಲಿ ಎರಡು ದಿವಸ ಕಳೆದಿರಿ.

ಶ್ರೀ ಡಿ. ಬಿ. ಚಂದ್ರೇಗೌಡ:- ನಾವಲ್ಲ. ನೀವು ಕಳೆದಿರಿ. ಕಳೆದವರೂ ನೀವೇ. ದೂರುವವರೂ ನೀವೇ. ನಮ್ಮಲ್ಲಿ ಹೇಳುತ್ತಾರೆ. 'ಮಗು ಚಿವುಟುವವರು ನೀವೇ, ತೊಟ್ಟಿಲನ್ನು ತೂಗುವವರು ನೀವೇ' ಎನ್ನುವ ಹಾಗೆ. ಹಾಗೆ ಮಾಡಬೇಡಿ ದಯವಿಟ್ಟು.

ಉಪಾಧ್ಯಕ್ಷರು:- ಈಗ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇವತ್ತು ಎಷ್ಟು ಹೊತ್ತು ಇದ್ದರೂ ಮಾತನಾಡುವವರು ಮುಗಿಯಬೇಕು, ನಾಳೆ ಉತ್ತರ ಹೇಳಬೇಕು ಎಂದು ಇದೆ. ನಮ್ಮ ದೇನೂ ಇಲ್ಲ. ನಾನು ಎಷ್ಟು ಹೊತ್ತಾದರೂ ಕುಳಿತುಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಸದನ ಒಪ್ಪಿದರೆ ಇನ್ನು ಆ ಕಡೆಯವರು ಐದಾರು ಜನ ಮಾತನಾಡಬಹುದು.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೇ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಯಾವ ಮಂತ್ರಿಗಳು ಇಲ್ಲದಿದ್ದರೂ ಚರ್ಚೆ ಮುಗಿಯಬೇಕು ಎಂದು ಹೇಳಿದ್ದೀರಾ?

ಉಪಾಧ್ಯಕ್ಷರು:- ಆ ರೀತಿ ಎಲ್ಲಿದೆ?

ಶ್ರೀ ಎಸ್.ಎಸ್. ಪಾಟೀಲ್:- ಹಾಗಾದರೆ ಮತ್ತೆ ಏನು ಇದು? ನಾವೇನು ಮಾತ ನಾಡೋಣ. ಹೇಳಿ ನೋಡೋಣ. ನಾನು ಈಗ ಎಲ್ಲಾ ವಿಷಯದ ಮೇಲೆ ಮಾತನಾಡಬೇಕಾಗಿದೆ. ರಾತ್ರಿ ಹತ್ತು ಗಂಟೆಯವರೆಗೂ ನಾನು ಮಾತನಾಡುತ್ತೇನೆ. ನಮ್ಮವರು ಕೂಡುವುದಕ್ಕೆ ತಯಾರಾಗಿದ್ದಾರೆ. ಮಂತ್ರಿಗಳೇ ಇಲ್ಲದಿದ್ದರೆ ಏನು ಮಾಡುವುದು?

ಉಪಾಧ್ಯಕ್ಷರು:- ನೀವು ಮಾತನಾಡಿದರೆ ರೆಕಾರ್ಡ್ ಮಾಡಿಕೊಳ್ಳುವುದಕ್ಕೆ ರೆಡಿ ಇದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್:- ಇದಕ್ಕೇನು ಅರ್ಥ? ತಾವೇ ಹೇಳಿ. ಈ ರೀತಿ ಇದ್ದಾಗ ನಾವು ಮಾತನಾಡಿದರೆ ಇದು 'ಗೋರ್ಕಲ್ಲ ಮೇಲೆ ನೀರು ಸುರಿದಂತೆ' ಆ ರೀತಿಯಾಗುತ್ತದೆ. ನಮ್ಮವರು ಎಷ್ಟು ಅಭ್ಯಾಸ ಮಾಡಿಕೊಂಡು ಬಂದಿದ್ದಾರೆ.

ಉಪಾಧ್ಯಕ್ಷರು:- ಮುಂದುವರೆಸೋಣವೆಂದರೆ ಮುಂದುವರೆಸೋಣ. ಬೇಡ ಎಂದರೆ ನಿಲ್ಲಿಸೋಣ. ನನ್ನದೇನೂ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ನಾಳೆಗೆ ಮುಂದುವರಿಸಿ.

ಉಪಾಧ್ಯಕ್ಷರು:- ಆದರೆ ಇವತ್ತು ಮುಗಿಯಬೇಕೆನ್ನುವ ಒಂದು ತೀರ್ಮಾನದ ಪ್ರಕಾರ..

ಶ್ರೀ ಎಸ್.ಎಸ್. ಪಾಟೀಲ್:- ದಯವಿಟ್ಟು ನಾಳೆಗೆ ಮುಂದುವರಿಸಿ. ನಾಳೆ ಒಂದಿಷ್ಟು ಜನರಿಗೆ ಅವಕಾಶ ಕೊಡಿ.

ಶ್ರೀ ಡಿ.ವಿ.ಸದಾನಂದಗೌಡ:- ಮಾನ್ಯ ಉಪಾಧ್ಯಕ್ಷರೇ, ನಾಳೆ ಬೆಳಿಗ್ಗೆ 9 ಗಂಟೆಗೇ ಸಭೆ ಸೇರಿ 11 ಗಂಟೆಯವರೆಗೂ ಮುಂದುವರಿಸಿ. 11 ಗಂಟೆಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಲಿ.

ಶ್ರೀ ಆರಗ ಜ್ಞಾನೇಂದ್ರ:- ಏಕೆಂದರೆ ಯಾರಿಗೂ ಇಂಟರೆಸ್ಟ್ ಇಲ್ಲ. ತಮಗಂತೂ ಬೇಗ ಹೋಗ ಬೇಕೆನ್ನುವ ಆಸೆ ಇದೆ.

ಶ್ರೀ ಎಸ್.ಎಸ್. ಪಾಟೀಲ್:- ನಾಳೆ ಮಂತ್ರಿಗಳೆಲ್ಲಾ ಇರಬೇಕು. ತಾವು ಆದೇಶ ಮಾಡಿ.

ಉಪಾಧ್ಯಕ್ಷರು:- ನಾಳೆ ರಿಪ್ಲೈ ಎಂದು ಈಗಾಗಲೇ ಅಜೆಂಡಾ ಕೂಡ ಹೋಗಿದೆ. ಅದಕ್ಕೆ ಇನ್ನೂ ಮಾತನಾಡುವವರಿದ್ದರೆ ಮಾತನಾಡಲಿ. ನಾನು ಬೇಡ ಎಂದು ಹೇಳುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ಚರ್ಚೆ ಮಾಡಲು ನಾವು ಎಂಟು ದಿವಸದಿಂದಲೂ ತಯಾರು ಮಾಡಿಕೊಂಡು ಬಂದಿದ್ದೇವೆ.

ಉಪಾಧ್ಯಕ್ಷರು:- ಈ ಹಂತದಲ್ಲಿ ಏನು ಮಾಡುವುದು? ನೀವು ಕೂಡ ಇಲ್ಲಿಗೇ ಮುಕ್ತಾಯ ಮಾಡೋಣ ಎಂದರೆ ನನ್ನದೇನೂ ಅಭ್ಯಂತರವಿಲ್ಲ. ಚರ್ಚೆ ಇವತ್ತಿಗೆ ಮುಗಿಯಿತು ಎಂದು ಹೇಳಿಬಿಡೋಣ.

ಶ್ರೀ ಡಿ.ವಿ. ಸದಾನಂದಗೌಡ- ತಾವು ಶಾಸನಬದ್ಧವಾಗಿ ಮತ್ತೆ ಏನು ತೀರ್ಮಾನವಾಗಿದೆ ಅದನ್ನು ಮಾಡಬೇಕು ಎಂದು ನೀವು ರೆಡಿ ಇದ್ದೀರಿ. ಅದರಲ್ಲಿ ಎರಡು ಮಾತಿಲ್ಲ. ಆದರೂ ಕೂಡ ಇದು ಅರ್ಥಪೂರ್ಣ ಚರ್ಚೆಯಾಗುವುದಿಲ್ಲ. ಈಗ ನಾನು ಹೇಳುವಂಥದ್ದು ಎಂದರೆ ನಾಳೆ 11 ಗಂಟೆಗೆ ಅವರು ಉತ್ತರ ಕೊಡುವುದಿದ್ದರೂ ಕೂಡ ಒಂಭತ್ತೂವರೆ ಗಂಟೆಗೆ ನಾವು ಸೇರುವಂಥದ್ದು ತಾವು ಇವತ್ತು ಅದರ ಬಗ್ಗೆ ಆದೇಶ ಮಾಡಿದರೆ. 10 ಗಂಟೆಗೆ ಸೇರಿ 11 ಗಂಟೆಗೆ ಅವರು ಉತ್ತರ ಕೊಡಲಿ.

ಉಪಾಧ್ಯಕ್ಷರು:- ಮನ್ಯ ಪಾರ್ಲಿಮೆಂಟರಿ ಮಂತ್ರಿಗಳು ಒಪ್ಪಿದರೆ ನನ್ನದೇನೂ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಇಂಥ ಒಳ್ಳೆಯ ಸಲಹೆಯನ್ನು ನಾವು ಯಾವಾಗಲೂ ಇಲ್ಲ ಎಂದು ಹೇಳಿಲ್ಲ. ಒಳ್ಳೆಯ ಸಲಹೆ. ಸ್ವಾಗತಿಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ:- 10 ಗಂಟೆಗೆ ಸೇರಿ 11 ಗಂಟೆಗೆ ಚರ್ಚೆ ಮುಗಿಸೋಣ.

ಉಪಾಧ್ಯಕ್ಷರು:– ಒಂದು ಗಂಟೆಯಲ್ಲಿ ಮುಗಿಸುತ್ತೇವೆಂದರೆ ಮುಗಿಸುವುದಕ್ಕಾಗುವುದಿಲ್ಲ ನೋಡಿ.

ಶ್ರೀ ಡಿ.ವಿ. ಸದಾನಂದಗೌಡ:– ಈಗ ನಮ್ಮ ಸಂಸದೀಯ ವ್ಯವಹಾರಗಳ ಸಚಿವರು ಅದನ್ನು ಒಪ್ಪಿಕೊಂಡಿದ್ದಾರೆ. ನಾವು 10 ಗಂಟೆಗೆ ಸೇರಿಬಿಡೋಣ. 11 ಗಂಟೆ 11–15 ರವರೆಗೆ ಚರ್ಚೆ.

ಉಪಾಧ್ಯಕ್ಷರು:– ಈಗ ಅಜೆಂಡಾ 11 ಗಂಟೆಗೆ ಎಂದು ಹೋಗುಬಿಟ್ಟಿದೆ.

ಶ್ರೀ ಡಿ.ವಿ. ಸದಾನಂದಗೌಡ:– ಆಗಲಿ. ಅಷ್ಟರವರೆಗೆ ನಾವು ಮಾತನಾಡಿ ಮುಗಿಸೋಣ.

ಉಪಾಧ್ಯಕ್ಷರು:– ಅಜೆಂಡಾ ಪ್ರಕಾರ ನಾಳೆ 11 ಗಂಟೆಗೆ ಎಂದು ಹೋಗಿದೆ. ಈಗ ಮತ್ತೆ ನಾವು...

ಶ್ರೀ ಶಿವಾನಂದ ಎಸ್.ಪಾಟೀಲ್:– ಮಾನ್ಯ ಉಪಾಧ್ಯಕ್ಷರೇ, ಸಣ್ಣ ಜೋಕ್ ಹೇಳಿಬಿಡುತ್ತೇನೆ. ನಮ್ಮ ಹಳ್ಳಿಯಲ್ಲಿ ಒಂದು ದಿವಸ ನಾಟಕ ಏರ್ಪಾಡಾಗಿತ್ತು. ಅಲ್ಲಿ ಆ ಸಂದರ್ಭದಲ್ಲಿ ಜನ ಎಲ್ಲಾ ಬಂದುಕುಳಿತಿದ್ದರಂತೆ. ಆದರೆ ನಾಟಕ ಮಾಡುವವರು ಬಂದಿರಲಿಲ್ಲ. ಅಲ್ಲಿದ್ದ ಜನ ಏನೆಂದರೆಂದರೆ ನಾಟಕ ಮಾಡುವವರೂ ಇನ್ನೂ ಬಂದಿಲ್ಲ. ಯಾರನ್ನಾದರೂ ತಂದು ಮಾತನಾಡಿಸಿ ಎಂದರಂತೆ. ಯಾರೂ ಸಿಗಲಿಲ್ಲವಂತೆ. ಪಕ್ಕದ ಹಳ್ಳಿಯಲ್ಲಿ ಎಂಎಲ್‌ಎ ಇದ್ದನಂತೆ. ಅವನಿಗೆ ಹೇಳಿಕಳುಹಿಸಿದರಂತೆ. ನೋಡಪ್ಪ, ಜನ ಬಹಳ ಹೊತ್ತಿನಿಂದ ಕುಳಿತಿದ್ದಾರೆ ಯಾರೂ ಮಾತನಾಡುವವರು ಇಲ್ಲ. ನೀ ಬಾ ಎಂದರಂತೆ. ಅವನು ಬಂದನಂತೆ. ಬಂದು ನೋಡಿದರಂತೆ ಎಲೆಕ್ಷನ್‌ನಲ್ಲಿ ಒಬ್ಬರೂ ಸಿಗುವುದಿಲ್ಲ ನಾನು ಮಾತನಾಡಬೇಕಾದರೆ, ಇವತ್ತು ಮೈಕೂ ಸಿಕ್ಕಿದೆ, ಜನರೂ ಸಿಕ್ಕಿದ್ದಾರೆ, ನಾನು ಶುರುವಾದರೆ ಆಯಿತು ಎಂದು ಹೇಳಿ ಶುರುಮಾಡಿಬಿಟ್ಟ. ಶುರುಮಾಡಿದಮೇಲೆ ಜನ ಅಂದರಂತೆ, ಈ ಎಂಎಲ್‌ಎ ಬಿಡುವಂತೆ ಕಾಣುವುದಿಲ್ಲ, ಎಂದು ಹೇಳಿ ಎಲ್ಲಾರೂ ಒಬ್ಬೊಬ್ಬರೂ ಎದ್ದು ಹೊರಟುಹೋದರಂತೆ. ಹೋದಮೇಲೆ ಒಬ್ಬನೇ ಕೇಳುತ್ತಿದ್ದನಂತೆ, ಅವನು ಅಂದನಂತೆ ಎಂಎಲ್‌ಎ ಎಲ್ಲಾರು ಹೋದರೂ ನನ್ನ ಭಾಷಣ ಕೇಳುವುದಕ್ಕೆ ನೀನು ಒಬ್ಬನೇ ಏಕೆ ಕುಳಿತೆ ಎಂದನಂತೆ. ನಿನ್ನ ಪಾಳೆ ಆದಮೇಲೆ ನನ್ನ ಪಾಳೆ ಇದೆ ಎಂದನಂತೆ. ಈಗ ಅಂಥವರು ಮಾತ್ರ ಅಷ್ಟೇ ಕುಳಿತಿದ್ದೇವೆ. ಮಿಕ್ಕವರೂ ಯಾರೂ ಕುಳಿತಿಲ್ಲ.

ಉಪಾಧ್ಯಕ್ಷರು:– ಪಾಳೆ ಪ್ರಕಾರ ಮುಗಿಸಿಯೇಬಿಡೋಣ.

ಶ್ರೀ ಶಿವಾನಂದ ಎಸ್ ಪಾಟೀಲ್:– ಪಾಳೆ ಮುಗಿದಿಲ್ಲ. ಅದಕ್ಕೆ ನಾವು ಈಗ ಕುಳಿತಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ಏನಾಗುತ್ತದೆ ಎಂದರೆ ಬಿಏಸಿ ಒಳಗೆ ನಮ್ಮವರು ಮಾತನಾಡಿರುತ್ತಾರೆ. ಕೆಲವು ವಿಷಯಗಳು ಬರುತ್ತವೆ. ಈಗ ತೊಗಾಡಿಯಾ ವಿಷಯ ಬಂತು. ಇದರಿಂದಾಗಿ ಮೊನ್ನೆಯ ದಿವಸದ ಕಲಾಪ ಹೋಯಿತು. ಇನ್ನು ಒಂದು ದಿವಸ ಹೆಚ್ಚಿಗೆ ಕೊಡಬೇಕು ಅದಕ್ಕೆ ಏನು ಮಾಡಬೇಕು?

ಶ್ರೀ ಡಿ.ಬಿ. ಚಂದ್ರೇಗೌಡ:– ನಾಳೆ ದಿವಸ ಸಂಜೆ ಒಳಗೆ ಅಪ್ರೋಪ್ರಿಯೇಷನ್ ಬಿಲ್ ಅಪ್ರೂವಾ ಆಗಿ ಗವರ್ನರ್ ಅವರಿಂದ ವಾಪಸ್ ಬರಬೇಕು. ಇಲ್ಲದಿದ್ದರೆ ಒಂದನೇ ತಾರೀಖಿನಿಂದ ನಾವು ಒಂದು ರೂಪಾಯಿಯನ್ನೂ ಡ್ರಾ ಮಾಡುವ ಹಾಗೆ ಇಲ್ಲ. ತಮಗೆ ಹೊಸದಾಗಿ ನಾನೇನು ಹೇಳಬೇಕಾಗಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ಇವತ್ತು 29ನೇ ತಾರೀಖು ಇನ್ನೂ ಎರಡು ದಿವಸ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಇವತ್ತು 28ನೇ ತಾರೀಖು, ನಾಳೆ ಆ ಮನೆಗೆ ಹೋಗಬೇಕಲ್ಲಾ.

ಶ್ರೀ ಎಸ್.ಎಸ್. ಪಾಟೀಲ್:- ನಾಳೆ ಅಲ್ಲದೆ ಇನ್ನೂ 31ನೇ ತಾರೀಖಿನ ತನಕ ಇದೆ. ಅಲ್ಲಿ ನಮ್ಮವರು ಮೆಜಾರಿಟಿ ಇದೆ, ಒಪ್ಪಿಕೊಳ್ಳುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನೀವು ಇಲ್ಲಿ ಹೇಳಿದ ಹಾಗೆ ಅವರೂ ಹೇಳುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್:- ಅಲ್ಲಿ ಎಲ್ಲಾ ಮಂತ್ರಿಗಳೂ ಇರುತ್ತೀರಿ, ಏಕೆಂದರೆ ಮೆಜಾರಿಟಿ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಪಾಟೀಲ್ ಅವರೇ, ಎರಡೂ ಸದನದಲ್ಲಿ ಉತ್ತರ ಆಗಬೇಕು.

ಶ್ರೀ ಎಸ್.ಎಸ್. ಪಾಟೀಲ್:- ಏನು ಉತ್ತರ ಎಂದು ನೋಡಿದ್ದೇವಲ್ಲಾ, ಐದು ನಿಮಿಷದಲ್ಲಿ ಉತ್ತರ ಕೊಟ್ಟು ಬಿಡುತ್ತೀರಿ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ನಾಳೆ ಚರ್ಚೆ ಆಗಬಹುದು ಎಂದು ಹೇಳಿದೆ.

ಶ್ರೀ ಶಿವಾನಂದ ಎಸ್ ಪಾಟೀಲ್:- ಈಗ ಮಾನ್ಯ ಗುರುಸ್ವಾಮಿ ಅವರದ್ದು ಭಾಷಣ ಮುಗಿಸಿದ ಮೇಲೆ ಸಭೆಯನ್ನು ಅಡ್ಜರ್ನ್ ಮಾಡಿಬಿಡಿ.

ಉಪಾಧ್ಯಕ್ಷರು:- ಮತ್ತೆ ಅದೇ ಪ್ರಶ್ನೆ ಬರುತ್ತದೆ. ನಾಳೆ ಕೂಡ ಎಲ್ಲರೂ ಮಾತನಾಡುವವರು ಇದ್ದಾರೆ. ನಾಳೆ ಯಾರು ಮಾತನಾಡಬೇಕು ಎಂದು ಮೊದಲು ತೀರ್ಮಾನ ಆಗಬೇಕು. ಒಬ್ಬೊಬ್ಬರೇ ಮಾತನಾಡುವುದು ಬೇರೆ, ಎಲ್ಲರೂ ಮಾತನಾಡುವುದು ಬೇರೆ. ಮಾತನಾಡುವ ಹೊತ್ತಿನಲ್ಲಿ ಕೆಲವು ಸಮಯ ಎಲ್ಲರೂ ಮಾತನಾಡುತ್ತೀರಿ. ಇಲ್ಲಿ ನಾವು ಅಲೋ ಮಾಡುವುದು ಒಬ್ಬರಿಗೆ ಮಾತ್ರ.

ಶ್ರೀ ಎಸ್.ಎಸ್. ಪಾಟೀಲ್:- ನಾಳೆ ಮುಂಜಾನೆ ಅರ್ಧ ತಾಸು ಮಾತನಾಡಿದ ಮೇಲೆ ಉತ್ತರ್ ಕೊಡಲಿ. ಅರ್ಧತಾಸು "ಎಸ್" ಎಂದು ಹೇಳಿ ಕೈ ಎತ್ತುಕೊಂಡು ಹೋಗಿ ಬಿಡುವುದು.

ಶ್ರೀ ಡಿ.ಬಿ. ಚಂದ್ರೇಗೌಡ:- ಅಪ್ರೋಪ್ರಿಯೇಷನ್ ಬಿಲ್ ನಾಳೆ ಪಾಸ್ ಆಗಬೇಕು. ಅಪ್ರೋಪ್ರಿಯೇಷನ್ ಬಿಲ್ ಇಲ್ಲಿ ಪಾಸ್ ಆಗಿ ಅಲ್ಲಿಗೆ ಹೋಗಬೇಕು. ನಾಡಿದ್ದು 30ನೇ ತಾರೀಖು.

ಶ್ರೀ ಎಸ್.ಎಸ್. ಪಾಟೀಲ್:- ಮೇಲ್ಮನೆಯಲ್ಲಿ ಮಧ್ಯಾಹ್ನದ ಮೇಲೆ ಪಾಸ್ ಮಾಡಿಕೊಂಡು ಬನ್ನಿ. ಇಲ್ಲಿ ಮುಂಜಾನೆ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಈಗ ನಾನು ಮೊದಲೇ ಹೇಳಿದೆ. ಇದರ ಮೇಲೆ ಚರ್ಚೆ ಮಾಡಿ ಕಾಲಹರಣ ಮಾಡುವುದಕ್ಕಿಂತ ನಾಳೆ 10 ಗಂಟೆಗೆ ಸೇರೋಣ. ಒಂದು ಗಂಟೆಯೊಳಗೆ ತಾವು ಮುಗಿಸಿಕೊಡುವುದಿದ್ದರೆ 11 ಗಂಟೆಗೆ ಉತ್ತರ ಮುಗಿಸಿ, ಮಧ್ಯಾಹ್ನದ ಮೇಲೆ ಅಪ್ರೋಪ್ರಿಯೇಷನ್ ಬಿಲ್ ತೆಗೆದುಕೊಳ್ಳಬಹುದು.

ಶ್ರೀ ಡಿ.ವಿ. ಸದಾನಂದ ಗೌಡ:- ನಾಳೆ ನಿರ್ದಿಷ್ಟವಾಗಿ ಯಾರ್‍ಯಾರು ಎಷ್ಟೆಷ್ಟು ನಿಮಿಷ ಮಾತನಾಡಬೇಕು ಎಂದು ತಾವು ಸೂಚನೆಯನ್ನು ಕೊಡುತ್ತೀರಾ? ನಾವು ಅದನ್ನು ಪಾಲಿಸುವುದಕ್ಕೆ ತಯಾರಿದ್ದೇವೆ, ಎರಡನೆಯ ಮಾತಿಲ್ಲ. ಸಾಧಾರಣವಾಗಿ 11 ಗಂಟೆಗೆ ಸಭೆ ಶುರುವಾದರೆ ನಾವು 12.30 ವರೆಗೆ ನಾವು ಮುಂದುವರಿಸಿದರೆ ಆಗಬಹುದು. ಸಭೆಯನ್ನು ಎಷ್ಟು ಗಂಟೆಗೆ ಸ್ಟಾರ್ಟ್ ಮಾಡುವುದು ಹೇಳಿ? ಹತ್ತು ಗಂಟೆಗೆ ಸಭೆ ಪ್ರಾರಂಭ ಮಾಡೋಣ. ಅವರು 11.30ಕ್ಕೆ ರಿಪ್ಲೈಕೊಡಲಿಕ್ಕೆ ಪ್ರಾರಂಭ ಮಾಡಲಿ.

ಉಪಾಧ್ಯಕ್ಷರು:- ಈಗ ಯಾರ್‍ಯಾರು ಮಾತನಾಡವವರು ಎಂಬುದನ್ನು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಅದನ್ನು ನಿರ್ಣಯ ಮಾಡುವುದಕ್ಕೆ ಆಗುವುದಿಲ್ಲ. ಅವರು ಹೇಳಿದ ಸಮಯಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ಈಗಲೇ ನಿಗದಿ ಮಾಡುವುದು ಬೇಡ.

ಶ್ರೀ ಕೆ.ಎಚ್. ರಂಗನಾಥ್:- ಅವರ ಮುಖಂಡರುಗಳು ಇರುತ್ತಾರೆ, ಅವರು ಯಾರ ಲಿಸ್ಟ್ ಕೊಡುತ್ತಾರೋ ಆ ಪ್ರಕಾರ ಮಾಡಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ:- ತಮಗೆ ಗೊತ್ತಿದೆ, ಪಾರ್ಲಿಮೆಂಟಿನಲ್ಲಿ ಹತ್ತು ನಿಮಿಷದ ಮೇಲೆ ಯಾರೂ ಮಾತನಾಡುವುದಿಲ್ಲ. ಇಲ್ಲಿ ನಾವು ಒಬ್ಬೊಬ್ಬರು ಒಂದು ಗಂಟೆ, ಎರಡು ಗಂಟೆ ಮಾತನಾಡುತ್ತಾ ಹೋದರೆ ಡಿಸ್ಕಷನ್ ಪೂರ್ಣ ಆಗಬೇಕಾಗುತ್ತದೆ. ವಸ್ತು ಸ್ಥಿತಿಯನ್ನು ನಾವು ಯಾವುದನ್ನು ಅಳವಡಿಸಿಕೊಳ್ಳಬೇಕೋ ಅದನ್ನು ಅಳವಡಿಸಿಕೊಳ್ಳಬೇಕು ಮಾನ್ಯ ಪಾಟೀಲ್ ಅವರೇ.

ಶ್ರೀ ಎಸ್.ಎಸ್. ಪಾಟೀಲ್:- ಪಾರ್ಲಿಮೆಂಟ್ ಸದಸ್ಯರು ಕೆಲವರು ಅಲ್ಲಿಗೆ ಹೋಗುವುದೇ ಇಲ್ಲ. ಅದನ್ನು ತೆಗೆದುಕೊಂಡು ನಾವೇನು ಮಾಡಬೇಕು? ಅದನ್ನು ಹೇಗೆ ಇಲ್ಲಿ ಮಾತನಾಡಲು ಬರುತ್ತದೆ? ಅದು ನಮಗೆ ಬೇಕಾಗಿಲ್ಲ.

ಉಪಾಧ್ಯಕ್ಷರು:- ಈಗ ಅರ್ಧಗಂಟೆ ಬಿಜೆಪಿಯವರು, ಅರ್ಧ ಗಂಟೆ ತಾವು ಮಾತನಾಡುವುದಾದರೆ ನಾಳೆ ಸಭೆ ಮುಂದುವರಿಸೋಣ. ಅರ್ಧ ಗಂಟೆಗಿಂತ ಹೆಚ್ಚು ಹೋಗಬಾರದು. ಮತ್ತೆ ಮಾತನಾಡುತ್ತಿದ್ದೇವೆ ಎಂದರೆ ಹಾಗೆಯೇ ಮುಂದುವರಿಸಿಕೊಂಡು ಹೋಗಬಾರದು.

ಶ್ರೀ ಶಿವಾನಂದ ಎಸ್ ಪಾಟೀಲ್:- ನಾಳೆ ನೀವು ಅರ್ಧಗಂಟೆ ಆದ ಮೇಲೆ ಗಂಟೆ ಹೊಡೆಯುತ್ತೀರಿ. ಇವತ್ತೇನು ಆಯಿತು? ವೈ.ಕೆ. ರಾಮಯ್ಯನವರು ಎರಡೂವರೆ ತಾಸು ಭಾಷಣ ಮಾಡಿದರು. ನೀವು ಆರು ಸಾರಿ ಗಂಟೆ ಹೊಡೆದರೂ ಅವರು ಕೂಡಲಿಲ್ಲ. ನಾವು ಮಾತ್ರ ಅನಿವಾರ್ಯವಾಗಿ ಕೂಡಲೇಬೇಕು.

ಉಪಾಧ್ಯಕ್ಷರು:- ಮಾನ್ಯ ಆರಗ ಜ್ಞಾನೇಂದ್ರ ಅವರೂ ಸಹ ಎರಡು ಗಂಟೆ ಹತ್ತು ನಿಮಿಷ ಮಾತನಾಡಿದರೂ ನಾಮ್ಮನೆ ಕುಳಿತಿದ್ದೆವೆ. ಅದನ್ನು ನೀವು ಹೇಳುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ಅರ್ಧ ಗಂಟೆ ಸಾಲುವುದಿಲ್ಲ. ಆದರೆ ಸಾಕು ಮಾಡಿಕೊಳ್ಳಬೇಕು.

ಉಪಾಧ್ಯಕ್ಷರು:- ಹಾಗಾದರೆ ಒಂದು ಕೆಲಸ ಮಾಡೋಣ. ಒಂದು ಗಂಟೆ ನೀವು ತೆಗೆದುಕೊಳ್ಳಿ, ಒಂದು ಗಂಟೆ ಅವರು ತೆಗೆದುಕೊಳ್ಳಲಿ. ಯಾರಾದರೂ ಎಷ್ಟಾದರೂ ಮಾತನಾಡಲಿ ನಾವಂತೂ ಬಂದ್ ಮಾಡುವವನು. ಅಲ್ಲಿಗೆ ಹತ್ತು ಗಂಟೆಗೆ ಸೇರೋಣ 12 ಗಂಟೆಗೆ ಮುಗಿಸೋಣ. 12 ಗಂಟೆಯಿಂದ ರಿಪ್ಲೈ ಮಾಡುವುದು ಆಗಲಿ. ಆಗಬಹುದು ತಾನೇ? ಈಗ ಮಾನ್ಯ ಗುರುಸ್ವಾಮಿ ಅವರು ಮುಂದುವರಿಸಿ ತಮ್ಮ ಭಾಷಣ ಮುಗಿಸಿ.

ಶ್ರೀ ಸಿ. ಗುರುಸ್ವಾಮಿ:- ನಾನು ಜಿಲ್ಲಾ ಪಂಚಾಯತಿ ಮತ್ತು ಗ್ರಾಮಪಂಚಾಯತಿ ವಿಚಾರ ಪ್ರಸ್ತಾಪ ಮಾಡುತ್ತಿದ್ದೆ. ಲೋಕಲ್ ಬಾಡೀಸ್ they are the creations of this House. ಹಾಗಾಗಿ ಈ ಒಂದು ಒತ್ತಡದಲ್ಲಿ ಆ ಬಿಲ್ ಪಾಸ್ ಆಗುವ ಸಂದರ್ಭದಲ್ಲಿ ನಮ್ಮ ಮೈಂಡ್ ಅಪ್ಲೈ ಆಗಲಿಲ್ಲವೋ ಅಥವಾ ಬೇರೆ ಕಾರಣಕ್ಕೋ ಏನೂ? ಹಾಗಾಗಿ ಅದು ಪಾಸ್ ಆಗಿರತಕ್ಕದ್ದು ಎಂದು ನನ್ನ ಭಾವನೆಯನ್ನು ವ್ಯಕ್ತ ಮಾಡಿದ್ದೇನೆಯೇ ಹೊರತು ಬೇರೆ ಏನೂ ಇಲ್ಲ. ಇಲ್ಲಿ ಏನು ಆಗಿದೆ? ಜಿಲ್ಲಾ ಪಂಚಾಯತಿ ಮತ್ತು ಗ್ರಾಮ ಪಂಚಾಯತಿಯವರು though they are created by

us, ಅವರು ಏನು ತಿಳಿದುಕೊಂಡಿದ್ದಾರೆ ಆದರೆ we are supreme. ನಮ್ಮನ್ನು ಅನ್‌ಕ್ವೋಶ್ಚನಬಲ್ ಎನ್ನುವ ತರಹದಲ್ಲಿ ಅವರು ಇರತಕ್ಕದ್ದನ್ನು ನಾವು ಕಾಣುತ್ತಿದ್ದೇವೆ. ಈಗ ಇದಕ್ಕೆ ಏನು ಮಾಡಬೇಕು ಎನ್ನುವುದು ಮುಂದೆ ಬಿಟ್ಟ ವಿಚಾರ. ಇಲ್ಲಿ ಏನು ಸಂಸ್ಥೆಗಳು ಕೆಲಸ ಮಾಡುತ್ತಿವೆ? ಈ ಸಂಸ್ಥೆಗಳಲ್ಲಿ ಹಿಂದೆ ಏನು ಇತ್ತು? ಎಂಎಲ್‌ಎಗಳಿಗೆ ತಾಲ್ಲೂಕು ಪಂಚಾಯಿತಿಯಲ್ಲಿ ಎಲ್ಲಾ ಗ್ರಾಮ ಪಂಚಾಯತಿಯ ಪ್ರಧಾನರುಗಳು ತಾಲ್ಲೂಕು ಪಂಚಾಯತಿಯಲ್ಲಿ ಸದಸ್ಯರಾಗಿರುತ್ತಿದ್ದರು. ಅಲ್ಲಿಗೆ ತಾಲ್ಲೂಕು ಪಂಚಾಯತಿಯ ಸಮಿತಿಗೆ ಎಂಎಲ್‌ಎ ಅವರು ಛೇರ್ಮನ್ ಆಗಿರುತ್ತಿದ್ದರು. ಅವರ ಒಂದು ಸೂಪರ್‌ವಿಷನ್‌ನಲ್ಲಿ ಎಲ್ಲಾ ಕಾರ್ಯಕ್ರಮಗಳು ಆಗುತ್ತಿತ್ತು. ಪ್ರತಿ ಒಂದು ಕಾರ್ಯ, ಅದು ರಿವ್ಯೂ ಆಗಲಿ ಅಥವಾ ಡೆವಲಪ್‌ಮೆಂಟ್ ವರ್ಕ್ ಆಗಲೀ ಗೊತ್ತಾಗುತ್ತಿತ್ತು. ಅದು ನಡೆಯುತ್ತಿತ್ತು. ಈಗ ಏನೇನೂ ಇಲ್ಲ. ಏಕ್ಸ್ ಅಫಿಷಿಯೋ ಮೆಂಬರ್ಸ್ ಎಂದು ಮಾಡಿದ್ದಾರೆ. ಜಿಲ್ಲಾ ಪಂಚಾಯತಿ ಇರಬಹುದು, ತಾಲ್ಲೂಕು ಪಂಚಾಯತಿ ಇರಬಹುದು. ಆದರೆ ಅಲ್ಲಿ ಹೋದರೆ ನಮಗಂತೂ ಮರ್ಯಾದೆ ಇಲ್ಲ. ಅಂತಹ ಒಂದು ಪರಿಸ್ಥಿತಿ ಆಗಿ ಏನೂ ಕೆಲಸ ಕಾರ್ಯಗಳು ಆಗುತ್ತಿಲ್ಲ. ಬಹು ಮುಖ್ಯವಾದ ಇಲಾಖೆಗಳನ್ನೂ ಕೆಲಸಕಾರ್ಯಗಳನ್ನು ಕೊಟ್ಟಿದ್ದೇವೆ? ಅದು ಏನು ಜಾರಿ ಆಗುತ್ತದೆ ಏನಾಗುತ್ತಿದೆ ಎಂದು ಗೊತ್ತಾಗುವುದಿಲ್ಲ. ಮೂರು ತಿಂಗಳಿಗೆ ಮಾತ್ರ ಒಂದು ಸಲ ನಾವು ರಿವ್ಯೂ ಮೀಟಿಂಗ್ ಅನ್ನು ನಮ್ಮ ಅಧ್ಯಕ್ಷತೆಯಲ್ಲಿ ಮಾಡತಕ್ಕದ್ದನ್ನು ಮಾಡುತ್ತಿದ್ದೇವೆ. ಹಾಗಾಗಿ ಹಿಂದೆ ಇದ್ದಂತಹ ಪರಿಸ್ಥಿತಿಯಲ್ಲೇ ಆ ಎಂಎಲ್‌ಎನೇ ಆ ಒಂದು ತಾಲ್ಲೂಕು ಪಂಚಾಯತಿಗೆ ಅಧ್ಯಕ್ಷನಾಗತಕ್ಕ ದಿಕ್ಕಿನಲ್ಲಿ ಆ ಆರ್‌ಡಿಪಿಆರ್ ಸಚಿವಾಲಯದವರು, ಮಾನ್ಯ ಮಂತ್ರಿಗಳು ಅದರ ಬಗ್ಗೆ ಚಿಂತನೆ ಮಾಡಿಸಿ ಲೋಪ ಏನು ಇಲ್ಲಿ ಆಗಿದೆ, ಆ ಲೋಪವನ್ನು ಸರಿಪಡಿಸುವ ದಿಕ್ಕಿನಲ್ಲಿ ಅವರು ಪ್ರಯತ್ನ ಮಾಡಬೇಕು. ಎನ್ನತಕ್ಕಂಥದ್ದು ನನ್ನ ಒಂದು ಅನಿಸಿಕೆ. ಈ ಒಂದು ಇಲಾಖೆಗೆ ಇವತ್ತು 2003–04ನೇ ಸಾಲಿಗೆ 1513 ಕೋಟಿ ರೂಪಾಯಿಗಳ ಅನುದಾನವನ್ನು ಮಾಡಿರತಕ್ಕಂಥದ್ದು. ಈಗ ಏನು ಆಗಿದೆ ಎಂದರೆ ನಾವು ಪರ್‌ಫಾರ್ಮೆನ್ಸ್‌ನ್ನು ನೋಡಿದಾಗ ಆ ಒಂದು ಗ್ರಾಮೀಣಾಭಿವೃದ್ಧಿ ಇಲಾಖೆಯ ಸಮಿತಿಯ ವರದಿಯನ್ನು ಗಮನಿಸಿದಾಗ, ಕಳೆದ ಮೂರು ವರ್ಷಗಳಲ್ಲಿ ಏನು ಅಮೌಂಟ್ ಈ ಅಭಿವೃದ್ಧಿ ಕೆಲಸಕಾರ್ಯಗಳಿಗೆ ರಿಲೀಸ್ ಆಯಿತು? 40ರಿಂದ 50 ಪರ್ಸೆಂಟ್ ಮಾತ್ರ ಹಣ ರಿಲೀಸ್ ಆಗಿರತಕ್ಕದ್ದು. ಇಲ್ಲಿ ನಾವು ಗಂಭೀರವಾಗಿ ಗಮನಿಸಬೇಕಾದಂತಹ ವಿಚಾರ. ದಿನೇ ದಿನೇ ಡಿಕ್ರೀಸ್ ಆಗಿ ಬರುತ್ತಿದೆ? ವರ್ಷೇ ವರ್ಷೇ ಕಡಿಮೆ ಆಗಿ ಬರುತ್ತಿದೆ. 40 ರಿಂದ 50 ಪರ್ಸೆಂಟ್ ಏನು ಟಾರ್ಗೆಟ್ ಅಮೌಂಟ್‌ಗೆ ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ. ಖರ್ಚುಮಾಡಿರುವುದನ್ನು ನಾವು ಗಮನಿಸುತ್ತೇವೆ. ವರದಿಯಲ್ಲಿ ಅದನ್ನು ಸ್ಪಷ್ಟವಾಗಿ ಹೇಳಲಾಗಿದೆ. ಮತ್ತೊಂದು ವಿಚಾರ ವರದಿಯಲ್ಲಿ ಗಮನಿಸಿರತಕ್ಕದ್ದು ಏನೆಂದರೆ ಏನು ಅಮೌಂಟ್ ಸರ್ಕಾರದ ವತಿಯಿಂದ ರಿಲೀಸ್ ಆಗಿತ್ತೋ ಅದನ್ನೂ ಕೂಡ ಸಂಪೂರ್ಣವಾಗಿ ಖರ್ಚು ಮಾಡದೇ ಇರುವುದನ್ನು ಸಮಿತಿಯವರು ಗಂಭೀರವಾಗಿ ಗಮನಿಸಿದ್ದಾರೆ. ಇದೆಲ್ಲಾ ಆಗಬೇಕಾದರೆ ಕಾರಣ ಏನು? ಮತ್ತೆ ಹೇಳಬೇಕು ಎಂದರೆ ಅಧಿಕಾರಿ ವರ್ಗದವರು ಸರಿಯಾಗಿ, ಸಮರ್ಪಕವಾಗಿ ಇನ್‌ಟೈಂನಲ್ಲಿ ಅದನ್ನು ಖರ್ಚು ಮಾಡತಕ್ಕ ಜವಾಬ್ದಾರಿಯನ್ನು ನಿರ್ವಹಿಸತಕ್ಕದ್ದನ್ನು ಅವರು ಮಾಡಲಿಲ್ಲ ಎನ್ನತಕ್ಕದ್ದು ನನ್ನ ಆರೋಪ. ಅದನ್ನೇ ಇವತ್ತು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕಾಗಿರುವುದು. ಬಹಳ ಸ್ಪಷ್ಟವಾಗಿ ಹೇಳುತ್ತಾರೆ. 152.37 ಕೋಟಿ ರೂಪಾಯಿನಲ್ಲಿ ರಿಲೀಸ್ ಆಗಿರತಕ್ಕದ್ದು ಬರೇ 40 ರಿಂದ 50 ಪರ್ಸೆಂಟ್ ಅಮೌಂಟ್ ಮಾತ್ರ. 50 ಪರ್ಸೆಂಟ್ ಆಗಿದೆ. ಹಾಗಾಗಿ ಇದು ತೊಂದರೆ ಆಗಿರತಕ್ಕದ್ದು. ಇನ್ನು ಲೋಕಲ್

ಬಾಡೀಸ್ ಕೆಲಸ ಮಾಡುವುದು ಹೇಗೆ ಅವರದ್ದೇ ಆದಂತಹ ಹಣಕಾಸಿನ ವ್ಯವಸ್ಥೆ ಕ್ರೋಢೀಕರಿಸಿಕೊಳ್ಳಲು ಅವರ ಕೈಯಲ್ಲಿ ಆಗುತ್ತಿಲ್ಲ. ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಇರತಕ್ಕದ್ದು. ಕೊಡತಕ್ಕಂಥಹ ಹಣ ಕೂಡ ಕೊಟ್ಟಿಲ್ಲ. ಡೆವಲಪ್‌ಮೆಂಟ್ ಮಾಡಿ ಎಂದರೆ ಎಲ್ಲಿ ಮಾಡುವುದಕ್ಕೆ ಆಗುತ್ತದೆ? ಅದನ್ನು ನಾವು ಗಮನದಲ್ಲಿ ಇಟ್ಟುಕೊಳ್ಳಬೇಕಾದಂತಹದು. ಇನ್ನು ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯಲ್ಲಿ ಒಂದು ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತು ರೋಡುಗಳನ್ನು ನಾವು ಮಾಡಿದ್ದೇವೆ. ಅದು ಪಿಎಂಜಿಎಸ್‌ಐ ಇರಬಹುದು ಅಥವಾ ಜಿಲ್ಲಾ ಪಂಚಾಯತಿಯ ರೋಡ್ ಇರಬಹುದು. ಡಿಸ್ಟ್ರಿಕ್ಟ್ ರೋಡ್ ಇರಬಹುದು, ತಾಲ್ಲೂಕು ಅಭಿವೃದ್ಧಿ ರೋಡ್ ಇರಬಹುದು. ಯಾವುದೇ ರೋಡ್ಸ್ ಇದ್ದರೂ ಕೂಡ ಆ ರೋಡ್‌ಗಳಿಗೆ ಹಿಂದೆ ಯಾವ ರೀತಿ ಗ್ಯಾಂಗ್‌ಮನ್ ಇದ್ದು ಮೇಂಟೇನ್ ಮಾಡುತ್ತಿದ್ದರೋ ಪ್ರತಿ ದಿವಸ ಗುಂಡಿ ಮುಚ್ಚುವುದು ಅಥವಾ ತಕ್ಕೆ ತೆಗೆಯುವುದು ಅಥವಾ ಕಾಲುವೆಗಳನ್ನು ಮಾಡಿ ನೀರು ಹೋಗತಕ್ಕಂಥಹ ಕೆಲಸ ಕಾರ್ಯಗಳನ್ನು ದಿನಾ ಮಾಡಿಸುವುದನ್ನು ನಾವು ನೋಡಿರತಕ್ಕದ್ದು ಇದೆ. ಆದರೆ ಇವತ್ತು ಅಲ್ಲಿ ನೌಕರರು ಯಾರೂ ಇಲ್ಲ. ಆ ಕೆಲಸ ಆಗುತ್ತಿಲ್ಲ ಅದರ ಬದಲು ಜಿಲ್ಲಾ ಪಂಚಾಯತಿಯಲ್ಲಿ, ತಾಲ್ಲೂಕು ಪಂಚಾಯತಿಯಲ್ಲಿ ಏನು ಮಾಡುತ್ತಿದ್ದಾರೆ ಎಂದರೆ ಇದೊಂದು ದೊಡ್ಡ ಲೋಪ. ನಾವೇನು ಅನ್ಯುಯಲ್ ರಿಪೇರ್ಸ್‌ಗೆಂದು ದುಡ್ಡನ್ನು ಕೊಡುತ್ತಿದ್ದೇವೆ, ಆ ಸಂಸ್ಥೆಗಳಿಗೆ, ಆ ಹಣವನ್ನು ಹತ್ತಾರು ರೋಡ್‌ಗಳಿಗೆ ಇರತಕ್ಕಂಥಹ ಅನ್ಯುಯಲ್ ರಿಪೇರ್ಸ್‌ಗೆ ಇರತಕ್ಕಂಥ ದುಡ್ಡನ್ನು ಕ್ರೋಢೀಕರಿಸಿ ಒಂದು ರಸ್ತೆಗೆ ತೆಗೆದುಕೊಳ್ಳತಕ್ಕಂಥ ಪ್ರಯತ್ನ ಮಾಡುತ್ತಿದ್ದಾರೆ. ಕಾನೂನು ಬಾಹಿರವಾಗಿ ಮಾಡುತ್ತಿದ್ದಾರೆ. ಮಾನ್ಯ ಕಾನೂನು ಸಚಿವರಾದಂತಹ ಚಂದ್ರೇಗೌಡರು ಇದನ್ನು ಗಮನಿಸಬೇಕು. ಅನ್ಯುಯಲ್ ರಿಪೇರ್ಸ್ ಎಂದು ಹೇಳಿ ಪರ್ಟಿಕ್ಯುಲರ್ ಆಗಿ ರಸ್ತೆಗೆ ನಾವು ಕೊಟ್ಟಂತಹ ಹಣವನ್ನು ಇವರು ಎಲ್ಲವನ್ನೂ ಕ್ರೋಢೀಕರಿಸಿ ಒಂದೇ ಒಂದು ರಸ್ತೆಗೆ ಉಪಯೋಗಿಸುತ್ತಿದ್ದಾರೆ, ಯಾವುದೋ ಒಂದು ರಸ್ತೆಯನ್ನು ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಇದು ಬಹಳ ಗಂಭೀರವಾಗಿ ಇಲಾಖೆಯವರು ಕಂಟ್ರೋಲ್ ಮಾಡತಕ್ಕಂಥ ವ್ಯವಸ್ಥೆ ಆಗಬೇಕು. ಅದನ್ನು ನಾನು ಇಲ್ಲಿ ಒತ್ತಿ ಹೇಳತಕ್ಕಂಥದ್ದು.

ಇನ್ನು ಗ್ರಾಮ ಸಡಕ್ ಯೋಜನೆಯಲ್ಲಿ ಕೂಡ ಸುಮಾರು 2001 ರಿಂದ 2002–03 ರವರೆಗೆ ಬಹಳಷ್ಟು ಪ್ರಗತಿ ಕುರಿತ ಆಗಿರತಕ್ಕಂಥದ್ದನ್ನು ಅವರು ಪೇಜ್ ನಂಬರ್ 5ರಲ್ಲಿ ಸ್ಪಷ್ಟವಾಗಿ ನಮೂದಿಸಿದ್ದಾರೆ. ಅದು ಆಗಬಾರದು ಎನ್ನತಕ್ಕಂಥದ್ದು. ಇನ್ನು ಡೆವಲಪ್‌ಮೆಂಟಿನಲ್ಲಿ ಅಭಿವೃದ್ಧಿ ಹಣವನ್ನು ನಾವೇನು ಕೊಡುತ್ತಿದ್ದೇವೆ? ಸರ್ಕಾರದಿಂದ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿಗಳಿಗೆ ಕರ್ನಾಟಕ ಸರ್ಕಾರದಿಂದ ಡೆವಲಪ್‌ಮೆಂಟಲ್ ಹಣ ಕೊಡುತ್ತೇವೆ. ಆ ಡೆವಲಪ್‌ಮೆಂಟಲ್ ಹಣದಲ್ಲೂ ಕೂಡ ಸುಮಾರು 140 ಕೋಟಿ ರೂಪಾಯಿ ಹಣ ಕೊರತೆ ಕೊಟ್ಟಿರತಕ್ಕದ್ದು. ನಾವು ಕಡಿಮೆ ಕೊಟ್ಟಿದ್ದೇವೆ. ಒನ್ಸ್ ಎಗೇನ್. ಇದು ಆಗಬಾರದು ಎನ್ನತಕ್ಕದ್ದನ್ನು ನಾವು ಗಮನಿಸಬೇಕಾದಂತಹ ಬಹು ಮುಖ್ಯವಾದಂತಹ ವಿಚಾರ ಆಗಿದೆ. ಕುಡಿಯುವ ನೀರಿನ ನಿರ್ವಹಣೆ ವಿಚಾರದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ನೋಡಿಲ್ಲ. ಎನ್‌ಆರ್‌ಡಬ್ಲ್ಯೂಎಸ್ ಮತ್ತು ಎಆರ್‌ಡಬ್ಲ್ಯೂಎಸ್‌ಗೆ ವಾರ್ಷಿಕ ಮೇಂಟನೆನ್ಸ್‌ಗೆ ಎಂಟು ಸಾವಿರ ರೂಪಾಯಿಗಳ ಅನುದಾನ ನೀಡುತ್ತಿದ್ದು, ಎಂಡಬ್ಲ್ಯೂಎಸ್‌ಗೂ ವಾರ್ಷಿಕ ನಿರ್ವಾಹಣೆಗೆ ಮೂರು ಸಾವಿರ ರೂಪಾಯಿಗಳಷ್ಟು ಅನುದಾನ ನಾವು ಕೊಡುತ್ತೇವೆ. ಒಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಷ್ಟು ಬೋರ್‌ವೆಲ್‌ಗಳಿವೆಯೋ, ಆ ಬೋರ್‌ವೆಲ್‌ಗಳ ಪೈಕಿ ಒಂದೊಂದು ಬೋರ್‌ವೆಲ್‌ಗೂ ಆರು

ನೂರು ರೂಪಾಯಿಗಳ ಲೆಕ್ಕದಲ್ಲಿ ಸರ್ಕಾರದ ವತಿಯಿಂದ ಅವರಿಗೆ ನಾವು ನೀರಿನ ಸೌಲಭ್ಯ ಒದಗಿಸುತ್ತಿದ್ದೇವೆ. ಆದರೆ, ಇವೊತ್ತು ಬಹಳಷ್ಟು ಬೋರ್‌ವೆಲ್‌ಗಳು ಸ್ವಚ್ಛತೆಯಿಂದಿರುವುದಿಲ್ಲ, ಸಕಾಲದಲ್ಲಿ ರಿಪೇರಿಯಾಗುವುದಿಲ್ಲ. ಈ ರೀತಿ ಬಹಳಷ್ಟು ತೊಂದರೆಗಳುಂಟಾಗುತ್ತಿದೆ. ಇಷ್ಟೆಲ್ಲಾ ದುಡ್ಡು ಒದಗಿಸುತ್ತಿದ್ದೇವಲ್ಲ, ಇದನ್ನು ಖರ್ಚು ಮಾಡುವವರು ಯಾರು? ನಮಗೆ ತಿಳಿದಿರುವ ಮಟ್ಟಿಗೆ ಇವೆಲ್ಲವನ್ನೂ ನಿರ್ವಹಣೆ ಮಾಡುವುದಕ್ಕೋಸ್ಕರ ಒದಗಿಸುತ್ತಿದ್ದ ಹಣವನ್ನು ಜಿಲ್ಲಾ ಪರಿಷತ್‌ನವರು ಖರ್ಚು ಮಾಡುತ್ತಿದ್ದರು. ನಂತರ, ಜಿಲ್ಲಾ ಪರಿಷತ್‌ನವರು ರೆಸಲ್ಯೂಶನ್ ಪಾಸ್ ಮಾಡಿ ಅದನ್ನು ತಾಲ್ಲೂಕು ಪಂಚಾಯಿತಿಗೆ ವಹಿಸಿದರು. ನಿರ್ದಿಷ್ಟವಾಗಿ ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿ ಏನಾಗಿದೆಯೆಂದರೆ, ತಾಲ್ಲೂಕು ಪಂಚಾಯಿತಿಯಲ್ಲಿ ಒಂದು ರೆಸಲ್ಯೂಶನ್ ಪಾಸ್ ಮಾಡುವ ಮೂಲಕ ಅದನ್ನು ಗ್ರಾಮ ಪಂಚಾಯಿತಿಗೆ ವಹಿಸಿದ್ದಾರೆ. ಇಲ್ಲಿ ನಾವು ಗಮನಿಸಬೇಕಾದ ಬಹಳ ಮುಖ್ಯವಾದ ವಿಚಾರವೇನೆಂದರೆ, 8,000, 3,000, 3,300, 600 ರೂಪಾಯಿ ಈ ಹಣವನ್ನು ಮಾತ್ರ ತಾಲ್ಲೂಕು ಪಂಚಾಯಿತಿಯವರೇ ಇಟ್ಟುಕೊಂಡಿದ್ದಾರೆ. ರಿಪೇರಿ ಮಾಡುವ ಅಧಿಕಾರವನ್ನು ತಾಲ್ಲೂಕು ಪಂಚಾಯಿತಿಯವರು ಗ್ರಾಮ ಪಂಚಾಯಿತಿಗೆ ವಹಿಸಿದರೇ ಹೊರತು ಇದಕ್ಕಾಗಿ ಸರ್ಕಾರದಿಂದ ಬಂದಂಥ ಹಣವನ್ನು ವರ್ಗಾವಣೆ ಮಾಡಲಿಲ್ಲ. ಈ ತಹಲ್‌ವರೆವಿಗೂ ವರದಿ ತರಿಸಿ, ಪರಿಸ್ಥಿತಿ ಏನಾಗಿದೆಯೆಂಬುದು ಗೊತ್ತಾಗುತ್ತದೆ. 'ರಿಪೇರಿ ಮಾಡಿ, ರಿಪೇರಿ ಮಾಡಿ' ಎಂದರೆ ಹೇಗೆ ಮಾಡುವುದು? ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿರುವ ಅನುದಾನ ಸಾಲದಾಗಿದೆ. ಅದರಲ್ಲೂ ಶೇಕಡ ಐವತ್ತರಷ್ಟು ಕಡಿತಗೊಳಿಸುತ್ತೇವೆ. ಅಂತಹುದರಲ್ಲಿ ನಿರ್ವಹಣೆಯನ್ನು ಗ್ರಾಮ ಪಂಚಾಯಿತಿಗೆ ವಹಿಸಿ ಇವೊತ್ತು ಗ್ರಾಮೀಣ ಪ್ರದೇಶದಲ್ಲಿ ಬೋರ್‌ವೆಲ್ ತೋಡಿದರೆ ಪೈಪ್ ಇಲ್ಲವೆನ್ನುತ್ತಾರೆ. ಅದನ್ನು ಬಿಚ್ಚುವುದಕ್ಕೆ ಕಷ್ಟ ರಿಪೇರಿ ಮಾಡುವುದಕ್ಕೆ ಬಹಳ ಅನಾನುಕೂಲವಾಗಿದೆ. ಹಾಗಾಗಿ ಇವೊತ್ತು ಲೋಪ ಏನಾಗಿದೆ, ಕರಾರುವಕ್ಕಾಗಿ ಸರ್ಕಾರದಿಂದ ಆದೇಶ ಹೋಗಿ, ಏನು ಹಣ ಕೊಡುತ್ತೇವೆ, ವಾರ್ಷಿಕ ಮೇಂಟನೆನ್ಸ್‌ನ ಖರ್ಚು ಏನಿದೆ, ಇದನ್ನು ಸಮರ್ಪಕವಾಗಿ.... ಅದರಲ್ಲೂ ನಿರ್ದಿಷ್ಟವಾಗಿ ಜಿಲ್ಲಾ ಪಂಚಾಯಿತಿಗೆ ವಹಿಸಿದರೆ ಸೂಕ್ತವಾಗುತ್ತದೆಂಬುದು ನನ್ನ ಅಭಿಪ್ರಾಯವಾಗಿದೆ. ಹಾಗಾಗಿ, ಗ್ರಾಮ ಪಂಚಾಯಿತಿಗೆ ಏನು ವಹಿಸಿಕೊಟ್ಟಿದ್ದೀರಿ, ಇದರಿಂದ ಜನರಿಗೆ ಬಹಳ ತೊಂದರೆಯುಂಟಾಗುತ್ತಿರುವುದನ್ನು ನೋಡುತ್ತಿದ್ದೇವೆ. ಹಳ್ಳಿ-ಹಳ್ಳಿಗಳಿಗೆ ಹೋದರೆ ಇದೇ ಸಮಸ್ಯೆ ಎದುರಾಗುತ್ತದೆ. ಈಗ ಬರಗಾಲವಿದ್ದು, ಇಂತಹ ಪರಿಸ್ಥಿತಿಯಲ್ಲಿ ಜನರಿಗೆ ಕುಡಿಯಲು ನೀರಿನ ಸೌಲಭ್ಯ ಒದಗಿಸಿಕೊಡುವ ಸಂದರ್ಭದಲ್ಲಿ ತಾವು ಇದನ್ನು ಸರಿಪಡಿಸಿಕೊಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ.

ಇನ್ನು ಶಿಕ್ಷಣದ ವಿಚಾರದಲ್ಲಿ ಸಕಾಷ್ಟು ಚರ್ಚೆ ಮಾಡಿದ್ದಾರೆ. ಆರು ವರ್ಷದಿಂದ ಹದಿನೈದು ವರ್ಷದವರೆಗೆ ಕಡ್ಡಾಯವಾಗಿ ಉಚ್ಚಿತ ಶಿಕ್ಷಣ ನೀಡಬೇಕೆಂಬುದು ಸಂವಿಧಾನದಲ್ಲಿರುತ್ತದೆ. ಸುಮಾರು ಹದಿನೈದು ಸಾವಿರ ಶಿಕ್ಷಕರುಗಳು, ಬಿಲ್ಡಿಂಗ್ಸ್ ಕಡಿಮೆ ಇರತಕ್ಕಂಥಾದ್ದು, ಎಲ್ಲದಕ್ಕಿಂತ ಹೆಚ್ಚಾಗಿ ಅತಿ ಆದ್ಯತೆ ನೀಡುವುದು ಬಹಳ ಮುಖ್ಯ ಮಕ್ಕಳು ಆಯಾ ವಯಸ್ಸಿನಲ್ಲಿ ಏನನ್ನು ಕಲಿಯಬೇಕೋ ಅದನ್ನು ಕಲಿಯದಿದ್ದರೆ ಇನ್ನ್ಯಾವುದೋ ವಯಸ್ಸಿಗೆ ಬಂದಾಗ ಇನ್ನ್ಯಾವುದೋ ದಿಕ್ಕಿಗೆ ಹೋಗುವುದನ್ನು ನಾವು ಕಾಣುತ್ತೇವೆ. ಮಕ್ಕಳಲ್ಲಿ 6 ರಿಂದ 15 ವರ್ಷದವರೆಗೆ ಕಲಿಯುವ ಆಸಕ್ತಿ ಇರುತ್ತದೆ. ಅವರಿಗೆ ಆ ಸಮಯದಲ್ಲಿ ಅಗತ್ಯವಾಗಿರುವ ಮೂಲಭೂತ ಸೌಕರ್ಯಗಳನ್ನು ಸರ್ಕಾರ ಒದಗಿಸಿಕೊಡದಿದ್ದರೆ ಹದಿನೈದು ವರ್ಷಗಳಾದ ಬಳಿಕ ಅವರು ಕಲಿಯುವುದಕ್ಕೆ ಸಾಧ್ಯವಾಗುವುದಿಲ್ಲವೆಂಬುದು ಎಲ್ಲರಿಗೂ

ಗೊತ್ತಿರುವ ವಿಚಾರ. ಅವರ ದಿಕ್ಕು ಬೇರೆಯಾಗುತ್ತದೆ, ಭವಿಷ್ಯ ಬೇರೆಯಾಗುತ್ತದೆ. ಶಿಕ್ಷಣ ಇಲಾಖೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನಿವೆ, ಅದರಲ್ಲೂ ಶಾಲಾ ಕೊಠಡಿಗಳನ್ನು ನಿರ್ಮಿಸುವ ವಿಚಾರದತ್ತ ಗಮನಹರಿಸಬೇಕು. 'ಮಾಹಿತಿ ಸಿಂಧು' ಕಾರ್ಯಕ್ರಮದಡಿ ಕೋಟ್ಯಾಂತರ ರೂಪಾಯಿಗಳನ್ನು ಇವೊತ್ತು ಖರ್ಚು ಮಾಡುತ್ತಿರುವುದು ಬಹಳ ಸಂತೋಷ ತರುವ ಸಂಗತಿಯಾಗಿದೆ. ಸದರಿ ಕಾರ್ಯಕ್ರಮವನ್ನು ಗ್ರಾಮಾಂತರ ಪ್ರದೇಶಗಳಿಗೆ ತೆಗೆದುಕೊಂಡು ಹೋಗುವ ಮೂಲಕ ಮಕ್ಕಳನ್ನು ಹೆಚ್ಚು ವಿದ್ಯಾವಂತರನ್ನಾಗಿ ಮಾಡಲು ಮಾನ್ಯ ಮುಖ್ಯಮಂತ್ರಿಯವರು ರೂಪಿಸಿರುವ ಈ ಕಾರ್ಯಕ್ರಮ ಮೆಚ್ಚತಕ್ಕಂಥದ್ದಾಗಿದೆ. ಆದರೆ, ಅಲ್ಲಿ ಏನಾಗುತ್ತಿದೆ? ಕಳೆದ ಹದಿನೈದು ದಿವಸಗಳಿಂದ ಈ ಕಾರ್ಯಕ್ರಮದಡಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ, ನನ್ನ ಮತಕ್ಷೇತ್ರವಾದ ಚಾಮರಾಜನಗರದಲ್ಲೂ ಸ್ಟ್ರೈಕ್ ಮಾಡಿದ್ದಾರೆ. ನಾನು ಹಾಗೂ ಸಚಿವರಾದ ರಾಜುಗೌಡರು ಅಲ್ಲಿಗೆ ಭೇಟಿ ಕೊಟ್ಟು ಈ ಕುರಿತು ಸರ್ಕಾರದ ಗಮನ ಸೆಳೆಯುವುದಾಗಿ ಅವರಿಗೆ ತಿಳಿಸಿ ಬಂದಿದ್ದೇವೆ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಅವರು ಸ್ಟ್ರೈಕ್ ಮಾಡುತ್ತಿದ್ದಾರೆ. ಅವರ ಲೀಗಲ್ ಡಿಮ್ಯಾಂಡ್ಸ್ ಆದರೂ ಏನು? ಸರ್ಕಾರದ ವತಿಯಿಂದ ಯಾವುದೋ ಕಂಪ್ಯೂಟರ್ ಸಂಸ್ಥೆಗೆ ಮಾಹಿತಿ ಸಿಂಧು ಕಾರ್ಯಕ್ರಮ ಜಾರಿಗೊಳಿಸಲು ವಹಿಸಿಕೊಟ್ಟಿದ್ದೇವೆ. ಇದಕ್ಕಾಗಿ ಅವರು ಶಿಕ್ಷಕರನ್ನು ಅಪಾಯಿಂಟ್‌ಮೆಂಟ್ ಮಾಡಿಕೊಂಡಿದ್ದಾರೆ. ಕಂಪ್ಯೂಟರ್‌ಗಳು ಇರುವ ಕಡೆಗಳಲ್ಲೆಲ್ಲಾ ಶಿಕ್ಷಕರುಗಳಿದ್ದಾರೆ. ಆದರೆ ಸಂಬಳವೇನು? ಸರ್ಕಾರದ ವತಿಯಿಂದ ಕಂಪ್ಯೂಟರ್ ಸಂಸ್ಥೆ ಪಡೆಯುತ್ತಿರುವು ಒಂದು ಸಂಬಳವಾದರೆ, ಅಂದರೆ, ಒಬ್ಬ ವ್ಯಕ್ತಿ ಆರು ಸಾವಿರ ರೂಪಾಯಿಗಳೋ, ಎಷ್ಟೋ ಸಂಬಳ ಪಡೆಯುತ್ತಿರುವುದು. ಆದರೆ, ಕಂಪ್ಯೂಟರ್ ಸಂಸ್ಥೆಯವರು ಶಿಕ್ಷಕರಿಗೆ ನೀಡುತ್ತಿರುವುದು ಕೇವಲ ಎರಡು ಸಾವಿರ ರೂಪಾಗಳು ಸಂಬಳ! ಇನ್ನು ನಾಲ್ಕು ಸಾವಿರ ರೂಪಾಯಿ. ಇದು ಸರ್ಕಾರದಲ್ಲೂ ಉಳಿದಂತಲ್ಲ, ಯಾರೋ ತಿಂದು ತೇಗತಕ್ಕಂಥ, ಯಾರೋ ಶ್ರಮಪಡದೆ ಸುಮ್ಮನೆ ಹಣ ವ್ಯಯವಾಗುತ್ತಿರುವುದನ್ನು ಗಮನಿಸುತ್ತಿದ್ದೇವೆ. ಸುಮಾರು ಆರು ತಿಂಗಳುಗಳಿಂದ ಆ ಶಿಕ್ಷಕರುಗಳಿಗೆ ಕೊಡುತ್ತಿರುವ ಎರಡು ಸಾವಿರ ರೂಪಾಯಿಗಳ ಸಂಬಳವನ್ನೂ ಕೊಟ್ಟಿಲ್ಲ, ಹಾಗಾಗಿ, ಹಲವಾರು ಡಿಮ್ಯಾಂಡ್ಸ್ ಇಟ್ಟುಕೊಂಡು ಇವೊತ್ತು ಅವರು ಜಿಲ್ಲಾ ಕೇಂದ್ರಗಳಲ್ಲಿ ಧರಣಿ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ತಾವು ಕಳಕಳಿಯಿಂದ ತಂದಿರುವ ಸ್ಕೀಮು ಮೆಚ್ಚತಕ್ಕಂಥಾದ್ದು, ಬಹಳ ಉಪಯುಕ್ತವಾದುದಾಗಿದೆ. ಆದರೆ, ಬಹಳ ಲೋಪಯೋವಾಗುತ್ತಿದೆ. ತಾವು ಸರ್ಕಾರದ ವತಿಯಿಂದ ಆರು ಸಾವಿರ ರೂಪಾಯಿಗಳನ್ನು ಕಂಪ್ಯೂಟರ್ ಸಂಸ್ಥೆಗೆ ನೀಡುತ್ತಿದ್ದರೂ ಅವರು ನೇಮಿಸಿರುವ ಶಿಕ್ಷಕರುಗಳಿಗೆ ಸಂಬಳ ನೀಡುತ್ತಿಲ್ಲ. ಶಿಕ್ಷಕರುಗಳಿಗೆ ಅವರು ಮಾನಸಿಕ ಹಿಂಸೆ ನೀಡುತ್ತಿದ್ದಾರೆ. ದಯಮಾಡಿ ಇದರ ಬಗ್ಗೆ ತಾವು ಗಂಭೀರವಾಗಿ ಗಮನಿಸಬೇಕು. ಅಲ್ಲದೆ, ಕಂಪ್ಯೂಟರ್ ಕೊಠಡಿಗಳನ್ನು ಸ್ವಚ್ಛಗೊಳಿಸಲು ಹಾಗೂ ಹವಾ ನಿಯಂತ್ರಣ ವ್ಯವಸ್ಥೆ ಅಳವಡಿಸಿಕೊಳ್ಳಲು ಹಣ ನೀಡಿದ್ದರೂ ಸಮರ್ಪಕವಾಗಿ ಬಳಸಿಕೊಳ್ಳುತ್ತಿಲ್ಲ. ಇದರ ಬಗ್ಗೆ ತಾವು ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಬಿಸಿಯೂಟ. ಈ ಕಾರ್ಯಕ್ರಮವನ್ನು ನಿಜವಾಗಿಯೂ ನಾನು ಸ್ವಾಗತಿಸುತ್ತೇನೆ. ಇವೊತ್ತು ಎಷ್ಟೋ ಮಕ್ಕಳಿಗೆ ಊಟಕ್ಕೆ ಬಹಳ ತೊಂದರೆಯಿರುವುದನ್ನು ಒಪ್ಪುತ್ತೇನೆ. ಬಹುಶ: ಈ ಕಾರ್ಯಕ್ರಮವನ್ನು ತಾವು ಜಾರಿಗೊಳಿಸುವ ಸಂದರ್ಭದಲ್ಲಿ ಚರ್ಚೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡು ಈಗಲೂ ಕೂಡ ಕೆಲವು ಶಾಲೆಗಳಲ್ಲಿ ಗ್ಯಾಸ್ ಕೊಟ್ಟಿದ್ದೀರಿ, ಸ್ಟೋವ್ ಇಲ್ಲ, ಕೆಲವರಿಗೆ ಸ್ಟೋವ್ ಕೊಟ್ಟಿದ್ದೀರಿ ಪಾತ್ರೆಗಳು ಇಲ್ಲ, ಕೆಲವರಿಗೆ ಅಕ್ಕಿ, ಆಯಿಲ್ ಕೊಟ್ಟಿದ್ದೀರಿ

ಆದರೆ ಈರುಳ್ಳಿ, ಮೆಣಸಿನಕಾಯಿ ಇನ್ನು ಏನೇನು ಸಾಮಾನು ಬೇಕೋ ಅದನ್ನು ಕೊಟ್ಟಿಲ್ಲ. ಮಕ್ಕಳ ಕೈಯಲ್ಲಿ ಸೌದೆ ಹೊತ್ತುಕೊಂಡು ತರತಕ್ಕದ್ದನ್ನು ಪೇಪರ್‌ನಲ್ಲಿ ನೋಡುತ್ತೇವೆ. ಪ್ರಾರಂಭದಲ್ಲಿ ಇಂಥ ಲೋಪಗಳು ಆಗುತ್ತದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ, ಆದರೆ ಪೂರ್ವಭಾವಿಯಾಗಿ ಇವೆಲ್ಲದರ ಸಿದ್ಧತೆಯನ್ನು ಮಾಡಿಕೊಂಡು, ಶಿಕ್ಷಣ ಇಲಾಖೆಗೆ ಇದನ್ನು ಆಗುವುದಿಲ್ಲ, ರೆವಿನ್ಯೂ ಇಲಾಖೆಗೆ ಮಾಡಿಸಿದ್ದೀರಿ. ಇದು ಸರಿಯಾಗಿ ಮಾಡತಕ್ಕದ್ದು ಆಗಬೇಕು. ಆದರೂ ಈ ಜಾತಿಯತೆ ವ್ಯವಸ್ಥೆಯಲ್ಲಿ ಹತ್ತಾರು ಸಾವಿರ ವರ್ಷಗಳಿಂದ ಬಂದಿರುವ ವ್ಯವಸ್ಥೆಯಲ್ಲಿ ಕೆಲವು ಲೋಪಗಳನ್ನು ಕಾಣುತ್ತಿದ್ದೇವೆ. ಆದರೂ ಕೂಡ ಇದು ಆಪ್‌ಷನಲ್, ಉಳ್ಳವರು ಯಾರಿದ್ದಾರೆ ಅವರು ಊಟ ಮಾಡಿದರೆ ಮಾಡಬಹುದು, ಮಾಡದಿದ್ದರೆ ಅವರಿಗೇನು ಕಡ್ಡಾಯ ಮಾಡತಕ್ಕ ಅವಶ್ಯಕತೆ ಇಲ್ಲ. ಬಡತನದಲ್ಲಿ ಯಾರಿದ್ದಾರೆ, ಊಟಕ್ಕೆ ಯಾರಿಗೆ ಕಷ್ಟವಾಗಿದೆ ಅವರುಗಳು ಇದರಲ್ಲಿ ಭಾಗವಹಿಸಿ ತೆಗೆದುಕೊಳ್ಳತಕ್ಕ ಆಪ್‌ಷನಲ್ ಆಗಿ ಮಾಡತಕ್ಕದ್ದು ಸೂಕ್ತವೆಂಬುದು ನನ್ನ ಅಭಿಪ್ರಾಯ. ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ. ಈ ರೀತಿ ಬಿಸಿ ಊಟದ ಕಾರ್ಯಕ್ರಮವನ್ನು ತಂದಿರುವ ಬಗ್ಗೆ ಕೆಲವರು ಕ್ರಿಟಿಸೈಜ್ ಮಾಡಬಹುದು, ಆದರೆ ಈ ಕಾರ್ಯಕ್ರಮ ಉಪಯುಕ್ತವಾಗಿದೆ. ಇದನ್ನು ಮುಂದುವರೆಸಬೇಕು. ಆದರೆ ಆಗಿರುವ ಲೋಪದೋಷಗಳನ್ನು ತಾವು ಸರಿಪಡಿಸುವ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕು ಎಂಬುದು ನನ್ನ ಒಂದು ಮಹದಾಸಿಯಾಗಿದೆ. SSA ಎಂದು ಒಂದು ಸ್ಕೀಮ್ ಬಂದಿದೆ. ಅದರಲ್ಲಿ ಕೋಟ್ಯಾಂತರ ಹಣ ಬರುತ್ತದೆ. ಸರ್ವಶಿಕ್ಷಣ ಅಭಿಯಾನ ಎಂದು ದುಡ್ಡು ಬರತಕ್ಕದ್ದು. ಅಲ್ಲೇನಾಗಿದೆಯೆಂದರೆ, SDMC ಕಮಿಟಿಯೆಂದು ಮಾಡಿದ್ದೇವೆ. ಟಾಯ್ಲೆಟ್ ಇರಬಹುದು, ನೀರಿನ ವ್ಯವಸ್ಥೆ ಇರಬಹುದು, ಅಲ್ಲಿ ಏನು ಮಾಡಿದ್ದಾರೆಂದರೆ ರ್‍ಯಾಶನಲಿಸ್ಟಿಕ್ಟ್ ಆಗಿ ಮಾಡಿ ಟಾಯ್ಲೆಟ್ ಕಟ್ಟಿದರೆ ಏನು ಖರ್ಚಾಗಬಹುದು, ಅಥವಾ ನೀರನ್ನು ತಂದು ಕೊಡಬೇಕಾಗಿದ್ದರೆ ಏನು ಪೈಪ್‌ಲೈನ್ ಆಗಬೇಕು, ಎಲ್ಲಿಂದ ತರಬೇಕಾಗುತ್ತದೆ, ಎಷ್ಟು ಕಾಸ್ಟ್ ಆಗಬೇಕಾಗುತ್ತದೆ, ಎಂಬ ಬಗ್ಗೆ ಕ್ಯಾಲಿಕುಲೇಷನ್ ಇಲ್ಲ. ಒಂದು ಸ್ಕೂಲ್‌ಗೆ ಹತ್ತು ಸಾವಿರ ರೂಪಾಯಿ ಎಂದು ಹೇಳುತ್ತಾರೆ, ನೀರಾವರಿಗೋಸ್ಕರ 25 ಸಾವಿರವೆಂದು ಫಿಕ್ಸ್ ಮಾಡಿಬಿಟ್ಟಿದ್ದಾರೆ, ಅದು ಕಡಿಮೆಯಾಗಬಹುದು ಅಥವಾ ಜಾಸ್ತಿ ಯಾಗಬಹುದು, ಅದರ ಇಹಪರವನ್ನು ಯೋಚನೆ ಮಾಡಿ ಅದರ ಪ್ರಪೋಸಲ್‌ನ್ನು ತೆಗೆದುಕೊಳ್ಳುವುದು ಆಗಬೇಕು, ಇಲ್ಲದಿದ್ದರೆ ದುರ್ವ್ಯವಹಾರವಾಗಿಬಿಡುತ್ತದೆ, ಇದನ್ನು ಇಂಪ್ಲಿಮೆಂಟ್ ಮಾಡುವ ಅಧಿಕಾರವನ್ನು SDMC ಕಮಿಟಿಗೆ ಕೊಟ್ಟಿದ್ದೇವೆ. ಬಹಳ ಸಂತೋಷ. ಆದರೆ SDMC ಕಮಿಟಿಯಲ್ಲಿ ಒಬ್ಬ ಇಂಜಿನಿಯರ್ ಆಗಲಿ, ಟೆಕ್ನಿಕಲ್ ವ್ಯಕ್ತಿಯಾಗಲಿ ಸೂಪರ್‌ವಿಜನ್ ಮಾಡಿ ಬಿಲ್ಲು ಮಾಡಲು ಯಾರೂ ಇಲ್ಲ. ಇದನ್ನು ಸರ್ಕಾರ ಗಮನಿಸಬೇಕು. ನೂರಾರು ಕೋಟಿ ರೂಪಾಯಿ ಹಣವೇನೋ ಬರುತ್ತದೆ, ಆದರೆ ಅದನ್ನು ವ್ಯವಸ್ಥಿತವಾಗಿ ಜನರಿಗೆ ಮುಟ್ಟಿಸುವುದರಲ್ಲಿ ಲೋಪವಾಗಿದೆ, ಬಿಲ್ಲು ಮಾಡತಕ್ಕದ್ದಾಗಲಿ, ಎಸ್ಟಿಮೇಟ್ ಮಾಡತಕ್ಕದ್ದಾಗಲಿ, ಸೂಪರ್‌ವಿಜನ್ ಮಾಡತಕ್ಕದ್ದಾಗಲಿ ಯಾರೂ ಇಲ್ಲ, ಜಿಲ್ಲಾಪಂಚಾಯಿತಿಯವರೂ ಮಾಡುವುದಿಲ್ಲ, ತಾಲ್ಲೂಕು ಪಂಚಾಯಿತಿಯವರೂ ಮಾಡುವುದಿಲ್ಲ, ಅದರ ಬಗ್ಗೆ ಪ್ರಶ್ನೆ ಮಾಡಿದರೆ ಸಮರ್ಪಕವಾದ ಉತ್ತರ ಬರುತ್ತಿಲ್ಲ, ಆದ್ದರಿಂದ ಇದನ್ನು ಗಮನಿಸಬೇಕೆಂದು ಹೇಳುತ್ತೇನೆ. ತೋಟಗಾರಿಕೆ ವಿಚಾರದಲ್ಲಿ ನುಸಿ ರೋಗದ ಬಗ್ಗೆ ಈಗಾಗಲೆ ಚರ್ಚೆ ಮಾಡಿದ್ದೇವೆ, ವರದಿಯಲ್ಲಿ ಸಹ ಅದರ ಬಗ್ಗೆ ಹೇಳಿದ್ದಾರೆ. ನುಸಿ ರೋಗ, ಕಪ್ಪು, ತಲೆ ಹುಳುವಿನ ವಿಚಾರದಲ್ಲಿ ಏನೇನೂ ಕಾರ್ಯಕ್ರಮವಿಲ್ಲ, ದಯಮಾಡಿ ಅದರ ಬಗ್ಗೆ ಕಾರ್ಯಕ್ರಮವನ್ನು ಹಾಕಬೇಕೆಂದು ಸರ್ಕಾರದ ಗಮನಸೆಳೆಯುತ್ತೇನೆ. ಕೆ.ಇ.ಬಿ.

ವಿಚಾರದಲ್ಲಿ ಸಾಕಷ್ಟು ತೊಂದರೆ ರೈತರಿಗೆ ಇದೆ. ಕಳೆದ ಮೂರು ವರ್ಷದಿಂದ ಬರ ಇದೆ. ಆದ್ದರಿಂದ ಪಂಪುಸೆಟ್ಟುಗಳೇ ಓಡುತ್ತಿಲ್ಲ, ನೀರಿಲ್ಲ, ಆದ್ದರಿಂದ ಕೊನೆಯ ಪಕ್ಷ ಎರಡು ಮೂರು ವರ್ಷಕ್ಕಾದರೂ ರಿಯಾಯಿತಿ ಕೊಡತಕ್ಕದ್ದು, ಮೊನ್ನೆ ಮೊನ್ನೆ ಪತ್ರಿಕೆಯಲ್ಲಿ ಬಂದಿದೆ, ಎಗ್ಸಿಕ್ಯುಟೀವ್ ಇಂಜಿನಿಯರ್‌ರವರು ಪೇಪರ್‌ನಲ್ಲಿ ಸ್ಟೇಟ್‌ಮೆಂಟ್ ಕೊಡುತ್ತಾರೆ, ಅರಿಯರ್ಸ್‌ನ್ನು ಕಟ್ಟದಿದ್ದರೆ ಕುಡಿಯುವ ನೀರಿಗೆ ಒಂದನೇ ತಾರೀಖಿನಿಂದ ವಿದ್ಯುತ್‌ನ್ನು ಕಟ್ ಮಾಡುತ್ತೇವೆಂದು ಪತ್ರಿಕೆಗಳಲ್ಲಿ ಸ್ಟೇಟ್‌ಮೆಂಟ್‌ನ್ನು ಅಧಿಕಾರಿಗಳು ಕೊಡುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನಹರಿಸಿ ಏನು ಈ ಸಮಸ್ಯೆ ಇದೆ ಇದನ್ನು ದಯಮಾಡಿ ಸರಿಮಾಡಬೇಕೆಂದು ಹೇಳುತ್ತೇನೆ. ' ಇನ್ನು ಕೊನೆಯದಾಗಿ ಸ್ತ್ರೀ ಶಕ್ತಿ ವಿಚಾರದಲ್ಲಿ ಅಪಾರವಾಗಿ ಎಲ್ಲರೂ ಹೇಳುತ್ತಿದ್ದಾರೆ. ಸ್ತ್ರೀ ಶಕ್ತಿ ಚೆನ್ನಾಗಿ ಬೆಳೆದಿದೆ, ಸಂಘಟನೆಯಾಗಿದೆ, ಆದರೆ ಇಲ್ಲಿ ಒಂದು ಲೋಪವನ್ನು ಕಾಣುತ್ತಿರತಕ್ಕದ್ದು ರಿವಾಲ್ವಿಂಗ್ ಫಂಡ್ ಎಂದು ಐದು ಸಾವಿರವನ್ನು ಏ, ಬಿ, ಸಿ ಎಂದು ಗ್ರೇಡ್ ಮಾಡಿದ್ದೇವೆ, ಆ ಗ್ರೇಡ್‌ನಲ್ಲಿ ಬಂದವರಿಗೆ ಮಾತ್ರ ಕೊಡುತ್ತಿದ್ದೇವೆ, ಅವರು ಸಂಘಟನೆಯಾಗಿದ್ದಾರೆ, ಅವರಿಗೆ ಇನ್‌ಫ್ರಾಸ್ಟಕ್ಚರ್ಸ್‌ನ್ನು ಕೊಡತಕ್ಕ ಕೆಲಸ ಸರ್ಕಾರದಿಂದ ಆಗಬೇಕು. ಹಣಕಾಸಿನ ನೆರವನ್ನು ಕೊಟ್ಟಾಗ ಅವರು ಆರ್ಥಿಕವಾಗಿ ಅಭಿವೃದ್ಧಿ ಹೊಂದತಕ್ಕ ದಿಕ್ಕಿನಲ್ಲಿ ಆಗುತ್ತದೆ, ಸ್ತ್ರೀ ಶಕ್ತಿ ಏನು ವ್ಯವಸ್ಥಿತವಾಗಿ ಬೆಳೆದಿದೆ, ಸಂಘಟನೆಯಾಗಿದೆ ಅದಕ್ಕೆ ಆರ್ಥಿಕವಾಗಿ ಪ್ರಬಲತೆಯನ್ನು ಕೊಟ್ಟರೆ ನಿಜವಾಗಿಯೂ ಇಲ್ಲಿ ಉತ್ತಮವಾದ ಕೆಲಸವಾಗುತ್ತದೆ, ಆ ದಿಕ್ಕಿನಲ್ಲಿ ಸರ್ಕಾರ ಈ ಬಜೆಟ್‌ನಲ್ಲಿ ಯೋಚನೆ ಮಾಡಬೇಕು ಎಂದು ಹೇಳುತ್ತಾ, ತಾವು ಬೆಲ್ಲನ್ನು ಬಾರಿಸಿದ್ದೀರಿ, ಅದ್ದರಿಂದ ನಾನು ನನ್ನ ಮಾತನ್ನು ಮುಂದುವರೆಸಲು ಇಷ್ಟ ಪಡುವುದಿಲ್ಲ, ಇನ್ನೂ ಹಲವಾರು ವಿಚಾರಗಳನ್ನು ಮಾತನಾಡಬೇಕಾಗಿದೆ, ಆಧರೆ ಸಮಯ ಇಲ್ಲದೇ ಇರುವುದರಿಂದ ಎಷ್ಟು ಸಾಧ್ಯವೋ ಅಷ್ಟನ್ನು ಮಂಡಿಸಿದ್ದೇನೆ, ಇದು ಕೇವಲ ಚರ್ಚೆ, ರೆಕಾರ್ಡ್ ಆಗತಕ್ಕದ್ದಲ್ಲ, ಇದರ ಬಗ್ಗೆ ಗಮನಹರಿಸಿ ಏನಾದರು ಸ್ವಲ್ಪ ಫಲ ನೀಡಿದರೆ, ಆ ದಿಕ್ಕಿನಲ್ಲಿ ಚಿಂತನೆ ಮಾಡಿ ನಾವು ಇಲ್ಲಿ ಬಂದು ಮಾತನಾಡಿದ್ದಕ್ಕೆ ಸಾರ್ಥಕವಾಗುತ್ತದೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ನಾಳೆ ಪ್ರಶ್ನೋತ್ತರದ ಕಾರ್ಯಕ್ರಮ ಇಲ್ಲ. ಈಗಾಗಲೇ ನಾಳೆಯ ಕಾರ್ಯಕ್ರಮದ ಪಟ್ಟಿಯಲ್ಲಿ ಸದನವು ನಾಳೆ 11 ಗಂಟೆಗೆ ಸಮಾವೇಶಗೊಳ್ಳುವುದು ಎಂದು ತಿಳಿಸಿ ಬಿತ್ತರಿಸಲಾಗಿದೆ, ಆದರೆ ಸದನದ ಒಟ್ಟಾರೆ ಅಭಿಪ್ರಾಯದ ಮೇರೆಗೆ ಸದನವು ನಾಳೆ ಬೆಳಿಗ್ಗೆ 11 ಗಂಟೆಯ ಬದಲಾಗಿ 10 ಗಂಟೆಗೆ ಸಮಾವೇಶಗೊಳ್ಳುತ್ತದೆ, ಎರಡು ಗಂಟೆಗಳ ಕಾಲ ಚರ್ಚೆ ನಡೆದ ನಂತರ ಸರ್ಕಾರದಿಂದ ಉತ್ತರ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಇವತ್ತಿನ ಪ್ರಶ್ನೆಗಳೆಲ್ಲಾ ಏನಾಯಿತು? ಮುಂದೆಹೋಯಿತೇ?

ಉಪಾಧ್ಯಕ್ಷರು:- ಮುಂದೆ ಹೋಯಿತು, ಲೇ ಮಾಡುತ್ತೇವೆ. ಈಗ ಸದನವನ್ನು ನಾಳೆ 10 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 7 ಗಂಟೆ 35 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಹ: ದಿನಾಂಕ:29ನೇ ಜುಲೈ 2003ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

+ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.